# ಸ್ತೋತ್ರಮಾಲಾ

## ಭಾಗ - ೧

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

# ಅಧ್ಯಾತ್ಮಪ್ರೇಮಿಗಳಿಗೆ ಉಪಯುಕ್ತವಾದ ಗ್ರಂಥಗಳು

೧. **ಭಗವಚ್ಛರಣಸ್ತೋತ್ರ:** ಬ್ರಹ್ಮಾನಂದಸ್ವಾಮಿಗಳವರ ಕೃತಿ. ಅಧ್ಯಾತ್ಮತತ್ತ್ವವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕೆನ್ನುವವರು ಯಾವಯಾವ ಸಾಧನಗಳನ್ನು ಅಳವಡಿಸಿ ಕೊಂಡಿರಬೇಕೆಂಬುದನ್ನೂ ಭಗವಂತನಿಗೆ ಶರಣುಹೊಗುವದು ಬಹುಮುಖ್ಯವಾದ ಸಾಧನವೆಂಬುದನ್ನೂ ಪ್ರಕಟಿಸುವ ಸಣ್ಣ ಪ್ರಕರಣವಿದು. ಸಾಧಕರಿಗೆ ಅಮೂಲ್ಯವಾದದ್ದು, ಮೂಲಶ್ಲೋಕಗಳು, ಭಾವಾರ್ಥವಿವರಣೆ - ಇಷ್ಟೂ ಇವೆ.

೨. **ಮುಕುಂದಮಾಲಾ :** ಕುಲಶೇಖರಾಚಾರ್ಯರಿಂದ ವಿರಚಿತವಾದ ಈ ಭಕ್ತಿ ಪ್ರಧಾನಸ್ತೋತ್ರವು ವಿಷ್ಣುಭಕ್ತರಿಗೆಲ್ಲ ಪ್ರಿಯವಾಗಿರುತ್ತದೆ. ಭಗವದ್ಭಕ್ತಿಯ ಮರ್ಮವನ್ನು ವಿವರಿಸುವ ಈ ಪದ್ಯಗಳು ಹಾಡಿ ನಲಿಯಲು ಯೋಗ್ಯವಾಗಿವೆ. ಮೂಲ, ಅರ್ಥ, ಪಾಠಾಂತರಗಳನ್ನೂ ಕೊಟ್ಟಿದೆ.

೩. **ವೇದಾಂತಬಾಲಬೋಧೆ :** ಶಂಕರಾಚಾರ್ಯಕೃತ `ಪ್ರಾತಃಸ್ಮರಣಸ್ತೋತ್ರ' ಕ್ಕೆ ಸಂಭಾಷಣೆಯ ರೂಪದಲ್ಲಿ ವಿಸ್ತಾರವಾದ ಕನ್ನಡ ವಿವರಣೆಯನ್ನು ಕೊಟ್ಟಿದೆ. ವೇದಾಂತ ವಿಚಾರವನ್ನು ಪ್ರಾರಂಭಿಸುವವರಿಗೆ ಅನುಕೂಲವಾಗಿದೆ.

೪. **ವೇದಾಂತಪ್ರವೇಶಿಕೆ :** ಆಚಾರ್ಯಕೃತ `ಅದ್ವೈತಪಂಚರತ್ನ' ಸ್ತೋತ್ರದ ವಿವರಣೆಯಿದೆ. ಆತ್ಮನು ಸಂಸಾರಧರ್ಮರಹಿತನು, ಪ್ರಪಂಚವು ಅವನಿಗಿಂತ ಬೇರೆಯಿಲ್ಲ - ಎಂಬುದನ್ನು ಮನಗಾಣಿಸುವದು.

೫. **ಶ್ರೀರಾಮಗೀತೆ :** ಅಧ್ಯಾತ್ಮರಾಮಾಯಣದಿಂದ ಆರಿಸಿದ ಭಾಗವಿದು. ಶ್ರೀರಾಮನು ಲಕ್ಷ್ಮಣನಿಗೆ ಮಾಡಿದ ಅಮೋಘವಾದ ಉಪದೇಶವು ಇದರಲ್ಲಿದೆ. ಇದರಲ್ಲಿ ಮಹಾವಾಕ್ಯವಿಚಾರವೂ, ಪರಮಾತ್ಮನಲ್ಲಿ ಪ್ರಪಂಚವನ್ನೆಲ್ಲ ಲಯಗೊಳಿಸಿಕೊಳ್ಳುವ ಸಾಧನ ಕ್ರಮವೂ - ಉಕ್ತವಾಗಿದೆ. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದೂ ಪ್ರತಿಪಾದಿಸಿದೆ.

೬. **ಆತ್ಮವಿದ್ಯಾವಿಲಾಸ :** ಶ್ರೀ ಸದಾಶಿವೇಂದ್ರಸರಸ್ವತಿಗಳೆಂಬ ಯೋಗಿವರ್ಯರು ಬರೆದಿರುವ ಪ್ರಕರಣವಿದು. ಆತ್ಮಸಾಕ್ಷಾತ್ಕಾರವನ್ನು ಹೊಂದಿರುವವರ ಉತ್ತಮಮನಸ್ಥಿತಿಯನ್ನು ಇಲ್ಲಿ ವರ್ಣಿಸಿರುತ್ತದೆ. ಮುಮುಕ್ಷುಗಳಿಗೆ ಅನುಸಂಧಾನಕ್ಕೆ ತಕ್ಕದ್ದು. 'ಸದಾಶಿವಪಂಚರತ್ನ' ಎಂಬ ಸ್ತೋತ್ರವನ್ನೂ, ಕೆಲವು ಕೀರ್ತನೆಗಳನ್ನೂ - ಇದರ ಜೊತೆಗೆ ಸೇರಿಸಿದೆ.

೭. **ದಕ್ಷಿಣಾಮೂರ್ತಿಸ್ತೋತ್ರ:** ನಮ್ಮಗಳ ಆತ್ಮನು ಅದ್ವಿತೀಯಕೂಟಸ್ಥ ನಿರ್ವಿಶೇಷಚೈತನ್ಯಸ್ವರೂಪನು ಎಂಬುದನ್ನು ಹೃದಯಂಗಮವಾಗಿ ವಿವರಿಸಿದೆ. ಮೂಲ ಶ್ಲೋಕ, ವಿವರಣೆಗಳಿವೆ.

೮. **ಮೋಹಮುದ್ಗರ :** `ಭಜಗೋವಿಂದಸ್ತೋತ್ರ'ವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ದ್ವಾದಶಮಂಜರಿ, ಚತುರ್ದಶಮಂಜರಿ' - ಎರಡೂ ಇವೆ.

ನಮ್ಮ ಪುಸ್ತಕಗಳ ಈಗಿನ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿರಿ.

---

**ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.**

ಅಧ್ಯಾತ್ಮಗ್ರಂಥಾವಳಿ

# ಸ್ತೋತ್ರಮಾಲಾ

(ಅನುಸ್ಮೃತಿ, ಗಜೇಂದ್ರಮೋಕ್ಷ, ಭೀಷ್ಮಸ್ತವರಾಜ,

ಹರಿಶರಣಾಷ್ಟಕ, ಆದಿತ್ಯಹೃದಯ)

## ಭಾಗ - ೧

ಕ್ರಮಾಂಕ ೧೬೮

*ಪ್ರಕಾಶಕರು :*

**ಅಧ್ಯಾತ್ಮಪ್ರಕಾಶಕಾರ್ಯಾಲಯ**

# ಪ್ರಕಾಶಕರ ಬಿನ್ನಹ

ಶ್ರೀಶಂಕರಾಚಾರ್ಯರವರ ಸುಪ್ರಸಿದ್ಧ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಪ್ರತಿಪಾದಿಸಿರುವ ವೇದಾಂತಸಿದ್ಧಾಂತಸಮ್ಮತವಾದ ಪರಬ್ರಹ್ಮತತ್ತ್ವ ಮತ್ತು ಅದರ ಪ್ರಾಪ್ತಿಗೆ ಉಪಾಯಗಳಾದ ಜ್ಞಾನ, ಉಪಾಸನೆ, ಕರ್ಮಗಳೆಂಬ ಸಾಧನಗಳು - ಇವುಗಳ ಮರ್ಮವನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಮೂಲಗ್ರಂಥಗಳ ಅನುವಾದ, ವಿವರಣೆಗಳ ಸಹಿತ ಬರೆಯಿಸಿ ಪ್ರಕಟಿಸುವದೇ ಕಾರ್ಯಾಲಯದ ಮುಖ್ಯೋದ್ದೇಶವಾಗಿರುತ್ತದೆ. ಈ ದಿಶೆಯಲ್ಲಿ ವೇದಾಂತಸಿದ್ಧಾಂತ - ಸಾಧನ ಪರವಾದ ಕೆಲವು ಸ್ತೋತ್ರಗಳನ್ನೂ ಪುರಾಣೇತಿಹಾಸಗಳಿಂದ ಆರಿಸಿ ವಿವರಣೆ ಸಮೇತ ಈಗಾಗಲೇ ಪ್ರಕಟಿಸಲಾಗಿದೆ.

ಈ ಗ್ರಂಥದಲ್ಲಿ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ತಮ್ಮ ಪೂರ್ವಾಶ್ರಮದಲ್ಲಿಯೇ ಬರೆದು ಕಾರ್ಯಾಲಯದ ಮೂಲಕ ಪ್ರಕಟಿಸಿದ್ದ ಭೀಷ್ಮಸ್ತವರಾಜ, ಹರಿಶರಣಾಷ್ಟಕ - ಎಂಬ ಕೃತಿಗಳ ಜೊತೆಗೆ ಅನುಸ್ಮೃತಿ, ಗಜೇಂದ್ರಮೋಕ್ಷ, ಆದಿತ್ಯಹೃದಯ- ಎಂಬ ಕೃತಿಗಳನ್ನೂ ಅನುವಾದಸಮೇತ ಕಾರ್ಯಾಲಯದ ಪಂಡಿತರಾದ ಅಧ್ಯಾತ್ಮವಿದ್ಯಾಪ್ರವೀಣ ವೇ || ಎಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳವರಿಂದ ಬರೆಯಿಸಿ ಸೇರಿಸಿ ಪ್ರಕಟಿಸಲಾಗಿದೆ. ಬಿಡಿಬಿಡಿಯಾಗಿ ಪ್ರಕಟಿಸುವದಕ್ಕಿಂತಲೂ ಮುದ್ರಣವೆಚ್ಚ ಮಾರಾಟಗಳ ದೃಷ್ಟಿಯಿಂದ ಒಂದೇ ರಟ್ಟಿನಲ್ಲಿ ಪ್ರಕಟಿಸುವದು ಹೆಚ್ಚು ಅನುಕೂಲವೆಂತ ಕಂಡುಬಂದುದರಿಂದ ಈ ಮೇಲ್ಕಂಡ ಐದು ಕೃತಿಗಳನ್ನೂ ಸೇರಿಸಿ "ಸ್ತೋತ್ರಮಾಲಾ-ಭಾಗ-೧" ಎಂಬ ಹೆಸರಿನಿಂದ ಈಗ ಹೊರತರಲಾಗಿದೆ. ವಾಚಕರಿಂದ ಹೆಚ್ಚಿನ ಪ್ರೋತ್ಸಾಹವು ದೊರೆತಂತೆಲ್ಲ ಸಿದ್ಧಾಂತಸಾಧನಪರವಾದ ಇನ್ನೂ ಕೆಲವು ಸ್ತೋತ್ರಗಳನ್ನು ಭಾಗಭಾಗವಾಗಿ ಪ್ರಕಟಿಸುವ ಇಚ್ಛೆಯ ನಮಗೆ ಇದೆ.

1975ರಲ್ಲಿ ಮೊದಲ ಬಾರಿಗೆ ಪ್ರಕಟವಾಗಿದ್ದ ಈ ಗ್ರಂಥವನ್ನು ಮತ್ತೊಮ್ಮೆ ಪರಿಶೋಧಿಸಿ ಈಗ ಪ್ರಕಟಿಸಲಾಗಿದೆ. ವಾಚಕರು ಈ ಗ್ರಂಥವನ್ನು ಬರ ಮಾಡಿಕೊಂಡು ಪ್ರೋತ್ಸಾಹಿಸಬೇಕಾಗಿ ಬೇಡಿದೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ, ಇತಿ,

ಹೊಳೆನರಸೀಪುರ,

ತಾ: 20-1-1999 ಪ್ರಕಾಶಕರು

# ಪೀಠಿಕೆ

## ಪಂಚರತ್ನಗಳು

ಭಗವಾನ್ ವೇದವ್ಯಾಸಮಹರ್ಷಿಗಳು ರಚಿಸಿರುವ ಮಹಾಭಾರತದಲ್ಲಿರುವ (೧) ಭಗವದ್ಗೀತೆ (೨) ವಿಷ್ಣುಸಹಸ್ರನಾಮ (೩) ಭೀಷ್ಮಸ್ತವರಾಜ (೪) ಅನುಸ್ಮೃತಿ (೫) ಗಜೇಂದ್ರಮೋಕ್ಷ - ಈ ಐದನ್ನೂ ಪಂಚರತ್ನಗಳೆಂದು ಬಲ್ಲವರು ಕರೆಯುತ್ತಾರೆ. ಇವುಗಳಲ್ಲಿ ಕೊನೆಯದಾದ ಗಜೇಂದ್ರಮೋಕ್ಷವು ಮಹಾಭಾರತದಲ್ಲಿ ಕಂಡುಬರುವದಿಲ್ಲ. `ಪಂಚರತ್ನಗೀತೆ' ಎಂಬ ಹೆಸರಿನಿಂದ ಗೋರಖಪುರದ ಗೀತಾಪ್ರೆಸ್‌ನವರು ಪ್ರಕಟಿಸಿರುವ ಪುಸ್ತಕದಲ್ಲಿಯೂ ಬೊಂಬಾಯಿನ ಶ್ರೀ ವೆಂಕಟೇಶ್ವರ ಸ್ಟೀಮ್ ಪ್ರೆಸ್‌ನವರು ಪ್ರಕಟಿಸಿರುವ `ಪಂಚರತ್ನಗೀತಾ' ಎಂಬ ಗ್ರಂಥದಲ್ಲಿಯೂ ಗಜೇಂದ್ರಮೋಕ್ಷವೆಂಬ ಭಾಗವನ್ನು ವಾಮನಪುರಾಣದಿಂದ ಆರಿಸಿಕೊಂಡಿದೆ. `ಗಜೇಂದ್ರಮೋಕ್ಷ' ಕಥೆಯು ಶ್ರೀಮದ್ಭಾಗವತದಲ್ಲಿಯೂ ಇದೆ. ಆದ್ದರಿಂದ ಈ ಪಂಚರತ್ನಗಳು ಒಂದೆಡೆಯಲ್ಲಿಯೇ ದೊರಕದಿದ್ದರೂ ಒಟ್ಟಿನಲ್ಲಿ ವ್ಯಾಸರ ಕೃತಿಗಳಾಗಿದ್ದು ಪುರಾಣಗಳಲ್ಲಿ ದೊರಕುತ್ತವೆ. ಆದ್ದರಿಂದ ಆಸ್ತಿಕರಿಗೆ ಇವು `ಪಂಚರತ್ನ' ಗಳೆಂಬುದರಲ್ಲಿ ಸಂದೇಹವಿಲ್ಲ.

## ೧. ಅನುಸ್ಮೃತಿ

`ಅನುಸ್ಮೃತಿ' ಯೆಂಬ ಹೆಸರಿನ ಈ ಅಧ್ಯಾಯವು ಈಗ ಅಚ್ಚಾಗಿರುವ ಎಲ್ಲಾ ಮಹಾಭಾರತಪುಸ್ತಕಗಳಲ್ಲಿಯೂ ಇಲ್ಲವಾದರೂ ಇದರಲ್ಲಿರುವ ವಿಷಯಗಳು ಮಾತ್ರ ತುಂಬ ಮನನೀಯವಾಗಿವೆ. ಮನುಷ್ಯನು ಸಾಯುವಾಗ ಯಾವ ಸ್ಮರಣೆಯಲ್ಲಿರುವನೋ ಅದೇ ಜನ್ಮವು ಅವನಿಗೆ ಮುಂದೆ ಬರುವದೆಂದು ಶಾಸ್ತ್ರಗಳು ಹೇಳುತ್ತಿರುವವು. ಆದ್ದರಿಂದ ಮರಣಕಾಲಕ್ಕೆ ಮನುಷ್ಯನು ಭಗವಚ್ಚಿಂತನೆಯನ್ನು ಮನಸ್ಸಿಗೆ ತಂದುಕೊಳ್ಳಲು ಅಭ್ಯಾಸಮಾಡಿಕೊಂಡಿರಬೇಕು. ಈ ದೃಷ್ಟಿಯಿಂದ ಈ ಸ್ತೋತ್ರವು ವಯಸ್ಸಾದವರಿಗೆ ಅನುಸಂಧಾನಕ್ಕೆ ಹೆಚ್ಚು ಯೋಗ್ಯವಾಗಿದೆ. ಒಂದು ವೇಳೆ ಮರಣಕಾಲದಲ್ಲಿ ಸ್ಮೃತಿತಪ್ಪಿದರೂ ಸಮೀಪದಲ್ಲಿರುವ ಬಂಧುಬಾಂಧವರು ಈ ಸ್ತೋತ್ರವನ್ನು ಅವನಿಗೆ ಸದ್ಗತಿಯಾಗುವದಕ್ಕಾಗಿ ಪಠಿಸಬಹುದಾಗಿದೆ.

ಇನ್ನು ಈ ಸ್ತೋತ್ರದಲ್ಲಿ ಶ್ರೀಮನ್ನಾರಾಯಣನ ಮಹಿಮೆಯೂ ಆತನ ಸರ್ವವ್ಯಾಪಕತ್ವವೂ ಪಾರಮ್ಯವೂ ಪ್ರತಿಪಾದಿತವಾಗಿದೆ; ಲಯಚಿಂತನೆಯ ಕ್ರಮವಿದೆ. `ಸ ಮಹಾತ್ಮಾ ಪ್ರಸೀದತು' ಎಂಬ ಪಲ್ಲವಿಯುಳ್ಳ ಪದ್ಯಗಳು ಭಗವಂತನ ಸ್ವರೂಪವನ್ನು ಪ್ರತಿಪಾದಿಸುತ್ತವೆ. `ಓಂ ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರಮಂತ್ರವು ಸರ್ವಾರ್ಥಸಾದಕವೆಂದೂ ಸು ತಿಸಿದೆ. ಅಂತೂ ನಾರಾಯಣಪ್ರಿಯರಿಗೆಲ್ಲ ಬೇಕಾದ

## ೨. ಗಜೇಂದ್ರಮೋಕ್ಷ

ಈ ಸ್ತೋತ್ರವು ಶ್ರೀಮದ್ಭಾಗವತದ ಎಂಟನೆಯ ಸ್ಕಂಧದಲ್ಲಿದೆ. ಪರಮ ವೈರಾಗ್ಯಶಿಖಾಮಣಿಗಳಾದ ಶುಕಮಹಾಮುನಿಗಳು, ವಿರಕ್ತನಾಗಿ ರಾಜ್ಯವನ್ನು ತ್ಯಜಿಸಿ ಬಂದು ಮೃತ್ಯುಭೀತನಾಗಿ ಪ್ರಾಯೋಪವೇಶಮಾಡಿ ಕುಳಿತಿದ್ದ ಪರೀಕ್ಷಿದ್ ರಾಜನಿಗೆ, ಈ ಕಥೆಯನ್ನು ಹೇಳಿರುತ್ತಾರೆ. ಇದರಲ್ಲಿರುವ ಭಗವಂತನ ಸ್ತುತಿ ರೂಪವಾದ ಶ್ಲೋಕಗಳು ಅಮೋಘವಾಗಿವೆ. ವೈದಿಕಸಾಹಿತ್ಯದಷ್ಟೇ ಬಿಗಿಯಾಗಿಯೂ ಅರ್ಥಪೂರ್ಣವಾಗಿಯೂ ಗಂಭೀರವಾಗಿಯೂ ಭಕ್ತಿರಸಪ್ರಧಾನವಾಗಿಯೂ ಇರುವ ಈ ಸ್ತೋತ್ರವು ಅದ್ವಿತೀಯವಾದ ನಿರ್ವಿಶೇಷಪರಬ್ರಹ್ಮ ತತ್ತ್ವವನ್ನೇ ಪ್ರತಿಪಾದಿಸುತ್ತಿದೆ. ಸ್ತೋತ್ರದ ಕೊನೆಯಲ್ಲಿಯೂ ಗಜೇಂದ್ರನು ನಿರ್ವಿಶೇಷತತ್ತ್ವವನ್ನೇ ವರ್ಣಿಸಿದ್ದರಿಂದ ಸವಿಶೇಷರಾದ ಬ್ರಹ್ಮಾದಿದೇವತೆಗಳು ಬರಲಿಲ್ಲವೆಂದು ಅಖಿಲಾತ್ಮನಾದ ಶ್ರೀ ಹರಿಯೇ ಪ್ರತ್ಯಕ್ಷನಾದನೆಂದೂ ತಿಳಿಸಿದೆ. ಸ್ವತಃ ನಿರ್ವಿಶೇಷನಾದರೂ ಭಕ್ತಾನುಗ್ರಹಾರ್ಥವಾಗಿ ಸವಿಶೇಷರೂಪವನ್ನು ಧರಿಸುವ ಭಗವಂತನು ವೇದಮಯನಾದ ಗರುಡಾರೂಢನಾಗಿ ಬಂದು ಸಂಸಾರವೆಂಬ ಮೊಸಳೆಯನ್ನು ಜ್ಞಾನವೆಂಬ ಚಕ್ರದಿಂದ ಸೀಳಿ ಗಜೇಂದ್ರನನ್ನು ಉದ್ಧಾರ ಮಾಡಿದನು - ಎಂಬ ತತ್ತ್ವವು ಈ ಸ್ತೋತ್ರದಲ್ಲಿ ಅಡಗಿದೆ. ಜ್ಞಾನಭಕ್ತಿಗಳ ಸಂಗಮವಾಗಿರುವ ಇಂಥ ಸ್ತೋತ್ರವು ಭಗವದ್ಭಕ್ತರಿಗೂ ವೇದಾಂತವಿಚಾರಜಿಜ್ಞಾಸುಗಳಿಗೂ ಮನನೀಯವಾಗಿರುತ್ತದೆ.

## ೩. ಭೀಷ್ಮಸ್ತವರಾಜ

ಸುಪ್ರಸಿದ್ಧ ಜ್ಞಾನಿಗಳೂ ಭಾಗವತೋತ್ತಮರೂ ಉಪಾಸಕರೂ ಆದ ಭೀಷ್ಮಾಚಾರ್ಯರು ತಮ್ಮ ಮರಣಕಾಲದಲ್ಲಿ ಶ್ರೀ ಕೃಷ್ಣನನ್ನು ಎದುರಿಗೇ ನೋಡುತ್ತಾ ಮಾಡಿರುವ ಸ್ತೋತ್ರವಿದು. ಇದರಲ್ಲಿ ಭಗವಂತನ ನಾನಾವಿಭೂತಿಗಳನ್ನು ವರ್ಣಿಸಿದೆ; ಪರಮಾತ್ಮನ ಗುಣ, ಕರ್ಮ, ಲೀಲೆಗಳನ್ನು ಕೊಂಡಾಡಿದೆ; ಸಾಂಖ್ಯ, ಯೋಗ, ವೇದಾಂತ - ಮುಂತಾದ ದರ್ಶನಗಳ ಪರಾಮರ್ಶವಿದೆ. ಶ್ರೀಶಂಕರಾಚಾರ್ಯರೂ ತಮ್ಮ ಭಾಷ್ಯದಲ್ಲಿ ಈ ಸೋತ್ರದ ಶ್ಲೋಕಗಳನ್ನು ಪ್ರಮಾಣವಾಗಿ ಉದಾಹರಿಸಿದ್ದಾರೆ. ಇದರಲ್ಲಿ ಮತ್ಸ್ಯಾದಿದಶಾವತಾರಗಳ ಸುತ್ತಿಯಿದೆ. ಹೀಗೆ ಇನ್ನೂ ಅನೇಕ ಅಮೋಘವಿಷಯಗಳ ಭಂಡಾರವಾಗಿರುವ ಈ ಸ್ತೋತ್ರವು ವಿಷ್ಣುಭಕ್ತರಿಗೆಲ್ಲ ಬಹು ಪ್ರಿಯವಾಗಿದೆ. ಅನೇಕರು ಪ್ರತಿ ನಿತ್ಯವೂ ಇದನ್ನು ಭಕ್ತಿಯಿಂದ ಪಠಿಸುತ್ತಾರೆ. ಕಂಠಪಾಠಮಾಡಿಕೊಳ್ಳಲು ಯೋಗ್ಯವಾದ ಸ್ತೋತ್ರವಿದು.

## ೪. ಹರಿಶರಣಾಷ್ಟಕ

[ಶ್ರೀಮನ್ಮೌಕ್ತಿಕರಾಮೋದಾಸೀನರ ಶಿಷ್ಯರಾದ ಬ್ರಹ್ಮಾನಂದಪರಮಹಂಸ ಸ್ವಾಮಿಗಳವರು ರಚಿಸಿರುವ ಈ ಸ್ತೋತ್ರವು ಅಧ್ಯಾತ್ಮಸಾಧನಪ್ರಧಾನವಾಗಿದೆ.

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ತಮ್ಮ ಪೂರ್ವಾಶ್ರಮದಲ್ಲಿ ಬರೆದು ಅನುಗ್ರಹಿಸಿದ್ದ ವಿವರಣೆಯಸಮೇತ ಇಲ್ಲಿ ಪ್ರಕಟಿಸಲಾಗಿದೆ. ವೇದಾಂತಸಿದ್ಧಾಂತವನ್ನು ಸಾಧನಗಳ ಬಲವಿಲ್ಲದೆ ಅರಗಿಸಿಕೊಳ್ಳುವದು ಆಗಲಾರದಾದ್ದರಿಂದ ಸಾಧಕರು ಮೊದಲು ಇಲ್ಲಿ ಸೂಚಿಸಿರುವ ಸಾಧನಗಳನ್ನು ಕೈಗೊಂಡು ಅನಂತರ ಮೋಕ್ಷಮಾರ್ಗದಲ್ಲಿ ಮುಂದುವರಿಯಬೇಕೆಂದು ಇಲ್ಲಿ ತಿಳಿಸಿದೆ.

## ೫. ಆದಿತ್ಯಹೃದಯ

ಈ ಸ್ತೋತ್ರವು ಶ್ರೀಮದ್ವಾಲ್ಮೀಕಿರಾಮಾಯಣದ ಯುದ್ಧಕಾಂಡದಲ್ಲಿ ಬಂದಿದೆ. `ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ' ಎಂಬ ವೇದವಚನದಂತೆ ಸ್ಥಾವರಜಂಗಮಗಳೆಲ್ಲಕ್ಕೂ ಆತ್ಮನಾಗಿರುವ ಕಾಲರೂಪನಾದ ಸೂರ್ಯನ ಸನ್ನಿಧಾನಮಾತ್ರದಿಂದಲೇ ಜಗತ್ತೆಲ್ಲವೂ ಕ್ರಿಯಾವಂತವಾಗಿದೆ. ಸೂರ್ಯನಿಲ್ಲದಿದ್ದರೆ ಜಗತ್ತೇ ಇರಲಾರದು. ಹೀಗಿರುವದರಿಂದ ಬುದ್ಧಿಜೀವಿಯಾದ ಮಾನವನು ಮೊದಲು ಸೂರ್ಯನ ಮಹಿಮೆಯನ್ನು ಅರಿತುಕೊಂಡು ಅವನ ಉಪಾಸನೆಯನ್ನು ಮಾಡಬೇಕು. ಸೂರ್ಯನ ಅಪಾರವಾದ ಮಾಹಾತ್ಮ್ಯವನ್ನು ಋಗ್ವೇದದಲ್ಲಿಯೂ ಛಾಂದೋಗ್ಯವೇ ಮುಂತಾದ ಉಪನಿಷತ್ತುಗಳಲ್ಲಿಯೂ ವರ್ಣಿಸಿದೆ. ಸೂರ್ಯನೇ ಜೀವರುಗಳ ಪ್ರಾಣವು. ಇಂಥ ಪ್ರಾಣಾತ್ಮನಾದ ಸೂರ್ಯನು ತ್ರಿಮೂರ್ತ್ಯಾತ್ಮಕನೂ ಆಗಿದ್ದು ಇಡಿಯ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನುಂಟುಮಾಡುತ್ತಾನೆ. ಈತನು ಸರ್ವದೇವಾತ್ಮಕನು, ಪ್ರತ್ಯಕ್ಷದೇವತೆಯು - ಎಂದು ಈ ಸ್ತೋತ್ರದಲ್ಲಿಯೇ ಹೊಗಳಿರುತ್ತದೆ. ಆರೋಗ್ಯಪ್ರಾಪ್ತಿ, ಮನಃಸ್ಥೈರ್ಯ, ಕಾರ್ಯಸಿದ್ಧಿ, ಶತ್ರುಜಯ, ಪಾಪಪರಿಹಾರ ಮುಂತಾದ ಐಹಿಕಸುಖಗಳನ್ನೂ ಚಿತ್ತಶುದ್ಧಿ, ಭಗವದ್ಭಕ್ತಿ, ಶ್ರದ್ಧೆ, ಆಸ್ತಿಕ್ಯ-ಮುಂತಾದ ಆತ್ಮಗುಣಗಳನ್ನೂ ಉಂಟುಮಾಡುವ ಈ ಸ್ತೋತ್ರವನ್ನು ಮತಭೇದವಿಲ್ಲದೆ ಎಲ್ಲರೂ ಪಠಿಸತಕ್ಕದ್ದಾಗಿದೆ.

## ಉಪಸಂಹಾರ

ಮೇಲ್ಕಂಡ ಐದು ಕೃತಿಗಳನ್ನೂ ವಾಚಕರು ಸ್ವೀಕರಿಸಿ ಓದಿ ಕೃತಾರ್ಥರಾದಲ್ಲಿ ನಮ್ಮ ಶ್ರಮವು ಸಾರ್ಥಕವಾದಂತೆಯೇ ಸರಿ. ಸರ್ವರಿಗೂ ಭಗವಂತನು ಅಧ್ಯಾತ್ಮವಿದ್ಯೆಯಲ್ಲಿ ಅಭಿರುಚಿಯನ್ನುಂಟುಮಾಡಲೆಂದು ಪ್ರಾರ್ಥಿಸಿ ಈ ಪೀಠಿಕೆಯನ್ನು ಪೂರ್ಣಗೊಳಿಸಿದೆ.

ಹೊಳೆನರಸೀಪುರ,

1.3.1975

ಅನುವಾದಕರು.

# ವಿಷಯಾನುಕ್ರಮಣಿಕೆ


| | | ಪುಟಗಳು |
|---|---|---|
| ೧. | ಅನುಸ್ಮೃತಿ :<br>(ಮಹಾಭಾರತ ಶಾಂತಿಪರ್ವ ೨೦೯ನೆಯ ಅಧ್ಯಾಯ<br>ನಾರಾಯಣಪ್ರಿಯ ಸ್ತೋತ್ರ) | ೧-೧೮ |
| ೨. | ಗಜೇಂದ್ರ ಮೋಕ್ಷ<br>(ಶ್ರೀಮದ್ಭಾಗವತ - ಎಂಟನೆಯ ಸ್ಕಂಧ -<br>೨, ೩, ೪ನೆಯ ಅಧ್ಯಾಯಗಳು)<br>ಗಜೇಂದ್ರನು ನಾರಾಯಣನನ್ನು ಕುರಿತು ಮಾಡಿದ ಸ್ತೋತ್ರ | ೧೯-೪೦ |
| ೩. | ಭೀಷ್ಮಸ್ತವರಾಜ<br>(ಶ್ರೀಮನ್ಮಹಾಭಾರತ - ಶಾಂತಿಪರ್ವ - ರಾಜಧರ್ಮ<br>ಭೀಷ್ಮಾಚಾರ್ಯರು ಮರಣ ಸಮಯದಲ್ಲಿ ಶ್ರೀ ಕೃಷ್ಣನ<br>ಎದುರಿಗೇ ಕುರಿತು ಮಾಡಿದ ಸ್ತೋತ್ರ | ೪೧-೭೧ |
| ೪. | ಹರಿಶರಣಾಷ್ಟಕ<br>(ಬ್ರಹ್ಮಾನಂದ ಪರಮಹಂಸಸ್ವಾಮಿ ವಿರಚಿತ -<br>ವೇದಾಂತಸಿದ್ಧಾಂತ ಅರಿಯಲು ಸಾಧನೆಗಳ ಅಗತ್ಯ -<br>ಪರಭಕ್ತಿ, ಗೌಣಭಕ್ತಿಗಳ ವಿಮರ್ಶೆ) | ೭೨-೮೪ |
| | ಆದಿತ್ಯಹೃದಯಸ್ತೋತ್ರಮ್<br>(ಶ್ರೀಮದ್ವಾಲ್ಮೀಕಿರಾಮಾಯಣ -ಯುದ್ಧಕಾಂಡ -<br>೧೦೨ನೆಯ ಸರ್ಗ - ಅಗಸ್ತ್ಯರು ಯುದ್ಧದ ಸಮಯದಲ್ಲಿ<br>ಶ್ರೀರಾಮನಿಗೆ ಮಾಡಿದ ಉಪದೇಶ) | ೮೫-೯೩ |

# ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ 573211

**ಈ ಕಾರ್ಯಾಲಯದಿಂದ ತಾವು ಯಾವ ಯಾವ ಲಾಭವನ್ನು ಪಡೆಯಬಹುದು?**

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸಗಳು, ಅನುಷ್ಠಾನಗಳು - ವೇದಾಂತಸಪ್ತಾಹ, .ವೇದಾಂತಶಿಬಿರ ಇವುಗಳಲ್ಲಿ ಯಥಾಶಕ್ತಿಯಾಗಿ ಭಾಗವಹಿಸಬಹುದು.

೨. ಇಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿ ಪ್ರಕಟವಾಗುವ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು.

೪. ಕಾರ್ಯಾಲಯದಲ್ಲಿ ಬರೆದು ಸಿದ್ಧವಾಗಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಮಹಾಶ್ರಯದಾತರು, ಆಶ್ರಯದಾತರು, ಅಥವಾ ಮಹಾಪೋಷಕರು - ಎನಿಸಿ ಪುಣ್ಯವನ್ನೂ, ಕೀರ್ತಿಯನ್ನೂ ಸಂಪಾದಿಸಿಕೊಳ್ಳಬಹುದು; ಈ ಪ್ರಕಟನೆಗಳ ಪುಸ್ತಕ ಭಂಡಾರವನ್ನು ಏರ್ಪಡಿಸಿಕೊಳ್ಳಬಹುದು.

೫. ಕಾರ್ಯಾಲಯದ ಕಟ್ಟಡಕ್ಕೂ, ವಿದ್ಯಾನಿಲಯ, ಪೂಜಾಮಂದಿರ, ಗುರುಮಂದಿರ, ಪುಸ್ತಕಭಂಡಾರ- ಇವಕ್ಕೂ ಯಥೋಚಿತವಾಗಿ ಸಹಾಯವನ್ನು ಮಾಡಿ ಪುಣ್ಯವನ್ನು ಗಳಿಸಿಕೊಳ್ಳಬಹುದು.

ಹೆಚ್ಚಿಗೆ ವಿಷಯಕ್ಕೆ ಕಾರ್ಯದರ್ಶಿಗಳಿಗೆ ಬರೆಯಿರಿ.

|| ಓಮ್ ||

|| ಶ್ರೀ ಕೃಷ್ಣಾಯ ಪರಬ್ರಹ್ಮಣೇ ನಮಃ ||

# ಅನುಸ್ಮೃತಿಃ

(ಮಹಾಭಾರತ-ಶಾಂತಿಪರ್ವ-೨೦೮ನೆಯ ಅಧ್ಯಾಯ)[1]

ಯುಧಿಷ್ಠಿರ ಉವಾಚ—

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಪ್ರಯಾಣಕಾಲೇ ಕಿಂ ಜಪ್ಯಂ ಮೋಕ್ಷಿಭಿಸ್ತತ್ತ್ವಚಿನ್ತಕೈಃ || ೧ ||
ಕಿಮನುಸ್ಮರನ್[2] ಕುರುಶ್ರೇಷ್ಠ ಮರಣೇ ಪರ್ಯುಪಸ್ಥಿತೇ[3] ।
ಪ್ರಾಪ್ನುಯಾತ್ ಪರಮಾಂ ಸಿದ್ಧಿಂ ಶ್ರೋತುಮಿಚ್ಛಾಮಿ ತತ್ತ್ವತಃ ||೨||

೧-೨. ಯುಧಿಷ್ಠಿರನಿಂತೆಂದನು : ಮಹಾಬುದ್ಧಿಶಾಲಿಯೂ ಸರ್ವಶಾಸ್ತ್ರವಿಶಾರದನೂ ಆದ ಪಿತಾಮಹನೆ, ಮುಮುಕ್ಷುಗಳಾದ ತತ್ತ್ವಚಿಂತಕರು (ಪ್ರಾಣ) ಪ್ರಯಾಣಸಮಯದಲ್ಲಿ ಏನನ್ನು ಜಪಿಸಬೇಕು ? ಎಲೈ ಕುರುಶ್ರೇಷ್ಠನೆ, ಮರಣವು ಬಂದೊದಗಲಾಗಿ ಏನನ್ನು ಅನುಸ್ಮರಣೆ ಮಾಡುತ್ತಾ ಇದ್ದರೆ (ಸಾಧಕನು) ಪರಮ ಸಿದ್ಧಿಯನ್ನು ಹೊಂದಿಯಾನು ? ಇದನ್ನು ನಿಜವಾಗಿ ಕೇಳಲಿಚ್ಛಿಸುತ್ತೇನೆ.

ಭೀಷ್ಮ ಉವಾಚ—

ಸದ್ಯುಕ್ತಿಸಹಿತಃ[4] ಸೂಕ್ಷ್ಮ ಉಕ್ತಃ ಪ್ರಶ್ನಃ ತ್ವಯಾನಘ ।
ಶೃಣುಷ್ವಾವಹಿತೋ ರಾಜನ್ ನಾರದೇನ ಪುರಾ ಶ್ರುತಮ್ || ೩ ||
ಶ್ರೀವತ್ಸಾಙ್ಕಂ ಜಗದ್ಬೀಜಮನನ್ತಂ ಲೋಕಸಾಕ್ಷಿಣಮ್ ।
ಪುರಾ ನಾರಾಯಣಂ ದೇವಂ ನಾರದಃ ಪರಿಪೃಷ್ಟವಾನ್[5] || ೪ ||

1. 'ಅನುಸ್ಮೃತಿಃ' ಎಂಬ ರಹಸ್ಯಭಾಗವು ಮಹಾಭಾರತಕ್ಕೆ ಸೇರಿದ್ದು 'ಪಂಚರತ್ನಗೀತೆಗಳಲ್ಲೊಂದಾಗಿದೆಯೆಂದು ವಿದ್ವಾಂಸರ ಅಭಿಪ್ರಾಯ. ಇದರಲ್ಲಿ ಮತಭೇದವೂ ಇದೆ. ಪೂನಾದಲ್ಲಿ ನೀಲಕಂಠೀಯವ್ಯಾಖ್ಯಾನಸಹಿತವಾಗಿ ಪ್ರಕಾಶಿತವಾಗಿರುವ ಪುಸ್ತಕದಲ್ಲಿ ಈ ಭಾಗವಿಲ್ಲ. ಕುಂಭಕೋಣದಿಂದ ಪ್ರಕಟವಾಗಿರುವ ಹಾಗೂ ಗೀತಾಪ್ರೆಸ್, ಗೋರಖಪುರದವರಿಂದ ಪ್ರಕಟವಾಗಿರುವ ಮಹಾಭಾರತ ಪುಸ್ತಕಗಳಲ್ಲಿ ಮಾತ್ರ ಇದ್ದು ಕಂಡುಬಂದಿದೆ. ಕುಂಭಕೋಣಗ್ರಂಥದಂತೆ ಇದು ೨೧೦ನೆಯ ಅಧ್ಯಾಯ. ಈಗ ಪ್ರಚಾರದಲ್ಲಿರುವ 'ಪಂಚರತ್ನಗೀತೆ' ಪುಸ್ತಕಗಳಲ್ಲಿ ಕೆಲವು ಹೆಚ್ಚಿನ ಶ್ಲೋಕಗಳೂ ಪಾಠಾಂತರಗಳೂ ಇದರಲ್ಲಿ ಕಂಡುಬಂದಿದೆ. ನಾವು ಗೀತಾಪ್ರೆಸ್ ಪುಸ್ತಕವನ್ನನುಸರಿಸಿದ್ದೇವೆ. ಕುಂಭಕೋಣ ಪ್ರಕಟನೆಯ ಪಾಠಾಂತರಗಳನ್ನು ಮಾತ್ರ ಟಿಪ್ಪಣಿಯಲ್ಲಿ ಕೊಟ್ಟಿದೆ.

2. 'ಕಿಂ ನು ಸ್ಮರನ್' ಪಾ|| 3. 'ಸಮುಪಸ್ಥಿತೇ' ಪಾ||

4. ತ್ವದ್ಯುಕ್ತಶ್ಚ ಹಿತಃ' ಎಂದು ಪಾ|| 5, 'ಪರ್ಯಪೃಚ್ಛತ' ಪಾ||

೩-೪. ಭೀಷ್ಮನಿಂತೆಂದನು : ಎಲೈ ಪಾಪರಹಿತನೆ, ಒಳ್ಳೆಯ ಯುಕ್ತಿ ಯುಕ್ತವಾದ ಸೂಕ್ಷ್ಮವಾದ ಪ್ರಶ್ನೆಯನ್ನೇ ನೀನು ಕೇಳಿರುತ್ತೀಯೆ ; ಎಲೈ ರಾಜನೆ, ನಾರದನಿಂದ ಹಿಂದೆ ಕೇಳಲ್ಪಟ್ಟ (ವಿಷಯವನ್ನು) ಈಗ (ನೀನೂ) ಸಮಾಧಾನಚಿತ್ತದಿಂದ ಕೇಳುವವನಾಗು. ಹಿಂದೆ ನಾರದನು ಶ್ರೀವತ್ಸವೆಂಬ ಗುರುತುಳ್ಳವನೂ ಜಗತ್ಕಾರಣನೂ ಅನಂತನೂ ಲೋಕಸಾಕ್ಷಿಯೂ ಆದ ನಾರಾಯಣದೇವನನ್ನು (ಹೀಗೆ) ಪ್ರಶ್ನೆ ಮಾಡಿದನು.

ನಾರದ ಉವಾಚ—

ತ್ವಾಮಕ್ಷರಂ ಪರಂ ಬ್ರಹ್ಮ[1] ನಿರ್ಗುಣಂ ತಮಸಃ ಪರಮ್ ।
ಆಹುರ್ವೇದ್ಯಂ ಪರಂ ಧಾಮ ಬ್ರಹ್ಮಾದಿಕಮಲೋದ್ಭವಮ್ ॥ ೫ ॥

೫. ನಾರದನಿಂತೆಂದನು : ನಿನ್ನನ್ನು ಅಕ್ಷರನು, ಪರಬ್ರಹ್ಮವು, ನಿರ್ಗುಣನು, ಕತ್ತಲೆಯಾಚೆಗೆ ಇರುವವನು, ವೇದ್ಯನು, ಪರಮಸ್ಥಾನವು, ಕಮಲೋದ್ಭವನಾದ ಆದ್ಯಬ್ರಹ್ಮನು– ಎಂದು (ಬಲ್ಲವರು) ಹೇಳುವರು.

ಭಗವನ್ ಭೂತಭವ್ಯೇಶ ಶ್ರದ್ದಧಾನೈರ್ಜಿತೇನ್ದ್ರಿಯೈಃ ।
ಕಥಂ ಭಕ್ತೈರ್ವಿಚಿನ್ತ್ಯೋಽಸಿ ಯೋಗಿಭಿರ್ಮೋಕ್ಷಕಾಙ್ಕ್ಷಿಭಿಃ ॥ ೬ ॥
ಕಿಂ ಚ[2] ಜಪ್ಯಂ ಜಪೇನ್ನಿತ್ಯಂ ಕಲ್ಯಮುತ್ಥಾಯ ಮಾನವಃ[3] ।
ಕಥಂ ಯುಞ್ಜನ್ ಸದಾ ಧ್ಯಾಯೇದ್ ಬ್ರೂಹಿ ತತ್ತ್ವಂ ಸನಾತನಮ್॥

೬-೭. ಎಲೈ ಭಗವಂತನೆ, ಭೂತಭವ್ಯಗಳೊಡೆಯನೆ, ಜಿತೇಂದ್ರಿಯರೂ ಶ್ರದ್ಧಾವಂತರೂ, ಮೋಕ್ಷವನ್ನು ಬಯಸುವವರೂ ಭಕ್ತರೂ ಆದ ಯೋಗಿಗಳಿಂದ ನೀನು ಹೇಗೆ ಚಿಂತಿಸಲ್ಪಡುವೆ ? ಮನುಷ್ಯನು ಬೆಳಗಾಗುತ್ತಲೂ ಎದ್ದು ನಿತ್ಯವೂ ಜಪ್ಯವಾದ ಏನನ್ನು ಜಪಿಸಬೇಕು ? ಹೇಗೆ ಯೋಗಮಾಡುತ್ತಾ ಯಾವಾಗಲೂ ಧ್ಯಾನಿಸಬೇಕು ? ಸನಾತನವಾದ (ಆ) ತತ್ತ್ವವನ್ನು ಹೇಳು.

ಶ್ರುತ್ವಾ ತಸ್ಯ ತು ದೇವರ್ಷೇರ್ವಾಕ್ಯಂ ವಾಚಸ್ಪತಿಃ[4] ಸ್ವಯಮ್ ।
ಪ್ರೋವಾಚ ಭಗವಾನ್ ವಿಷ್ಣುರ್ನಾರದಂ ವರದಃ ಪ್ರಭುಃ ॥ ೮ ॥

೮. ದೇವರ್ಷಿಯಾದ ಆ (ನಾರದನ) ಮಾತನ್ನು ಕೇಳಿ ವಾಚಸ್ಪತಿಯೂ ವರದನೂ ಪ್ರಭುವೂ ಆದ ಪೂಜ್ಯನಾದ ವಿಷ್ಣುವು ತಾನೇ ನಾರದನನ್ನು ಕುರಿತು ಇಂತೆಂದನು.

1. ' ಅಕ್ಷರಂ ಪರಮಂ ಬ್ರಹ್ಮ ' ಪಾ॥ 2. 'ನು' ಪಾ॥
3. ಇದಾದಮೇಲೆ 'ಸ್ಮರೇಚ್ಚ ಪ್ರಿಯಮಾಣೋ ವೈ ವಿಶೇಷೇಣ ಮಹಾದ್ಯುತೇ' ಎಂದು ಹೆಚ್ಚಾಗಿ ಪಾ॥
4. 'ಶ್ರುತ್ವಾ ಚ ನಾರದೋಕ್ತಂ ತು ದೇವಾನಾಮೀಶ್ವರಃ' ಎಂದು ಪಾ॥

ಶ್ರೀ ಭಗವಾನುವಾಚ—[1]

ಹನ್ತ ತೇ ಕಥಯಿಷ್ಯಾಮಿ ಇಮಾಂ ದಿವ್ಯಾಮನುಸ್ಮೃತಿಮ್ |
ಯಾಮಧೀತ್ಯ ಪ್ರಯಾಣೇ ತು ಮದ್ಭಾವಾಯೋಪಪದ್ಯತೇ || ೯ ||

೯. ಈಗ ನಿನಗೆ ಈ ದಿವ್ಯವಾದ ಅನುಸ್ಮೃತಿಯನ್ನು ಹೇಳುತ್ತೇನೆ ಯಾವ (ಇದನ್ನು)ಪ್ರಯಾಣ (ಮರಣ)ಕಾಲದಲ್ಲಿ ಅಧ್ಯಯನಮಾಡಿದವನು ನನ್ನ ಭಾವವನ್ನು ಹೊಂದುವದಕ್ಕೆ ತಕ್ಕವನಾಗುವನು.

ಓಂಕಾರಮಗ್ರತಃ ಕೃತ್ವಾ ಮಾಂ ನಮಸ್ಕೃತ್ಯ ನಾರದ |
ಏಕಾಗ್ರಃ ಪ್ರಯತೋ ಭೂತ್ವಾ ಇಮಂ ಮನ್ತ್ರಮುದೀರಯೇತ್ ||
ಓಂ ನಮೋ ಭಗವತೇ ವಾಸುದೇವಾಯೇತಿ || ೧೦ ||

೧೦. ಎಲೈ ನಾರದನೆ, ಓಂಕಾರವನ್ನು ಮೊದಲುಮಾಡಿಕೊಂಡು ನನ್ನನ್ನು ನಮಸ್ಕರಿಸಿ ಏಕಾಗ್ರಮನಸ್ಸಿನಿಂದ ಪರಿಶುದ್ಧನಾಗಿ 'ಓಂ ನಮೋ ಭಗವತೇ ವಾಸುದೇವಾಯ' (ವಾಸುದೇವಭಗವಂತನಿಗೆ ನಮಸ್ಕಾರವು) ಎಂಬೀ ಮಂತ್ರವನ್ನು ಉಚ್ಚರಿಸಬೇಕು.

ಇತ್ಯುಕ್ತೋ ನಾರದಃ ಪ್ರಾಹ ಪ್ರಾಞ್ಜಲಿಃ ಪ್ರಣತಃ ಸ್ಥಿತಃ |
ಸರ್ವದೇವೇಶ್ವರಂ ವಿಷ್ಣುಂ ಸರ್ವಾತ್ಮಾನಂ ಹರಿಂ ಪ್ರಭುಮ್ || ೧೧ ||

೧೧. (ಮಹಾವಿಷ್ಣುವಿನಿಂದ) ಹೀಗೆ ಹೇಳಲ್ಪಟ್ಟ ನಾರದನು ಕೈಮುಗಿದು ಕೊಂಡು ನಮ್ರನಾಗಿ ನಿಂತು ಎಲ್ಲಾ ದೇವತೆಗಳೊಡೆಯನೂ ಸರ್ವಾತ್ಮನೂ, ಪಾಪಹರ್ತನೂ ಪ್ರಭುವೂ ಆದ ವಿಷ್ಣುವನ್ನು (ಕುರಿತು) ಸ್ತೋತ್ರಮಾಡಿದನು.

ನಾರದ ಉವಾಚ—

ಅವ್ಯಕ್ತಂ[2] ಶಾಶ್ವತಂ ದೇವಂ ಪ್ರಭವಂ ಪುರುಷೋತ್ತಮಮ್ |
ಪ್ರಪದ್ಯೇ ಪ್ರಾಞ್ಜಲಿರ್ವಿಷ್ಣುಮಕ್ಷರಂ ಪರಮಂ ಪದಮ್ || ೧೨ ||
ಪುರಾಣಂ ಪ್ರಭವಂ ನಿತ್ಯ[3] ಮಕ್ಷಯಂ ಲೋಕಸಾಕ್ಷಿಣಮ್ |
ಪ್ರಪದ್ಯೇ ಪುಣ್ಡರೀಕಾಕ್ಷಮೀಶಂ ಭಕ್ತಾನುಕಮ್ಪಿನಮ್ || ೧೩ ||

೧೨–೧೩. ನಾರದನಿಂತೆಂದನು : ಅವ್ಯಕ್ತನೂ ಶಾಶ್ವತನೂ ದೇವನೂ ಉತ್ಪತ್ತಿಕಾರಣನೂ ಪುರುಷೋತ್ತಮನೂ ನಾಶವಿಲ್ಲದವನೂ ಪರಮಸ್ಥಾನನೂ ಆಗಿರುವ ವಿಷ್ಣುವನ್ನು ಕೈಮುಗಿದು ಶರಣುಹೊಕ್ಕಿರುವೆನು. ಪುರಾಣನೂ ಪ್ರಭವನೂ ನಿತ್ಯನೂ ಕ್ಷಯರಹಿತನೂ ಲೋಕಸಾಕ್ಷಿಯೂ ಕಮಲದಂತೆ ಕಣ್ಣುಳ್ಳವನೂ ಭಕ್ತರಲ್ಲಿ ದಯೆಯುಳ್ಳವನೂ ಈಶನೂ ಆದ(ವಿಷ್ಣುವನ್ನು) ಮೊರೆಹೊಕ್ಕಿರುವೆನು.

1. ಕುಂ|| ಪಾಠದಲ್ಲಿಲ್ಲ. 2. 'ಅವ್ಯಯಮ್'
3. 'ವಿಷ್ಣುಮ್ ಪಾ||

ಲೋಕನಾಥಂ ಸಹಸ್ರಾಕ್ಷಮದ್ಭುತಂ ಪರಮಂ ಪದಮ್ ।
ಭಗವನ್ತಂ ಪ್ರಪನ್ನೋಽಸ್ಮಿ ಭೂತಭವ್ಯಭವತ್ಪ್ರಭುಮ್ ॥ ೧೪ ॥

೧೪. ಲೋಕಗಳೊಡೆಯನೂ ಸಾವಿರಕಣ್ಣುಗಳುಳ್ಳವನೂ ಅದ್ಭುತನೂ ಪರಮಸ್ಥಾನನೂ ಹಿಂದಿನ-ಮುಂದಿನ-ಈಗಿನ ಕಾಲಗಳಿಗೆ ಒಡೆಯನೂ ಆದ ಭಗವಂತನನ್ನು ಶರಣುಹೊಕ್ಕಿರುತ್ತೇನೆ.

ಸ್ರಷ್ಟಾರಂ ಸರ್ವಲೋಕಾನಾಮನನ್ತಂ ವಿಶ್ವತೋ[1] ಮುಖಮ್ ।
ಪದ್ಮನಾಭಂ ಹೃಷೀಕೇಶಂ ಪ್ರಪದ್ಯೇ ಸತ್ಯಮಚ್ಯುತಮ್ ॥ ೧೫ ॥
ಹಿರಣ್ಯಗರ್ಭಮಮೃತಂ ಭೂಗರ್ಭಂ ಪರತಃ ಪರಮ್ ।
ಪ್ರಭೋಃ ಪ್ರಭುಮನಾದ್ಯನ್ತಂ ಪ್ರಪದ್ಯೇ ತಂ ರವಿಪ್ರಭಮ್ ॥ ೧೬ ॥

೧೫–೧೬. ಎಲ್ಲಾ ಲೋಕಗಳ ಸೃಷ್ಟಿಕರ್ತನಾದ, ಅನಂತನೂ ಎಲ್ಲೆಲ್ಲಿಯೂ ಮುಖಗಳುಳ್ಳವನೂ ಆದ, ಪದ್ಮನಾಭನೂ ಇಂದ್ರಿಯಗಳೊಡೆಯನೂ ಸತ್ಯನೂ ಜಾರುವ ಸ್ವಭಾವವಿಲ್ಲದವನೂ ಆದ (ಆವನನ್ನು) ಶರಣುಹೊಗುವೆನು. ಹಿರಣ್ಯಗರ್ಭನೂ ಅಮೃತನೂ ಭೂ(ದೇವಿ)ಯನ್ನು ಗರ್ಭದಲ್ಲಿ ಉಳ್ಳವನೂ ಪರವಾದ (ಅವ್ಯಕ್ತಕ್ಕಿಂತಲೂ) ಹೆಚ್ಚಿನವನೂ ಒಡೆಯರಿಗೆಲ್ಲ ಒಡೆಯನೂ ಆದ್ಯಂತಗಳಿಲ್ಲದವನೂ ಸೂರ್ಯನಂತೆ ಕಾಂತಿಯುಳ್ಳವನೂ ಆದ ಆವನನ್ನು ಶರಣುಹೊಂದುವೆನು.

ಸಹಸ್ರಶೀರ್ಷಂ ಪುರುಷಂ ಮಹರ್ಷಿಂ ತತ್ತ್ವಭಾವನಮ್ ।
ಪ್ರಪದ್ಯೇ ಸೂಕ್ಷ್ಮಮಚಲಂ ವರೇಣ್ಯಮಭಯಪ್ರದಮ್ ॥ ೧೭ ॥
ನಾರಾಯಣಂ ಪುರಾಣರ್ಷಿಂ ಯೋಗಾತ್ಮಾನಂ ಸನಾತನಮ್ ।
ಸಂಸ್ಥಾನಂ ಸರ್ವತತ್ತ್ವಾನಾಂ ಪ್ರಪದ್ಯೇ ಧ್ರುವಮೀಶ್ವರಮ್ ॥ ೧೮ ॥

೧೭–೧೮. ಸಾವಿರತಲೆಗಳುಳ್ಳವನೂ ಪುರುಷನೂ[2] ಮಹರ್ಷಿಯೂ ತತ್ತ್ವಸ್ವರೂಪನೂ ಸೂಕ್ಷ್ಮನೂ ಅಚಲನೂ ಶ್ರೇಷ್ಠನೂ (ಭಕ್ತರಿಗೆ) ಅಭಯದಾತೃವೂ ಆಗಿರುವ, (ಮತ್ತು) ಪುರಾಣಋಷಿಯಾದ[3] ಯೋಗಸ್ವರೂಪನೂ ಸನಾತನನೂ ಎಲ್ಲಾ ವಸ್ತುಗಳಿಗೂ ಆಶ್ರಯನೂ ಶಾಶ್ವತನೂ ಸ್ವತಂತ್ರನೂ ಆದ ನಾರಾಯಣನನ್ನು ಶರಣುಹೊಕ್ಕಿರುತ್ತೇನೆ.

1. 'ಸರ್ವತೋ....' ಪಾ ।

2. ಪುರುಷಸೂಕ್ತದಲ್ಲಿರುವ ವರ್ಣನೆಯ ಸೂಚನೆ.

3. ನರನಾರಾಯಣರೆಂಬ ಋಷಿಗಳ ರೂಪದಿಂದ ಬದರಿಕಾಶ್ರಮದಲ್ಲಿ ತಪೋನಿಷ್ಠನಾದ-ಎಂದರ್ಥ.

ಯಃ ಪ್ರಭುಃ ಸರ್ವಭೂತಾನಾಂ ಯೇನ ಸರ್ವಮಿದಂ ತತಮ್ |
ಚರಾಚರಗುರು[1] ರ್ವಿಷ್ಣುಃ ಸ ಮೇ ದೇವಃ ಪ್ರಸೀದತು || ೧೯ ||
ಯಸ್ಮಾದುತ್ಪದ್ಯತೇ ಬ್ರಹ್ಮಾ ಪದ್ಮಯೋನಿಃ ಪಿತಾಮಹಃ[2] |
ಬ್ರಹ್ಮಯೋನಿರ್ಹಿ ವಿಶ್ವಾತ್ಮಾ ಸ ಮೇ ವಿಷ್ಣುಃ ಪ್ರಸೀದತು || ೨೦ ||

೧೯-೨೦. ಎಲ್ಲಾ ಭೂತಗಳಿಗೂ ಯಾವನು ಒಡೆಯನೋ ಯಾವನಿಂದ ಇದೆಲ್ಲವೂ ವ್ಯಾಪ್ತವಾಗಿರುವದೋ[3] ಚರಾಚರಗಳೆಲ್ಲಕ್ಕೂ ಹಿರಿಯನಾದ ಆ ದೇವನಾದ ವಿಷ್ಣುವು ಪ್ರಸನ್ನನಾಗಲಿ. ಯಾವನಿಂದ ಕಮಲವನ್ನು ಜನ್ಮ (ಸ್ಥಾನ) ವಾಗುಳ್ಳ ಬ್ರಹ್ಮನು ಹುಟ್ಟುವನೋ ಅಂಥ ಬ್ರಹ್ಮ (ನಿಗೂ) ಕಾರಣವಾದ, ಎಲ್ಲರ ಆತ್ಮನಾದ ಆ ವಿಷ್ಣುವು ನನಗೆ ಪ್ರಸನ್ನನಾಗಲಿ.

ಯಃ ಪುರಾ ಪ್ರಲಯೇ ಪ್ರಾಪ್ತೇ ನಷ್ಟೇ ಸ್ಥಾವರಜಙ್ಗಮೇ |
ಬ್ರಹ್ಮಾದಿಷು ಪ್ರಲೀನೇಷು ನಷ್ಟೇ ಲೋಕೇ ಪರಾವರೇ || ೨೧ ||
ಆಭೂತಸಂಪ್ಲವೇ ಚೈವ ಪ್ರಲೀನೇ ಪ್ರಕೃತೌ[4] ಮಹಾನ್ |
ಏಕಸ್ತಿಷ್ಠತಿ ವಿಶ್ವಾತ್ಮಾ ಸ ಮೇ ವಿಷ್ಣುಃ ಪ್ರಸೀದತು || ೨೨ ||

೨೧-೨೨. ಹಿಂದೆ ಪ್ರಲಯವು ಸಂಭವಿಸಿದಾಗ ಸ್ಥಾವರಜಂಗಮಪ್ರಾಣಿಗಳೆಲ್ಲವೂ ನಾಶವಾಗಿರಲಾಗಿ ಬ್ರಹ್ಮನೇ ಮೊದಲಾದವರೂ ಪ್ರಲಯದಲ್ಲಿ ಒಂದಾಗಿ ಮೇಲಿನ-ಕೆಳಗಿನ ಎಲ್ಲಾ ಲೋಕಗಳೂ ಕಾಣಬರದೆಇರುವಲ್ಲಿ (ಪಂಚ) ಭೂತಗಳ ವರೆಗಿನ ಎಲ್ಲಾ ಸೃಷ್ಟಿಯೂ ಮಹಾಪ್ರಕೃತಿಯಲ್ಲಿ (ಅವ್ಯಾಕೃತದಲ್ಲಿ) ಐಕ್ಯವಾಗಿರಲಾಗಿ ಎಲ್ಲಕ್ಕೂ ಆತ್ಮನಾದ ಯಾವ ವಿಷ್ಣುವು ತಾನೊಬ್ಬನೇ ಇದ್ದುಕೊಂಡಿದ್ದನೋ ಅವನು ನನಗೆ ಪ್ರಸನ್ನನಾಗಲಿ.

ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಞ್ಚಭಿರೇವ ಚ |
ಹೂಯತೇ ಚ ಪುನರ್ದ್ವಾಭ್ಯಾಂ ಸ ಮೇ ವಿಷ್ಣುಃ ಪ್ರಸೀದತು[5] || ೨೩ ||

೨೩. ನಾಲ್ಕು, ಮತ್ತೆ ನಾಲ್ಕು, ಹಾಗೂ ಎರಡು, ಮತ್ತು ಐದು, ಇನ್ನೊಮ್ಮೆ ಎರಡು- ಹೀಗೆ(ಹದಿನೇಳು ಅಕ್ಷರಗಳಿಂದ[6] )ಹೋಮಮಾಡಲ್ಪಡುವ (ಯಜ್ಞಪತಿಯಾದ) ಆ ವಿಷ್ಣುವು ಪ್ರಸನ್ನನಾಗಲಿ.

1. 'ಪರಾವರಗುರುಃ' ಎಂದು, ಪಾ॥ 2. 'ಸನಾತನಃ' ಪಾ॥

3. ಗೀ. ೨-೧೭ರ ಸೂಚನೆ. 4. 'ಅಪ್ರಾಕೃತೋ' ಪಾ॥

5. ಮಹಾಭಾರತ ಶಾಂತಿಪರ್ವ (ಭೀಷ್ಮಸ್ತವರಾಜ) ೪೭-೪೩ರಲ್ಲಿರುವ ಶ್ಲೋಕಕ್ಕೆ ಇದನ್ನು ಹೋಲಿಸಿರಿ.

6. ಆಶ್ರಾವಯ (೪) ಅಸ್ತು ಶ್ರೌಷಟ್ (೪) ಯಜ (೨) ಯೇ ಯಜಾಮಹೇ (೫) ವೌಷಟ್ (೨) ಹೀಗೆ ಹದಿನೇಳು ಅಕ್ಷರಗಳಿಂದ ಯಜ್ಞಗಳಲ್ಲಿ (ವಿಷ್ಣುವಿಗೆ) ಆಹುತಿಗಳನ್ನು ಅರ್ಪಿಸುತ್ತಾರೆ. ಅಂಥ ವಿಷ್ಣುವು ಪ್ರಸನ್ನನಾಗಲಿ-ಎಂದು ಅಭಿಪ್ರಾಯ.

ಪರ್ಜನ್ಯಃ ಪೃಥಿವೀ ಸಸ್ಯಂ ಕಾಲೋ ಧರ್ಮಃ ಕ್ರಿಯಾಕ್ರಿಯೇ
ಗುಣಾಕರಃ ಸ ಮೇ ಬಭ್ರುಃ ವಾಸುದೇವಃ ಪ್ರಸೀದತು || ೨೪
ಅಗ್ನಿಷೋಮಾರ್ಕತಾರಾಣಾಂ ಬ್ರಹ್ಮರುದ್ರೇನ್ದ್ರಯೋಗಿನಾಮ್
ಯಸ್ತೇಜಯತಿ ತೇಜಾಂಸಿ ಸ ಮೇ ವಿಷ್ಣುಃ ಪ್ರಸೀದತು || ೨೫ ||

೨೪–೨೫. ಪರ್ಜನ್ಯನು(ಮಳೆಯು)ಭೂಮಿಯು, ಪೈರು, ಕಾಲ, ಧರ್ಮ, ಮಾಡಬೇಕಾದ್ದು, ಮಾಡಬಾರದ್ದು, (ಎಲ್ಲವೂ ಆಗಿರುವ) ಗುಣಗಳಿಗೆ ಆಶ್ರಯನಾದ, ಲೋಕಗಳನ್ನೆಲ್ಲ ಧರಿಸಿರುವ ಆ ವಾಸುದೇವನು ನನಗೆ ಪ್ರಸನ್ನನಾಗಲಿ. ಅಗ್ನಿ, ಇಂದ್ರ, ನಕ್ಷತ್ರಗಳು– ಮುಂತಾದ ಬೆಳಕುಗಳನ್ನು ಯಾವನು ಬೆಳಗುವನೋ ಬ್ರಹ್ಮ. ರುದ್ರ, ಇಂದ್ರನೇ ಮೊದಲಾದ ಯೋಗಿಗಳಿಗೆ ಯೋಗಸಿದ್ಧಿಗಳನ್ನು) ಯಾವನು ಕೊಡುವವನೋ ಆ ವಿಷ್ಣುವು ನನಗೆ ಪ್ರಸನ್ನನಾಗಲಿ.

ಯೋಗಾವಾಸ ನಮಸ್ತುಭ್ಯಂ ಸರ್ವಾವಾಸ ವರಪ್ರದ ।
ಯಜ್ಞಗರ್ಭ ಹಿರಣ್ಯಾಙ್ಗ ಪಞ್ಚಯಜ್ಞ ನಮೋಽಸ್ತು ತೇ || ೨೬ ||
ಚತುರ್ಮೂರ್ತೇ ಪರಂ ಧಾಮ ಲಕ್ಷ್ಮ್ಯಾವಾಸ ಪರಾರ್ಚಿತ
ಸರ್ವಾವಾಸ ನಮಸ್ತೇಽಸ್ತು ವಾಸುದೇವ ಪ್ರಧಾನಕೃತ್ || ೨೭ ||

೨೬–೨೭. ಎಲೈ ಯೋಗಾವಾಸನೆ, ನಿನಗೆ ನಮಸ್ಕಾರ ಎಲ್ಲಕ್ಕೂ ನಿವಾಸಸ್ಥಾನನೆ, ವರಗಳನ್ನು ಕೊಡುವವನೆ, ಯಜ್ಞಹೃದಯನೆ, ದ ಶರೀರವುಳ್ಳವನೆ, ಪಂಚ (ಮಹಾ)ಯಜ್ಞರೂಪನೆ; ನಿನಗೆ ನಮಸ್ಕಾರವಿರಲಿ ! ಚತುರ್ಮೂರ್ತಿಯೆ,[1] ಪರಂಧಾಮನೆ, ಲಕ್ಷ್ಮಿಯ ನಿವಾಸಸ್ಥಾನನೆ, ಮಿಗಿಲಾದ ಪೂಜಿತನೆ, ಎಲ್ಲಕ್ಕೂ ಆಶ್ರಯನೆ, ವಾಸುದೇವನೆ, ಪ್ರಕೃತಿಯನ್ನುಂಟುಮಾಡುವವನೆ, ನಿನಗೆ ನಮಸ್ಕಾರವಿರಲಿ.

ಅಜಸ್ತ್ವಮಗಮಃ[2] ಪನ್ಥಾಃ ಹ್ಯಮೂರ್ತಿರ್ವಿಶ್ವಮೂರ್ತಿಧೃಕ್ ।
ವಿಕರ್ತಃ ಪಞ್ಚಕಾಲಜ್ಞ ನಮಸ್ತೇ ಜ್ಞಾನಸಾಗರ ೨೮

೨೮. ನೀನಾದರೋ ಜನ್ಮವಿಲ್ಲದವನು ; ನಡೆಯಲಸಾಧ್ಯವಾದ ಮಾರ್ಗವು[3] ಅಮೂರ್ತಿಯು; (ಆದರೂ) ಎಲ್ಲಾ(ಆಕಾರಗಳನ್ನೂ)ಧರಿಸಿರುವವನು, ಕರ್ತನಿಲ್ಲದವನು, ಐದು ಕಾಲಗಳನ್ನು[4] ಬಲ್ಲವನು; ಜ್ಞಾನಸಮುದ್ರನೆ, ನಿನಗೆ ನಮಸ್ಕಾರವಿರಲಿ !

1. ವಿಷ್ಣುಸಹಸ್ರನಾಮದ ೭೬೫ನೆಯ ನಾಮನಿರ್ವಚನವನ್ನು ನೋಡಿರಿ.

2. "ಅನಾಮಯಃ" ಎಂದು ಪಾ|| 3. ಪ್ರಾಪ್ಯನಲ್ಲ.

4. ಉಷಃಕಾಲ, ಪ್ರಾತಃಕಾಲ, ಸಂಗವಕಾಲ, ಮಧ್ಯಾಹ್ನಕಾಲ, ಸಾಯಂಕಾಲ- ಎಂಬ ಐದು ಕಾಲಗಳಿರಬಹುದು.

ಅವ್ಯಕ್ತಾದ್ ವ್ಯಕ್ತಮುತ್ಪನ್ನಂ ವ್ಯಕ್ತಾದ್ ಯಸ್ತು[1] ಪರೋಽಕ್ಷರಃ |
ಯಸ್ಮಾತ್ ಪರತರಂ ನಾಸ್ತಿ ತಮಸ್ಮಿ ಶರಣಂ ಗತಃ || ೨೯ ||
ನ ಪ್ರಧಾನೋ ನ ಚ ಮಹಾನ್ ಪುರುಷಶ್ಚೇತನೋ ಹ್ಯಜಃ |
ಅನಯೋರ್ಯಃ ಪರತರಸ್ತಮಸ್ಮಿ ಶರಣಂ ಗತಃ || ೩೦ ||

೨೯–೩೦. ಅವ್ಯಕ್ತದಿಂದ ವ್ಯಕ್ತವುಂಟಾಗಿದೆ. ಯಾವನು ವ್ಯಕ್ತಕ್ಕಿಂತಲೂ ಪರನೋ ಅಕ್ಷರಸ್ವರೂಪನೋ ಯಾವನಿಗಿಂತ ಮಿಗಿಲಾದದ್ದು ಇನ್ನೊಂದಿಲ್ಲವೋ ಅವನನ್ನು ನಾನು ಶರಣುಹೊಕ್ಕಿರುವೆನು. ಪ್ರಧಾನ (ಪ್ರಕೃತಿ)ಯಾಗಲಿ, ಮಹತ್ತತ್ತ್ವವಾಗಲಿ ಚೇತನನಾದ (ನಿಜವಾಗಿ) ಹುಟ್ಟಿಲ್ಲದ ಪುರುಷನಾಗಲಿ– ಈ ಎಲ್ಲಕ್ಕಿಂತಲೂ– (ಪ್ರಕೃತಿ ಪುರುಷ)ರಿಬ್ಬರಿಗಿಂತಲೂ– ಯಾವನು ಹೆಚ್ಚಿನವನೋ ಅವನನ್ನು ಶರಣುಹೊಕ್ಕಿರುತ್ತೇನೆ.

ಚಿನ್ತಯನ್ತೋ ಹಿ ಯಂ ನಿತ್ಯಂ ಬ್ರಹ್ಮೇಶಾನಾದಯಃ ಪ್ರಭುಮ್ |
ನಿಶ್ಚಯಂ ನಾಧಿಗಚ್ಛನ್ತಿ ತಮಸ್ಮಿ ಶರಣಂ ಗತಃ || ೩೧ ||
ಜಿತೇನ್ದ್ರಿಯಾ ಮಹಾತ್ಮಾನೋ ಜ್ಞಾನಧ್ಯಾನಪರಾಯಣಾಃ |
ಯಂ ಪ್ರಾಪ್ಯ ನ ನಿವರ್ತನ್ತೇ ತಮಸ್ಮಿ ಶರಣಂ ಗತಃ || ೩೨ ||

೩೧–೩೨. ಬ್ರಹ್ಮ, ಈಶ್ವರನೇ ಮೊದಲಾದವರು ಯಾವಾಗಲೂ ಯಾವ ಪ್ರಭುವಾದ (ಇವನನ್ನು) ಧ್ಯಾನಿಸುತ್ತಾ (ಇವನ ಸ್ವರೂಪದ) ನಿಶ್ಚಯವನ್ನು ಮಾಡಲಾರದೆ ಇರುವರೋ ಅಂಥವನನ್ನು ಶರಣುಹೊಕ್ಕಿರುವೆನು: ಇಂದ್ರಿಯಜಯವುಳ್ಳ ಮಹಾತ್ಮರು, ವಿವೇಕಜ್ಞಾನ, ಉಪಾಸನಾದಿ (ಸಾಧನ) ತತ್ಪರರಾಗಿ ಯಾವ (ಸ್ಥಾನವನ್ನು) ಸೇರಿದವರು ಮತ್ತೆ (ಸಂಸಾರಕ್ಕೆ) ಹಿಂದಿರುಗುವದಿಲ್ಲವೋ ಆ (ಸ್ಥಾನರೂಪನಾದ)ವನನ್ನು ಶರಣುಹೊಕ್ಕಿರುತ್ತೇನೆ.

ಏಕಾಂಶೇನ ಜಗತ್ಸರ್ವಮವಷ್ಟಭ್ಯ ವಿಭುಃ ಸ್ಥಿತಃ |
ಅಗ್ರಾಹ್ಯೋ ನಿರ್ಗುಣೋ ನಿತ್ಯಃ[2] ತಮಸ್ಮಿ ಶರಣಂ ಗತಃ || ೩೩ ||

೩೩. ವ್ಯಾಪಿಯಾದ (ಈತನು) ತನ್ನ ಒಂದಂಶದಿಂದ ಇಡಿಯ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡು ಇದ್ದುಕೊಂಡಿರುವನು. ಇಂದ್ರಿಯಗಳಿಗೆ ಗೋಚರನಲ್ಲದವನೂ ನಿರ್ಗುಣನೂ ನಿತ್ಯನೂ (ಆದ) ಆತನನ್ನು ಶರಣುಹೊಂದಿರುವೆನು.

ಸೋಮಾರ್ಕಾಗ್ನಿಮಯಂ ತೇಜೋ ಯಾ ಚ ತಾರಾಮಯೀ ದ್ಯುತಿಃ |
ದಿವಿ ಸಂಜಾಯತೇ ಯೋಽಯಂ ಸ ಮಹಾತ್ಮಾ ಪ್ರಸೀದತು || ೩೪ ||
ಗುಣಾದಿರ್ನಿರ್ಗುಣಶ್ಚಾದ್ಯೋ ಲಕ್ಷ್ಮೀವಾಂಶ್ಚೇತನೋ ಹ್ಯಜಃ |
ಸೂಕ್ಷ್ಮಃ ಸರ್ವಗತೋ ಯೋಗೀ ಸ ಮಹಾತ್ಮಾ ಪ್ರಸೀದತು || ೩೫ ||

1. 'ಅವ್ಯಕ್ತಾದ್ ಯಃ' ಪಾ||
2. 'ಅಗ್ರಾಹ್ಯಂ ನಿರ್ಗುಣಂ ನಿತ್ಯಮ್' ಎಂದು ಪಾ||

೩೪–೩೫. ಚಂದ್ರ, ಸೂರ್ಯ, ಅಗ್ನಿ(ರೂಪವಾದ) ತೇಜಸ್ಸು, ಹಾಗೂ ನಕ್ಷತ್ರಮಂಡಲ (ರೂಪ)ವಾದ ಯಾವ ತೇಜಸ್ಸು ದ್ಯುಲೋಕದಲ್ಲಿ ಉಂಟಾಗಿರುವದೋ (ಅದರ ಕಾರಣನಾದ) ಯಾವ (ದೇವನಿರುವನೋ) ಅವನು ಪ್ರಸನ್ನನಾಗಲಿ. ಗುಣಗಳಿಗೆ ಮೂಲನೂ (ಸ್ವತಃ) ನಿರ್ಗುಣನೂ ಆದ್ಯನೂ ಲಕ್ಷ್ಮೀಯುಕ್ತನೂ ಚೇತನನೂ ಜನ್ಮರಹಿತನೂ ಸೂಕ್ಷ್ಮನೂ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವವನೂ ಯೋಗಿಯೂ ಆದ ಆ ಮಹಾತ್ಮನು ಪ್ರಸನ್ನನಾಗಲಿ.

ಸಾಙ್ಖ್ಯಯೋಗಾಶ್ಚ ಯೇ ಚಾನ್ಯೇ ಸಿದ್ಧಾಶ್ಚ ಪರಮರ್ಷಯಃ |
ಯಂ ವಿದಿತ್ವಾ ವಿಮುಚ್ಯನ್ತೇ ಸ ಮಹಾತ್ಮಾ ಪ್ರಸೀದತು || ೩೬ ||

೩೬. ಸಾಂಖ್ಯರೂ ಯೋಗಿಗಳೂ ಮತ್ತು ಸಿದ್ಧರು (ಮೊದಲಾದ) ಬೇರೆಯ ಮಹಾಋಷಿಗಳೂ ಯಾವನನ್ನು ಅರಿತುಕೊಂಡು ವಿಮುಕ್ತರಾಗುವರೋ ಆ ಮಹಾತ್ಮನು ಪ್ರಸನ್ನನಾಗಲಿ.

ಅವ್ಯಕ್ತಃ ಸಮಧಿಷ್ಠಾತಾ ಹ್ಯಚಿನ್ತ್ಯಃ ಸದಸತ್ಪರಃ |
ಆಸ್ಥಿತಃ[1] ಪ್ರಕೃತಿಶ್ರೇಷ್ಠಃ ಸ ಮಹಾತ್ಮಾ ಪ್ರಸೀದತು || ೩೭ ||

೩೭. ಅವ್ಯಕ್ತನೂ (ಜಗತ್ತಿಗೆ) ಆಧಾರನೂ ಅಚಿಂತ್ಯನೂ ಸದಸತ್ತುಗಳಿಗಿಂತ ವಿಲಕ್ಷಣನೂ ಆಗಿರುವ ಎಲ್ಲೆಲ್ಲೂ ಇದ್ದುಕೊಂಡಿರುವ ಪ್ರಕೃತಿಶ್ರೇಷ್ಠನಾದ ಆ ಮಹಾತ್ಮನು ಪ್ರಸನ್ನನಾಗಲಿ.

ಕ್ಷೇತ್ರಜ್ಞಃ ಪಞ್ಚಧಾ ಭುಙ್ಕ್ತೇ ಪ್ರಕೃತಿಂ ಪಞ್ಚಭಿರ್ಮುಖೈಃ |
ಮಹಾನ್ ಗುಣಾಂಶ್ಚ ಯೋ ಭುಙ್ಕ್ತೇ ಸ ಮಹಾತ್ಮಾ ಪ್ರಸೀದತು||೩೮||

೩೮. ಯಾವನು ಜೀವ(ರೂಪನಾಗಿ)ದ್ದುಕೊಂಡು ಪ್ರಕೃತಿಯನ್ನು ತನ್ನ (ಇಂದ್ರಿಯಗಳೆಂಬ) ಐದು ಮುಖಗಳಿಂದ ಐದು(ವಿಷಯ)ಗಳ ರೂಪವಾಗಿ ಅನುಭವಿಸುವನೋ ಮಹತ್ತೂ ಆಗಿರುವನೋ ಗುಣಗಳನ್ನು ಅನುಭವಿಸುತ್ತಿರುವನೋ ಆ ಮಹಾತ್ಮನು ಪ್ರಸನ್ನನಾಗಲಿ.

ಸೂರ್ಯಮಧ್ಯೇ ಸ್ಥಿತಃ ಸೋಮಃ ತಸ್ಯ ಮಧ್ಯೇ ಚ ಯಾ ಸ್ಥಿತಾ ।
ಭೂತಬಾಹ್ಯಾ ಚ ಯಾ ದೀಪ್ತಿಃ ಸ ಮಹಾತ್ಮಾ ಪ್ರಸೀದತು || ೩೯ ||

೩೯. ಸೂರ್ಯನ ನಡುವೆ ಚಂದ್ರನಿದ್ದುಕೊಂಡಿರುವನು. ಅವನ ನಡುವೆ ಇರುವ ಯಾವ, ಭೂತಗಳ (ಕಾಂತಿ)ಗಿಂತ ಬೇರೆಯಾದ ಕಾಂತಿಯುಂಟೋ (ಆ ಸ್ವರೂಪನಾಗಿರುವ) ಮಹಾತ್ಮನು ಪ್ರಸನ್ನನಾಗಲಿ.

ನಮಸ್ತೇ ಸರ್ವತಃ ಸರ್ವ ಸರ್ವತೋಽಕ್ಷಿಶಿರೋಮುಖ ।
ನಿರ್ವಿಕಾರ ನಮಸ್ತೇಽಸ್ತು ಸಾಕ್ಷೀ ಕ್ಷೇತ್ರೇ ವ್ಯವಸ್ಥಿತಃ[2] || ೪೦ ||

1. 'ಆಸ್ಥಿತಃ' ಎಂದು ಪಾ॥ 2. "ಕ್ಷೇತ್ರಧ್ರುವಸ್ಥಿತಃ' ಎಂದು ಪಾ॥

೪೦. ಎಲೈ ಸರ್ವನೆ, ಎಲ್ಲೆಲ್ಲಿಯೂ ಕಣ್ಣುಮುಖತಲೆಗಳುಳ್ಳವನೆ,[1] ನಿರ್ವಿಕಾರನೆ, ನಿನಗೆ ಎಲ್ಲೆಲ್ಲಿಯೂ ನಮಸ್ಕಾರ ! ಸಾಕ್ಷಿಯೂ ಎಲ್ಲಾ ಶರೀರಗಳಲ್ಲಿಯೂ ಇದ್ದುಕೊಂಡಿರುವವನೂ ಆದ ನಿನಗೆ ನಮಸ್ಕಾರವಿರಲಿ.

ಅತೀನ್ದ್ರಿಯ ನಮಸ್ತುಭ್ಯಂ ಲಿಂಗೈರ್ವ್ಯಕ್ತೈರ್ನ ಮೀಯಸೇ |
ಯೇ ಚ ತ್ವಾಂ ನಾಭಿಜಾನನ್ತಿ ಸಂಸಾರೇ ಸಂಸರನ್ತಿ ತೇ || ೪೧ ||

೪೧. ಇಂದ್ರಿಯಗಳ ಎಲ್ಲೆಕಟ್ಟನ್ನು ಮೀರಿದವನೆ, ನಿನಗೆ ನಮಸ್ಕಾರ ; ಸ್ಥೂಲವಾದ ಚಿಹ್ನೆಗಳಿಂದ ನೀನು ಗುರುತಿಸಲ್ಪಡುವವನಲ್ಲ. ಯಾರು ನಿನ್ನನ್ನು ಸರಿಯಾಗಿ ತಿಳಿಯರೋ ಅವರು ಸಂಸಾರದಲ್ಲಿ ತೊಳಲುವರು.

ಕಾಮಕ್ರೋಧವಿನಿರ್ಮುಕ್ತಾ ರಾಗದ್ವೇಷವಿವರ್ಜಿತಾಃ |
ನಾನ್ಯಭಕ್ತಾ[2] ವಿಜಾನನ್ತಿ ನ ಪುನರ್ನಾರಕಾ[3] ದ್ವಿಜಾಃ || ೪೨ ||

೪೨. ಕಾಮಕ್ರೋಧಗಳಿಂದ ಬಿಡಲ್ಪಟ್ಟವರೂ ರಾಗದ್ವೇಷಗಳಿಲ್ಲದವರೂ ಆದ, ಬೇರೆ ದೇವತೆಯ ಭಕ್ತರಲ್ಲದ (ನಿನ್ನ ಭಕ್ತರಾದವರು ಮಾತ್ರವೇ) ನಿನ್ನನ್ನು ಅರಿಯಬಲ್ಲರು. ನಾರಕಿ (ಪಾತಕಿ)ಗಳಾದ ದ್ವಿಜರು ಎಂದಿಗೂ ಅರಿಯರು.

ಏಕಾನ್ತಿನೋ ಹಿ ನಿರ್ದ್ವನ್ದ್ವಾಃ ನಿರಾಶೀಃ ಕರ್ಮಕಾರಿಣಃ |
ಜ್ಞಾನಾಗ್ನಿದಗ್ಧಕರ್ಮಾಣಃ ತ್ವಾಂ ವಿಶನ್ತಿ ವಿನಿಶ್ಚಿತಾಃ[4] || ೪೩ ||

೪೩. ಏಕಾಂತಿ (ಭಕ್ತರೂ) ದ್ವಂದ್ವರಹಿತರೂ ಫಲಾಶೆಯಿಲ್ಲದೆ ಕರ್ಮ ಮಾಡುವವರೂ ಆದ ಚಿಂತೆಯಿಲ್ಲದವರಾದ ಜ್ಞಾನವೆಂಬ ಅಗ್ನಿಯಿಂದ ಸುಡಲ್ಪಟ್ಟ ಕರ್ಮವುಳ್ಳವರು ನಿನ್ನನ್ನು ಸೇರುವರು.

ಅಶರೀರಂ ಶರೀರಸ್ಥಂ ಸಮಂ ಸರ್ವೇಷು ದೇಹಿಷು |
ಪುಣ್ಯಪಾಪವಿನಿರ್ಮುಕ್ತಾ ಭಕ್ತಾಸ್ತ್ವಾಂ ಪ್ರವಿಶನ್ತ್ಯುತ || ೪೪ ||

೪೪. ಅಶರೀರನಾಗಿದ್ದರೂ (ಎಲ್ಲಾ ಪ್ರಾಣಿಗಳ) ಶರೀರದಲ್ಲಿರುವನಾಗಿರುವ ಎಲ್ಲಾ ಜೀವರುಗಳಲ್ಲಿಯೂ ಸಮನಾಗಿರುವ ನಿನ್ನನ್ನು ಪುಣ್ಯಪಾಪಗಳಿಂದ ಬಿಡಲ್ಪಟ್ಟ ಭಕ್ತರು ಹೊಂದುವರು.

ಅವ್ಯಕ್ತಂ ಬುದ್ಧ್ಯಹಙ್ಕಾರಮನೋಭೂತೇನ್ದ್ರಿಯಾಣಿ ಚ |
ತ್ವಯಿ ತಾನಿ ಚ ತೇಷು ತ್ವಂ ನ ತೇಷು ತ್ವಂ ನ ತೇ ತ್ವಯಿ || ೪೫ ||

---

1. ಗೀ. ೧೩–೧೩ ರ ಸೂಚನೆ.

2. 'ಮಾನ್ಯಭಕ್ತಾಃ' ಪಾ|| 3. 'ಭವಕಾಃ' ಪಾ||

4. 'ವಿಚಿನ್ತಕಾಃ' ಪಾ||

೪೫. ಅವ್ಯಕ್ತ, ಬುದ್ಧಿ, ಅಹಂಕಾರ, ಮನಸ್ಸು, (ಪಂಚ)ಭೂತಗಳು, ಮತ್ತು ಇಂದ್ರಿಯಗಳು ಇವುಗಳೆಲ್ಲವೂ ನಿನ್ನಲ್ಲಿಯೇ (ತೋರಿಕೊಂಡಿರುವವು, ನೀನೂ ಅವುಗಳ (ಆತ್ಮನಾಗಿರುತ್ತೀಯೆ). ನಿಜವಾಗಿ ನೋಡಿದರೆ ನೀನು ಅವುಗಳಲ್ಲಿಲ್ಲ, ಅವೂ ನಿನ್ನಲ್ಲಿರುವದಿಲ್ಲ.[1]

ಏಕತ್ವಾನ್ಯತ್ವನಾನಾತ್ವಂ ಯೇ ವಿದುರ್ಯಾನ್ತಿ ತೇ ಪರಮ್ |
ಸಮೋಽಸಿ ಸರ್ವಭೂತೇಷು ನ ತೇ ದ್ವೇಷ್ಯೋಽಸ್ತಿ ನ ಪ್ರಿಯಃ[2] || ೪೬ ||

೪೬. (ಎಲ್ಲಾ ಪ್ರಾಣಿಗಳೂ ಪ್ರಲಯದಲ್ಲಿ ನಿನ್ನಲ್ಲಿಯೇ ಸೇರಿ ಒಂದಾಗುವವು- ಎಂಬ) ಏಕತ್ವ, (ಸೃಷ್ಟಿಕಾಲದಲ್ಲಿ ನಿನ್ನಿಂದ ಬೇರೆಯಾದಂತೆ ಹೊರತೋರಿಕೊಳ್ಳುವವು- ಎಂಬ) ಅನ್ಯತ್ವ, (ಸ್ಥಿತಿಕಾಲದಲ್ಲಿ ಒಂದೊಂದು ಬಿಡಿಯಾಗಿ ಅನೇಕವಾಗಿ ತೋರಿಕೊಳ್ಳುವವೆಂಬ) ನಾನಾತ್ವ- ಇವುಗಳನ್ನು ಯಾರು ಬಲ್ಲವರಾಗಿರುವರೋ ಅವರು ಪರಮ(ಪದವಿ)ಯನ್ನು ಹೊಂದುವರು. ನೀನು ಎಲ್ಲಾ ಭೂತಗಳಲ್ಲೂ ಸಮನಾಗಿರುವೆ. ನಿನಗೆ ಬೇಡದವನಾಗಲಿ, ಬೇಕಾದವನಾಗಲಿ ಇರುವದಿಲ್ಲ.

ಸಮತ್ವಮಭಿಕಾಙ್ಕ್ಷೇಽಹಂ ಭಕ್ತ್ಯಾ ವೈ ನಾನ್ಯಚೇತಸಾ ।
ಚರಾಚರಮಿದಂ ಸರ್ವಂ ಭೂತಗ್ರಾಮಂ ಚತುರ್ವಿಧಮ್ || ೪೭ ||
ತ್ವಯಾ ತ್ವಯ್ಯೇವ ತತ್ ಪ್ರೋತಂ ಸೂತ್ರೇ ಮಣಿಗಣಾ ಇವ ।
ಸ್ರಷ್ಟಾ ಭೋಕ್ತಾಸಿ ಕೂಟಸ್ಥೋ ಹ್ಯತತ್ತ್ವಸ್ತತ್ತ್ವಸಂಜ್ಞಿತಃ || ೪೮ ||

೪೭-೪೮. ನಾನು (ಎಲ್ಲಾ ಪ್ರಾಣಿಗಳಲ್ಲಿಯೂ)ಸಮ(ನಾಗಿರುವ)ನಿನ್ನನ್ನೇ ಭಕ್ತಿಯಿಂದ ಅನನ್ಯಚಿತ್ತನಾಗಿ ಚಿಂತಿಸಿ ಕಾಣಲು ಅಪೇಕ್ಷಿಸುತ್ತೇನೆ. ಚೇತನಾಚೇತನಾತ್ಮಕವಾದ ಈ ನಾಲ್ಕು ವಿಧವಾದ[3] ಪ್ರಾಣಿಗಳೆಲ್ಲವೂ ದಾರದಲ್ಲಿ ಮಣಿಗಳ ಸಮೂಹದಂತೆ[4] ನಿನ್ನಿಂದಲೇ ನಿನ್ನಲ್ಲಿಯೇ ಹೆಣೆಯಲ್ಪಟ್ಟಿರುವದು. (ಸ್ವತಃ) ತತ್ತ್ವಸ್ವರೂಪವನ್ನೂ ಮೀರಿರುವ[5] ತತ್ತ್ವಸಂಜ್ಞಿತನಾದ ಕೂಟಸ್ಥನಾದ ನೀನೇ ಸೃಷ್ಟಿಕರ್ತನೂ, ಭೋಕ್ತೃವೂ ಆಗಿರುವೆ.

ಅಕರ್ಮಾ[6]ಹೇತುರಚಲಃ ಪೃಥಗಾತ್ಮನ್ಯವಸ್ಥಿತಃ ।
ನ ತೇ ಭೂತೇಷು ಸಂಯೋಗೋ ಭೂತತತ್ತ್ವಗುಣಾತಿಗಃ || ೪೯ ||

1. ಗೀ. ೯-೪. ೫ರ ಶ್ಲೋಕಗಳನ್ನು ಇದಕ್ಕೆ ಹೋಲಿಸಿರಿ.
2. ಗೀ. ೯-೨೯ರ ಸೂಚನೆ.
3, ಜರಾಯುಜ, ಅಣ್ಡಜ, ಸ್ವೇದಜ, ಉದ್ಭಿಜ್ಜ- ಎಂಬ ನಾಲ್ಕು ವಿಧವಾದ,
4. ಗೀ. ೭-೭ರ ಸೂಚನೆ.
5. ತತ್ತ್ವವೆಂಬ ಶಬ್ದಕ್ಕೂ ವಾಚ್ಯನಲ್ಲದ ಎಂಬ ಅಭಿಪ್ರಾಯವಿರಬಹುದು-
6. 'ಅಕರ್ತಾ' ಎಂದು ಪಾ||

೪೯. ಕರ್ಮಗಳಿಗೆ ಕಾರಣನಲ್ಲದ ಅಚಲನಾದ(ನೀನು) (ಉಪಾಧಿಭೇದ ದಿಂದ ಒಬ್ಬೊಬ್ಬರಿಗೂ ಬೇರೆಬೇರೆಯಾಗಿ ಆತ್ಮನಾಗಿರುತ್ತೀಯೇ. ಭೂತಗಳೊಡನೆ ನಿನಗೆ ಸಂಬಂಧವು(ಎಂದೆಂದಿಗೂ)ಇರುವದಿಲ್ಲ. (ಮತ್ತು) ಭೂತತತ್ತ್ವಗಳ ಗುಣ ಗಳನ್ನೂ (ನೀನು) ಮೀರಿದವನಾಗಿರುತ್ತೀಯೆ.

ಅಹಙ್ಕಾರೇಣ ಬುದ್ಧ್ಯಾ ವಾ ನ ತೇ ಯೋಗಸ್ತ್ರಿಭಿರ್ಗುಣೈಃ ।
ನ ತೇ ಧರ್ಮೋಽಸ್ತ್ಯಧರ್ಮೋ ವಾ[1] ನಾರಮ್ಭೋ ಜನ್ಮ ವಾ ಪುನಃ ॥೫೦॥

೫೦. ಅಹಂಕಾರ, ಬುದ್ಧಿ– ಇವುಗಳೊಡನಾಗಲಿ ಮೂರು ಗುಣಗಳೊಡನೆ ಯಾಗಲಿ ನಿನಗೆ ಸಂಬಂಧವಿರುವದಿಲ್ಲ. ಧರ್ಮವಾಗಲಿ, ಅಧರ್ಮವಾಗಲಿ, ಉತ್ಪತ್ತಿಯಾಗಲಿ ಹುಟ್ಟಾಗಲಿ- ನಿನಗೆ ಏನೂ ಇರುವದಿಲ್ಲವಷ್ಟೆ!

ಜರಾಮರಣಮೋಕ್ಷಾರ್ಥಂ ತ್ವಾಂ ಪ್ರಪನ್ನೋಽಸ್ಮಿ ಸರ್ವಶಃ[2] ।
ಈಶ್ವರೋಽಸಿ ಜಗನ್ನಾಥ ತತಃ ಪರಮ ಉಚ್ಯಸೇ ॥ ೫೧ ॥

೫೧. ಮುಪ್ಪುಸಾವುಗಳಿಂದ ಬಿಡುಗಡೆಹೊಂದುವದಕ್ಕಾಗಿ ಎಲ್ಲಾ ರೀತಿ ಯಿಂದ ನಿನ್ನನ್ನು ಶರಣುಹೊಕ್ಕಿರುವೆನು. ಎಲೈ ಜಗನ್ನಾಥನೆ, ನೀನು ಈಶ್ವರ (ಸ್ವತಂತ್ರ)ನಾಗಿರುವೆ ; ಆದ್ದರಿಂದ ಪರಮನೆನಿಸಿರುತ್ತೀಯೆ.

ಭಕ್ತಾನಾಂ ಯದ್ಧಿತಂ ದೇವ ತದ್ಧ್ಯಾಹಿ ತ್ರಿದಶೇಶ್ವರ ।
ವಿಷಯೈರಿನ್ದ್ರಿಯೈರ್ವಾಪಿ ನ ಮೇ ಭೂಯಃ ಸಮಾಗಮಃ ॥ ೫೨ ॥

೫೨. ಎಲೈ ದೇವತೆಗಳೊಡೆಯನೆ, ಭಕ್ತರಿಗೆ ಯಾವದು ಹಿತವಾದುದೆಂದು ನೀನು ಭಾವಿಸುವೆಯೋ ಅದನ್ನು ಚಿಂತಿಸುವನಾಗು.[3] ವಿಷಯಗಳೊಡನೆ ಅಥವಾ ಇಂದ್ರಿಯಗಳೊಡನೆ ಮತ್ತೆ ಎಂದಿಗೂ ನನಗೆ ಸಂಬಂಧವುಂಟಾಗದಿರಲಿ.

ಪೃಥಿವೀಂ ಯಾತು ಮೇ ಘ್ರಾಣಂ[4] ಯಾತು ಮೇ ರಸನಾ ಜಲಮ್[5] ।
ರೂಪಂ[6] ಹುತಾಶನಂ ಯಾತು ಸ್ಪರ್ಶೋ ಯಾತು ಚ ಮಾರುತಮ್ ॥
ಶ್ರೋತ್ರಮಾಕಾಶಮಪ್ಯೇತು ಮನೋ ವೈಕಾರಿಕಂ ಪುನಃ ।
ಇನ್ದ್ರಿಯಾಣ್ಯಪಿ ಸಂಯಾನ್ತು ಸ್ವಾಸು ಸ್ವಾಸು ಚ ಯೋನಿಷು ॥ ೫೪ ॥

1. "ನ ಮೋಕ್ಷಧರ್ಮೋ ವಾ ನ ತ್ವಂ" ಎಂದು ಪಾ॥. ಆದರೆ ಈಗ ನಾವು ಕೊಟ್ಟಿರುವ ಪಾಠವೇ ಉತ್ತಮ.

2. 'ಸರ್ವಗ' ಎಂದು ಪಾ॥

3. ದಯಪಾಲಿಸು– ಎಂದಭಿಪ್ರಾಯ.

4. "ಗನ್ಧೋ ವೈ"

5, "ರಸಂ ಯಾತು ಜಲಂ ತಥಾ"

6. "ತೇಜ" ಎಂದು ಪಾ॥

೫೩–೫೪. ನನ್ನ ಘ್ರಾಣೇಂದ್ರಿಯವು ಪೃಥಿವೀತತ್ತ್ವವನ್ನು ಸೇರಲಿ. (ಹೀಗೆಯೇ) ನಾಲಿಗೆಯು ಜಲತತ್ತ್ವವನ್ನು ಆಕಾರ (ರೂಪ)ವು ಅಗ್ನಿಯನ್ನೂ ಸ್ಪರ್ಶೇಂದ್ರಿಯವು ವಾಯುವನ್ನೂ ಶ್ರೋತ್ರೇಂದ್ರಿಯವು ಆಕಾಶ(ತತ್ತ್ವ)ವನ್ನೂ ಮನಸ್ಸು ವಿರಾಟ್ (ತತ್ತ್ವ)ವನ್ನೂ ಸೇರಿಕೊಳ್ಳಲಿ. ಇಂದ್ರಿಯಗಳೆಲ್ಲವೂ ತಮ್ಮ ತಮ್ಮ ಕಾರಣಸ್ವರೂಪದಲ್ಲಿ ಸೇರಿಹೋಗಲಿ.

ಪೃಥಿವೀಂ ಯಾತು ಸಲಿಲಮಾಪೋಽಗ್ನಿಮನಲೋಽನಿಲಮ್ |
ವಾಯುರಾಕಾಶಮಪ್ಯೇತು ಮನಶ್ಚಾಕಾಶ ಏವ ಚ || ೫೫ ||

೫೫. ಭೂಮಿಯು ನೀರಿನಲ್ಲಿ ಒಂದಾಗಲಿ; ನೀರು ಬೆಂಕಿಯಲ್ಲಿ, ಬೆಂಕಿಯು ವಾಯುವಿನಲ್ಲಿ ವಾಯುವು ಮತ್ತು ಮನಸ್ಸು ಕೂಡ ಆಕಾಶದಲ್ಲಿ ಸೇರಿ ಲಯವಾಗಲಿ.

ಅಹಙ್ಕಾರಂ ಮನೋ ಯಾತು ಮೋಹನಂ ಸರ್ವದೇಹಿನಾಮ್ |
ಅಹಙ್ಕಾರಸ್ತತೋ ಬುದ್ಧಿಂ ಬುದ್ಧಿರವ್ಯಕ್ತಮಚ್ಯುತ || ೫೬ ||

೫೬. ಎಲೈ ಅಚ್ಯುತನೆ, ಎಲ್ಲಾ ಪ್ರಾಣಿಗಳಿಗೂ ಮೋಹವನ್ನುಂಟು ಮಾಡುವ ಮನಸ್ಸು ಅಹಂಕಾರವನ್ನು ಸೇರಲಿ; ಅನಂತರ ಅಹಂಕಾರವು ಬುದ್ಧಿಯನ್ನೂ ಬುದ್ಧಿಯು ಅವ್ಯಕ್ತ(ತತ್ತ್ವ)ವನ್ನೂ ಸೇರಿಕೊಳ್ಳಲಿ.

ಪ್ರಧಾನೇ ಪ್ರಕೃತಿಂ ಯಾತೇ ಗುಣಸಾಮ್ಯೇ ವ್ಯವಸ್ಥಿತೇ |
ವಿಯೋಗಃ ಸರ್ವಕರಣೈರ್ಗುಣಭೂತೈಶ್ಚ ಮೇ ಭವೇತ್ || ೫೭ ||

೫೭. (ಅವ್ಯಕ್ತವೆಂಬ) ಪ್ರಧಾನವು (ಮಹಾ)ಪ್ರಕೃತಿಯಲ್ಲಿ ಒಂದಾಗಲಾಗಿ ತ್ರಿಗುಣಗಳೂ ಸಮಾನಸ್ಥಿತಿಯಿಂದ ಇದ್ದುಕೊಂಡಿರಲಾಗಿ[1] ಗುಣಗಳಿಂದಾದ ಎಲ್ಲಾ ಕರಣಗಳೊಡನೆಯೂ ನನಗೆ ವಿಯೋಗವುಂಟಾಗಲಿ.

ನಿಷ್ಕೈವಲ್ಯಪದಂ ತಾತ ಕಾಙ್ಕ್ಷೇಽಹಂ ಪರಮಂ ತವ |
ಏಕೀಭಾವಸ್ತ್ವಯಾ ಮೇಽಸ್ತು ನ ಮೇ ಜನ್ಮ ಭವೇತ್ ಪುನಃ || ೫೮ ||

೫೮. ತಂದೆಯೆ, ನಾನು ಕೇವಲ ತಾನೊಂದೇ ಇರುವ ನಿನ್ನ ಪರಮಪದವಿಯನ್ನು ಬಯಸುವೆನು. ನಿನ್ನೊಡನೆ ಸೇರಿ ನಾನು ಒಂದಾಗುವಂತಾಗಲಿ! ನನಗೆ ಮತ್ತೂ ಹುಟ್ಟು ಬಾರದೆ ಇರಲಿ!

ತ್ವದ್ಬುದ್ಧಿಸ್ತ್ವದ್ಗತಪ್ರಾಣಸ್ತ್ವದ್ಭಕ್ತಸ್ತ್ವತ್ಪರಾಯಣಃ[2] |
ತ್ವಾಮೇವಾಹಂ ಸ್ಮರಿಷ್ಯಾಮಿ ಮರಣೇ ಪರ್ಯುಪಸ್ಥಿತೇ || ೫೯ ||

1. ಗುಣಗಳ ಸಾಮ್ಯವೇ ಪ್ರಲಯಾವಸ್ಥೆಯೆಂದು ಸಾಂಖ್ಯರ ಮತ.
2. ಗೀ. ೫–೧೭ರ ಶ್ಲೋಕವನ್ನು ಇದಕ್ಕೆ ಹೋಲಿಸಿರಿ.

೯. ನಿನ್ನಲ್ಲಿಯೇ ಬುದ್ಧಿಯುಳ್ಳವನಾಗಿ ನಿನ್ನನ್ನೇ ಆಶ್ರಯಿಸಿದ ಜೀವನ ವುಳ್ಳವನಾಗಿ ನಿನ್ನ ಭಕ್ತನಾಗಿ ನಿನ್ನನ್ನೇ ಪರಮಗತಿಯೆಂದು ನಂಬಿ ಸಾಯುವ (ಕಾಲವು) ಬರಲಾಗಿ ನಿನ್ನನ್ನೇ ಸ್ಮರಣೆಮಾಡುತ್ತೇನೆ.

ಪೂರ್ವದೇಹಕೃತಾ ಯೇ ಮೇ[1] ವ್ಯಾಧಯಃ ಪ್ರವಿಶನ್ತು ಮಾಮ್ |
ಅರ್ದಯನ್ತು ಚ ದುಃಖಾನಿ ಋಣಂ ಮೇ ಪ್ರತಿಮುಞ್ಚತು[2] || ೧೦ ||

೧೦. ಹಿಂದಿನ ಶರೀರದಲ್ಲಿ ಮಾಡಿರುವ (ಪಾಪಗಳ ಫಲವಾದ) ರೋಗಗಳೆಲ್ಲವೂ ನನ್ನನ್ನು ಪ್ರವೇಶಿಸಲಿ. ದುಃಖಗಳೆಲ್ಲವೂ ನನ್ನನ್ನು ಬಂದುಸೇರಲಿ ಸಾಲವು ನನ್ನನ್ನು ಬಿಟ್ಟುಹೋಗಲಿ !

ಅನುಧ್ಯಾತೋಽಸಿ ದೇವೇಶ ನ ಮೇ ಜನ್ಮ ಭವೇತ್ ಪುನಃ |
ತಸ್ಮಾದ್ ಬ್ರವೀಮಿ ಕರ್ಮಾಣಿ ಋಣಂ ಮೇ ನ ಭವೇದಿತಿ || ೧೧ ||

೧೧. ಎಲೈ ದೇವೇಶನೆ, ನಿನ್ನನ್ನು ನಾನು ಚೆನ್ನಾಗಿ ಧ್ಯಾನಮಾಡಿರುತ್ತೇನೆ. ನನಗೆ ಜನ್ಮವು ಮತ್ತೆ ಉಂಟಾಗದೆ ಇರಲಿ! ಆದ್ದರಿಂದ ಕರ್ಮಗಳಾಗಲಿ (ಅವುಗಳ ಫಲವೆಂಬ) ಸಾಲವಾಗಲಿ ನನಗೆ ಆಗದೆ ಇರಲಿ- ಎಂದು ಹೇಳುತ್ತೇನೆ.

ಉಪತಿಷ್ಠನ್ತು[3] ಮಾಂ ಸರ್ವೇ ವ್ಯಾಧಯಃ ಪೂರ್ವಸಂಚಿತಾಃ |
ಅನೃಣೋ ಗನ್ತುಮಿಚ್ಛಾಮಿ ತದ್ವಿಷ್ಣೋಃ ಪರಮಂ ಪದಮ್ || ೧೨ ||

೧೨. ಹಿಂದೆ ಕೂಡಿಹಾಕಿದ (ಪಾಪಗಳ ಫಲವಾದ) ರೋಗಗಳೆಲ್ಲವೂ ನನ್ನನ್ನು ಬಂದು ಸೇರಲಿ ! ಅವುಗಳನ್ನನುಭವಿಸಿ ಪೂರೈಸಿ ಸಾಲವಿಲ್ಲದವನಾಗಿ ವಿಷ್ಣುವಿನ ಪರಮಪದವನ್ನು ಸೇರಲಿಚ್ಛಿಸುವೆನು.

ಶ್ರೀ ಭಗವಾನುವಾಚ—

ಅಹಂ ಭಗವತಸ್ತಸ್ಯ ಮಮ ಚಾಸೌ ಸನಾತನಃ |
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ[4] || ೧೩ ||

೧೩. ಶ್ರೀಭಗವಂತನಿಂತೆಂದನು: ಭಗವತ್ ಸ್ವರೂಪನೇ ಆಗಿರುವ (ಭಕ್ತ)ನು ಯಾವನಿರುವನೋ ಅವನ (ಕಡೆಯವನೇ) ನಾನು, ಸನಾತನನಾದ ಅವನು ನನ್ನವನೇ (ಆಗಿರುವನು. ಹೀಗಿರುವದರಿಂದ) ಅವನಿಗೆ ನಾನು ಕಾಣದೆಹೋಗುವದಿಲ್ಲ. ನನಗೆ ಅವನೂ ಕಾಣದೆಹೋಗುವದಿಲ್ಲ.

1. 'ತು' ಪಾ॥ 2. 'ಪ್ರವಿಮುಞ್ಚತು' ಪಾ॥
3. 'ನೋಪತಿಷ್ಠನ್ತು' ಎಂದು ಪಾ॥ 4. ಗೀ. ೬-೩೦ನ್ನು ನೋಡಿರಿ.

ಕರ್ಮೇನ್ದ್ರಿಯಾಣಿ ಸಂಯಮ್ಯ ಪಞ್ಚ ಬುದ್ಧೀನ್ದ್ರಿಯಾಣಿ ಚ |
ದಶೇನ್ದ್ರಿಯಾಣಿ ಮನಸಿ ಅಹಙ್ಕಾರೇ ತಥಾ ಮನಃ || ೬೫ ||
ಅಹಙ್ಕಾರಂ ತಥಾ ಬುದ್ಧೌ ಬುದ್ಧಿಮಾತ್ಮನಿ ಯೋಜಯೇತ್ |
ಯತಬುದ್ಧೀನ್ದ್ರಿಯಃ ಪಶ್ಯನ್[1] ಬುದ್ಧ್ಯಾ ಬುಧ್ಯೇತ್ ಪರಾತ್ಪರಮ್

೬೪-೬೫. ಐದು ಕರ್ಮೇಂದ್ರಿಯಗಳು, (ಐದು) ಜ್ಞಾನೇಂದ್ರಿಯಗಳು. ಹೀಗೆ ಹತ್ತು ಇಂದ್ರಿಯಗಳನ್ನು ಮನಸ್ಸಿನಲ್ಲಿಯೂ, ಹಾಗೆಯೇ ಮನಸ್ಸನ್ನು ಅಹಂಕಾರದಲ್ಲಿಯೂ ಅಹಂಕಾರವನ್ನು ಬುದ್ಧಿಯಲ್ಲಿಯೂ ಬುದ್ಧಿಯನ್ನು ಆತ್ಮನಲ್ಲಿಯೂ ಲಯಗೊಳಿಸಿಕೊಳ್ಳಬೇಕು. ಹೀಗೆ ಇಂದ್ರಿಯಬುದ್ಧಿಗಳನ್ನು ನಿಯಮನಮಾಡಿಕೊಂಡವನಾಗಿ (ಶಾಸ್ತ್ರಾಚಾರ್ಯೋಪದೇಶಸಂಸ್ಕೃತವಾದ) ಬುದ್ಧಿಯಿಂದ ಪರಾತ್ಪರನಾದ (ಭಗವಂತನನ್ನು) ಅರಿತುಕೊಳ್ಳಬೇಕು.

ಮಮಾಯಮಿತಿ ಯಸ್ಯಾಹಂ ಯೇನ ಸರ್ವಮಿದಂ ತತಮ್ |
ಆತ್ಮನಾತ್ಮನಿ ಸಂಯೋಜ್ಯ ಪರಮಾತ್ಮನ್ಯನುಸ್ಮರೇತ್ || ೬೬ ||

೬೬. ಯಾವನಿಗೆ ಇವನು ನನ್ನವನು– ಎಂಬ (ಭಾವನೆಯುಂಟಾಗಿರುವದೋ)[2] ಯಾವ (ಬ್ರಹ್ಮದಿಂದ)ಇದೆಲ್ಲವೂ ವ್ಯಾಪ್ತವಾಗಿರುವದೋ (ಆ ಸ್ವರೂಪವನ್ನು)ಭಕ್ತನು ಚಿಂತಿಸುತ್ತಾ ಆತ್ಮನನ್ನು (ಮನಸ್ಸನ್ನು)ಆತ್ಮನಲ್ಲಿ (ಬುದ್ಧಿಯಲ್ಲಿ) ಲಯಮಾಡಿ ಅದನ್ನು ಪರಮಾತ್ಮ(ಚಿಂತನೆ)ಯಲ್ಲಿ ತೊಡಗಿಸಿ ಧ್ಯಾನಮಾಡಬೇಕು.

ತತೋ ಬುದ್ಧೇಃ ಪರಂ ಬುದ್ಧ್ವಾ ಲಭತೇನ ಪುನರ್ಭವಮ್
ಮರಣೇ ಸಮನುಪ್ರಾಪ್ತೇ ಯಶ್ಚೈವಂ ಮಾಮನುಸ್ಮರೇತ್ ೬೭
ಅಪಿ ಪಾಪಸಮಾಚಾರಃ ಸ ಯಾತಿ ಪರಮಾಂ ಗತಿಮ್

೬೭-೬೮. ಅನಂತರ ಬುದ್ಧಿಗಿಂತಲೂ ಹೆಚ್ಚಿನವನನ್ನು ಅರಿತವನಾಗಿ ಮರಳಿ ಸಂಸಾರವನ್ನು ಪಡೆಯುವದಿಲ್ಲ. ಯಾವನು ಮರಣ(ಕಾಲವು) ಬಂದೊದಗಲಾಗಿ ನನ್ನನ್ನು ಅನುಸ್ಮರಣೆ ಮಾಡುವನೋ ಅವನು ಪಾಪಕರ್ಮಿಯೇ ಆಗಿದ್ದರೂ (ಅದರಿಂದ ಬಿಡುಗಡೆಹೊಂದಿ) ಪರಮವಾದ ಗತಿಯನ್ನು ಪಡೆಯುವನು.

ಓಂ ನಮೋ ಭಗವತೇ ತಸ್ಮೈ ದೇಹಿನಾಂ ಪರಮಾತ್ಮನೇ || ೬೮ ||
ನಾರಾಯಣಾಯ ಭಕ್ತಾನಾಮೇಕನಿಷ್ಠಾಯ ಶಾಶ್ವತೇ |

೬೯. ದೇಹಧಾರಿಗಳೆಲ್ಲರಿಗೂ ಪರಮವಾದ ಆತ್ಮನಾದ ಭಕ್ತರುಗಳಿಗೆ ಮುಖ್ಯ ಆಶ್ರಯನಾದ ಶಾಶ್ವತನಾದ ಆ ನಾರಾಯಣಭಗವಂತನಿಗೆ ನಮಸ್ಕಾರವು

1. 'ಪಶ್ಯೇತ್' ಪಾ||
2. 'ಈ ಭಗವಂತನೇ ನನ್ನ ಆತ್ಮನು' ಎಂಬ ಭಾವನೆ.

ಇಮಾಮನುಸ್ಮೃತಿಂ ದಿವ್ಯಾಂ ವೈಷ್ಣವೀಂ ಸುಸಮಾಹಿತಃ || ೧೯ ||
ಸ್ವಪನ್ ವಿಬುಧ್ಯಂಶ್ಚ ಪಠನ್[1] ಯತ್ರ ತತ್ರ ಸಮಭ್ಯಸೇತ್ ।
ಪೌರ್ಣಮಾಸ್ಯಾಮಮಾಯಾಂ ಚ ದ್ವಾದಶ್ಯಾಂ ಚ ವಿಶೇಷತಃ || ೨೦ ||

೧೯--೨೦. ಈ ವಿಷ್ಣುಸಂಬಂಧವಾದ ದಿವ್ಯವಾದ ಅನುಸ್ಮೃತಿಯನ್ನು ಸಮಾಹಿತಚಿತ್ತವುಳ್ಳವನಾಗಿ ಮಲಗಿದ್ದಾಗ, ಎಚ್ಚತ್ತಿರುವಾಗ (ಹೀಗೆ) ಎಲ್ಲೆಲ್ಲಿ ಚೆನ್ನಾಗಿ ಪಠನಮಾಡುವನೋ; ವಿಶೇಷವಾಗಿ ಪೂರ್ಣಿಮೆ, ಅಮಾವಾಸ್ಯೆ, ದ್ವಾದಶೀ(ತಿಥಿ)ಗಳಲ್ಲಿ (ತಪ್ಪದೆ ಪಠಣಮಾಡುವವನೋ ಆ ಭಕ್ತನು ಸದ್ಗತಿಯನ್ನು ಪಡೆಯುವನು.)

ಶ್ರಾವಯೇತ್ ಶ್ರದ್ಧಧಾನಾಂಶ್ಚ ಮದ್ಭಕ್ತಾಂಶ್ಚ ವಿಶೇಷತಃ |
ಯದ್ಯಹಙ್ಕಾರಮಾಶ್ರಿತ್ಯ ಯಜ್ಞದಾನತಪಃಕ್ರಿಯಾಃ || ೨೧ ||
ಕುರ್ವಂಸ್ತತ್ಫಲಮಾಪ್ನೋತಿ ಪುನರಾವರ್ತನಂ ತು ತತ್[2] |

೨೧-೨೨. ಶ್ರದ್ಧಾವಂತರೂ ವಿಶೇಷವಾಗಿ ನನ್ನ ಭಕ್ತರೂ ಆಗಿರುವ (ಜನರಿಗೆ) ಯಾವನು (ಇದನ್ನು) ಶ್ರವಣಮಾಡಿಸುವನೋ (ಅವನು) ಅಹಂಕಾರದಿಂದ ಕೂಡಿ ಯಜ್ಞದಾನತಪಸ್ಸುಗಳನ್ನು ಮಾಡಿದ್ದರಿಂದ ಎಂಥ ಫಲವನ್ನು ಪಡೆಯುತ್ತಿದ್ದನೋ ಅಂಥ ಫಲವನ್ನು ಪಡೆಯುವನು ಆದರೆ ಆ ಫಲಗಳು ಮತ್ತೆ ಸಂಸಾರಕ್ಕೆ (ಅವನನ್ನು) ಹಿಂತಿರುಗಿಸುವವುಗಳು. (ಇದು ಹಾಗಲ್ಲ)

ಅಭ್ಯರ್ಚಯನ್ ಪಿತೄನ್ ದೇವಾನ್ ಪಠನ್ ಜುಹ್ವನ್ ಬಲಿಂ ದದತ್ ||
ಜ್ವಲನ್ನಗ್ನಿಂ ಸ್ಮರೇದ್ ಯೋ ಮಾಂ ಸ ಯಾತಿ ಪರಮಾಂ ಗತಿಮ್ |
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್[4] || ೨೩ ||

೨೨–೨೩. ಪಿತೃಗಳನ್ನೂ ದೇವತೆಗಳನ್ನೂ ಪೂಜಿಸುತ್ತಾ (ಈ ಸ್ತೋತ್ರವನ್ನು) ಪಠನಮಾಡುತ್ತಾ ಹೋಮಮಾಡುತ್ತಾ, ಬಲಿಪ್ರದಾನಮಾಡುತ್ತಾ ಅಗ್ನಿಯನ್ನು ಪ್ರಜ್ವಲನಗೊಳಿಸುತ್ತಾ ಯಾವನು ನನ್ನನ್ನು ಸ್ಮರಿಸುತ್ತಾನೋ ಅವನು ಪರಮಗತಿಯನ್ನೈದುವನು. ಯಜ್ಞವೂ ದಾನವೂ ತಪಸ್ಸೂ ತಿಳಿದವರಿಗೆ ಪಾವನವಾಗಿರುತ್ತವೆ.

1. 'ವಿಬುದ್ಧಶ್ಚ ಪಠೇತ್' ಎಂದು ಪಾ||

2. 'ನ ತು' ಎಂದು ಪಾ||

3. ಸಕಾಮನಾಗಿ ಯಜ್ಞಾದಿಗಳನ್ನು ಮಾಡಿದವನಿಗೆ ಆಯಾ ಸಂಸಾರಗೋಚರ ಫಲಗಳು ಮಾತ್ರ ಉಂಟಾಗುವವು. ಆದರೆ ಅನುಸ್ಮೃತಿಯನ್ನು ಶ್ರವಣಮಾಡಿಸಿದವನಿಗೆ ಈ ಫಲಗಳ ಜೊತೆಗೆ ಅಪುನರಾವೃತ್ತಿರೂಪವಾದ (ಮೋಕ್ಷ)ವೂ ದೊರೆಯುವುದೆಂತ ಹೊಗಳಿದೆ,

4. ಗೀ. ೧೮-೫ರ ಸೂಚನೆ 'ಶರೀರಿಣಾಮ್' ಎಂದು ಪಾ||

ಯಜ್ಞಂ ದಾನಂ ತಪಸ್ತಸ್ಮಾತ್ ಕುರ್ಯಾದಾಶೀರ್ವಿವರ್ಜಿತಃ |
ನಮ ಇತ್ಯೇವ ಯೋ ಬ್ರೂಯಾತ್ ಮದ್ಭಕ್ತಃ ಶ್ರದ್ಧಯಾನ್ವಿತಃ || ೭೪ ||
ತಸ್ಯಾಕ್ಷಯೋ ಭವೇಲ್ಲೋಕಃ ಶ್ವಪಾಕಸ್ಯಾಪಿ ನಾರದ |
ಕಿಂ ಪುನರ್ಯೇ ಯಜನ್ತೇ ಮಾಂ ಸಾಧಕಾ ವಿಧಿಪೂರ್ವಕಮ್ ||೭೫||

೭೪-೭೫. ಎಲೈ ನಾರದನೆ, ಆದ್ದರಿಂದ ಕಾಮವಿಲ್ಲದವನಾಗಿ ಯಜ್ಞ, ದಾನ, ತಪಸ್ಸು- (ಇವುಗಳನ್ನು) ಮಾಡಬೇಕು. ನನ್ನ ಭಕ್ತನಾದ ಯಾವನು ಶ್ರದ್ಧೆಯಿಂದ ಕೂಡಿದವನಾಗಿ 'ನಮಃ' ಎಂದು ಹೇಳುವನೋ ಅವನು ಚಂಡಾಲನೇ ಆಗಿದ್ದರೂ ಅಕ್ಷಯವಾದ ಲೋಕವು (ಅವನಿಗೆ) ದೊರಕುವದು. ಇನ್ನು ಸಾಧಕರಾದವರು (ಶಾಸ್ತ್ರ)ವಿಧಿಪೂರ್ವಕವಾಗಿ ಯಾರು ನನ್ನನ್ನು ಆರಾಧಿಸುವರೋ ಅವರಿಗೆ (ಪುಣ್ಯಲೋಕಗಳು ಉಂಟಾಗುವವೆಂದು) ಹೇಳತಕ್ಕದ್ದೇನಿದೆ?

ಶ್ರದ್ಧಾವನ್ತೋ ಯತಾತ್ಮಾನಃ ತೇ ಮಾಂ ಯಾನ್ತಿ ಮದಾಶ್ರಿತಾಃ |
ಕರ್ಮಾಣ್ಯಾದ್ಯನ್ತವನ್ತೀಹ ಮದ್ಭಕ್ತೋ ನಾನ್ತಮಶ್ನುತೇ[1] || ೭೬ ||

೭೬. ಶ್ರದ್ಧೆಯುಳ್ಳವರಾಗಿಯೂ ಪ್ರಯತ್ನಶೀಲರಾಗಿಯೂ ಇರುವ ಅವರು ನನ್ನನ್ನೇ ಆಶ್ರಯಿಸಿದವರಾಗಿ ನನ್ನನ್ನು ಬಂದು ಸೇರುವರು. (ವೈದಿಕ) ಕರ್ಮ(ಗಳ ಫಲಗಳಾದರೋ) ಮೊದಲುಕೊನೆಗಳುಳ್ಳದ್ದು. ನನ್ನ ಭಕ್ತನಾದರೋ ಇಂಥ ಅಂತವುಳ್ಳ (ಫಲಗಳನ್ನು) ಪಡೆಯುವದಿಲ್ಲ

ಮಾಮೇವ ತಸ್ಮಾದ್ದೇವರ್ಷೇ ಧ್ಯಾಹಿ ನಿತ್ಯಮತನ್ದ್ರಿತಃ |
ಅವಾಪ್ಸ್ಯಸಿ ತತಃ ಸಿದ್ಧಿಂ ದ್ರಕ್ಷ್ಯಸ್ಯೇವ ಪದಂ ಮಮ || ೭೭ ||

೭೭. ಆದ್ದರಿಂದ ಎಲೈ ದೇವರ್ಷಿಯೆ, ಯಾವಾಗಲೂ ಆಲಸ್ಯವಿಲ್ಲದೆ ನನ್ನನ್ನೇ ಧ್ಯಾನಿಸುವವನಾಗು. ಅನಂತರ ಸಿದ್ಧಿಯನ್ನು ಪಡೆಯುವೆ. (ಮತ್ತು) ನನ್ನ ಪದವಿಯನ್ನು ಕಂಡೇ ಕಾಣುವೆ.

ಅಜ್ಞಾನಿನೇ ಚ[2] ಯೋ ಜ್ಞಾನಂ ದದ್ಯಾದ್ ಧರ್ಮೋಪದೇಶತಃ |
ಕೃತ್ಸ್ನಾಂ ವಾ ಪೃಥಿವೀಂ ದದ್ಯಾತ್ ತೇನ ತುಲ್ಯಂ ಚ[3] ತತ್ಫಲಮ್ ||೭೮||

೭೮. ಅಜ್ಞಾನಿಯಾಗಿರುವವನಿಗೆ ಯಾವನು ಧರ್ಮೋಪದೇಶವನ್ನು ಮಾಡಿ ಜ್ಞಾನವನ್ನು ಕೊಡುವನೋ- (ಯಾವನು) ಇಡಿಯ ಭೂಮಿಯನ್ನೇ ದಾನ ಮಾಡುವನೋ (ಇವೆರಡು ದಾನಗಳ ಫಲಗಳಲ್ಲಿ) (ಭೂಮಿದಾನ)ದ ಫಲಕ್ಕೆ ಆ ಫಲವು ಸಮನಾಗಿರುವದು.

1. 'ಅಮೃತಮಶ್ನುತೇ' ಎಂದು ಪಾ॥
2. 'ಅಜ್ಞಾನಾಯ' ಎಂಬ ಗೀ॥ ಪಾಠಕ್ಕಿಂತ ಈ ಪಾಠವು ಶುದ್ಧವೆಂತ ಅಂಗೀಕರಿಸಿದೆ
3. 'ನ' ಎಂದು ಪಾ॥

**ತಸ್ಮಾತ್ ಪ್ರದೇಯಂ ಸಾಧುಭ್ಯೋ ಜನ್ಮಬನ್ಧಭಯಾಪಹಮ್ ।**
**ಏವಂ ದತ್ವಾ ನರಶ್ರೇಷ್ಠ ಶ್ರೇಯೋ ವೀರ್ಯಂ ಚ ವಿನ್ದತಿ ॥೭೯॥**

೭೯. ಆದ್ದರಿಂದ ಜನ್ಮ, ಬಂಧ, ಭಯಗಳನ್ನು ಕಳೆಯುವ (ಈ ಜ್ಞಾನವನ್ನು) ಸಾಧುಗಳಿಗೆ ಕೊಡಬೇಕು. ಎಲೈ ನರಶ್ರೇಷ್ಠನೆ, ಈ ರೀತಿಯಾಗಿ ದಾನಮಾಡಿದ್ದರಿಂದ ಶ್ರೇಯಸ್ಸನ್ನೂ ವೀರ್ಯವನ್ನೂ ಪಡೆಯುವನು.

**ಅಶ್ವಮೇಧಸಹಸ್ರಾಣಾಂ ಸಹಸ್ರಂ ಯಃ ಸಮಾಚರೇತ್ ।**
**ನಾಸೌ ಪದಮವಾಪ್ನೋತಿ ಮದ್ಭಕ್ತೈರ್ಯದವಾಪ್ಯತೇ ॥೮೦॥**

೮೦. ಯಾವನು ಸಾವಿರ ಅಶ್ವಮೇಧಯಜ್ಞಗಳ ಸಹಸ್ರವನ್ನು[1] ಮಾಡುವನೋ ಅವನು ಕೂಡ ನನ್ನ ಭಕ್ತರು ಪಡೆಯುವ ಪದವಿಯನ್ನು ಹೊಂದಲಾರನು.

**ಭೀಷ್ಮ ಉವಾಚ-**

**ಏವಂ ಪೃಷ್ಟಃ ಪುರಾ ತೇನ ನಾರದೇನ ಸುರರ್ಷಿಣಾ ।**
**ಯದುವಾಚ ತದಾऽಸೌ ಭೋ[2] ತದುಕ್ತಂ ತವ ಸುವ್ರತ ॥೮೧॥**

೮೧. ಭೀಷ್ಮನಿಂತೆಂದನು: ಈ ರೀತಿಯಾಗಿ ಆ ದೇವಋಷಿಯಾದ ನಾರದನಿಂದ ಕೇಳಲ್ಪಟ್ಟ ಆ (ವಿಷ್ಣುವು) ಏನನ್ನು ಹೇಳಿದನೋ ಎಲೈ ಸುವ್ರತನಾದ (ಧರ್ಮರಾಜನೆ), ಅದನ್ನು ನಿನಗೆ ಹೇಳಿರುತ್ತೇನೆ.

**ತ್ವಮಪ್ಯೇಕಮನಾ ಭೂತ್ವಾ ಧ್ಯಾಹಿ ಧ್ಯೇಯಂ[3] ಗುಣಾತಿಗಮ್ ।**
**ಭಜಸ್ವ ಸರ್ವಭಾವೇನ ಪರಮಾತ್ಮಾನಮವ್ಯಯಮ್ ॥೮೨॥**

೮೨. ನೀನೂ ಕೂಡ ಏಕಾಗ್ರಮನಸ್ಸಿನಿಂದ ಕೂಡಿದವನಾಗಿ ಗುಣಗಳನ್ನು ಮೀರಿರುವ (ಪರಮ)ಧ್ಯೇಯನಾದ (ಆ ಭಗವಂತನನ್ನು) ಧ್ಯಾನಮಾಡು. ಸರ್ವಭಾವದಿಂದಲೂ ಅವ್ಯಯನಾದ ಪರಮಾತ್ಮನನ್ನು ಭಜಿಸುವವನಾಗು.

**ಶ್ರುತ್ವೈತನ್ನಾರದೋ ವಾಕ್ಯಂ ದಿವ್ಯಂ ನಾರಾಯಣೇರಿತಮ್ ॥**
**ಅತ್ಯನ್ತಭಕ್ತಿಮಾನ್ ದೇವ ಏಕಾನ್ತತ್ವಮುಪೇಯಿವಾನ್ ॥೮೩॥**

೮೩. ನಾರಾಯಣನಿಂದ ಹೇಳಲ್ಪಟ್ಟ ದಿವ್ಯವಾದ ವಾಕ್ಯವನ್ನು ಕೇಳಿದ ನಾರದನು ದೇವನಲ್ಲಿ ಅತ್ಯಂತಭಕ್ತಿಯುಳ್ಳವನಾಗಿ ಏಕಾಂತತತ್ವವನ್ನು ಪಡೆದನು.

**ನಾರಾಯಣಮೃಷಿಂ ದೇವಂ ದಶ ವರ್ಷಾಣ್ಯನನ್ಯಭಾಕ್ ।**
**ಇದಂ ಜಪನ್ ವೈ ಪ್ರಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ ॥೮೪॥**

1. ಹತ್ತು ಲಕ್ಷ ಅಶ್ವಮೇಧಯಜ್ಞಗಳನ್ನು.
2. `ತದಾ ಶಮ್ಭುಃ' ಎಂದು ಗೀ ॥ ಪಾಠ
3. `ಜ್ಞೇಯ' ಎಂದು ಪಾ ॥

೮೪. ದೇವನಾದ ನಾರಾಯಣ ಋಷಿಯನ್ನು ಅನನ್ಯಭಕ್ತಿಯಿಂದ ಹತ್ತು ವರ್ಷಗಳ ಕಾಲ ಈ (ಸ್ತೋತ್ರದಿಂದ) ಜಪಮಾಡಿ ಸ್ತುತಿಸುವವನು ಆ ವಿಷ್ಣುವಿನ ಪರಮಪದವನ್ನು ಸೇರುವನು.

**ಕಿಂ ತಸ್ಯ ಬಹುಭಿರ್ಮನ್ತ್ರೈರ್ಭಕ್ತಿರ್ಯಸ್ಯ ಜನಾರ್ದನೇ ।**
**ನಮೋ ನಾರಾಯಣಾಯೇತಿ ಮನ್ತ್ರಃ ಸರ್ವಾರ್ಥಸಾಧಕಃ ॥೮೫॥**

೮೫. ಯಾವನಿಗೆ ಜನಾರ್ದನನಲ್ಲಿ ಭಕ್ತಿಯುಂಟಾಗಿರುವದೋ ಅವನಿಗೆ ಬಹಳ ಮಂತ್ರಗಳಿಂದ ಆಗಬೇಕಾದದ್ದೇನು? `ನಮೋ ನಾರಾಯಣಾಯ' ಎಂಬೀ ಮಂತ್ರವೇ ಎಲ್ಲಾ ಪ್ರಯೋಜನಗಳನ್ನೂ ಉಂಟುಮಾಡುವದಾಗಿದೆ.

**ಇಮಾಂ ರಹಸ್ಯಾಂ ಪರಮಾಮನುಸ್ಮೃತಿಮ್ ।**
**ಅಧೀತ್ಯ ಬುದ್ಧಿಂ ಲಭತೇ ಚ ನೈಷ್ಠಿಕೀಮ್ ॥**
**ವಿಹಾಯ ದುಃಖಾನ್ಯವಮುಚ್ಯ ಸಙ್ಕಟಾತ್ ।**
**ಸ ವೀತರಾಗೋ ವಿಚರೇನ್ಮಹೀಮಿಮಾಮ್**[1] **॥೮೬॥**

೮೬. ಈ ಪರಮರಹಸ್ಯವಾದ ಅನುಸ್ಮೃತಿಯನ್ನು ಅಧ್ಯಯನಮಾಡಿದವನು (ನಾರಾಯಣನಲ್ಲಿ) ನಿಷ್ಠೆಯನ್ನು ಹೊಂದಿದ ಬುದ್ಧಿಯನ್ನು ಪಡೆಯುವನು. ದುಃಖಗಳನ್ನು ಕಳೆದುಕೊಂಡವನಾಗಿ ಸಂಕಟದಿಂದ ಬಿಡುಗಡೆಹೊಂದಿ ವೈರಾಗ್ಯವಂತನಾಗಿ ಈ ಭೂಮಿಯಲ್ಲಿ ಸಂಚರಿಸುವವನಾಗುತ್ತಾನೆ.

ಇತಿ ಶ್ರೀ ಮಹಾಭಾರತೇ ಶಾನ್ತಿಪರ್ವಣಿ ಮೋಕ್ಷಧರ್ಮಪರ್ವಣಿ

ಅನುಸ್ಮೃತಿಃ ಸಮಾಪ್ತಾ

❖ ❖ ❖ ❖

|| ಓಮ್||

|| ಶ್ರೀ ಕೃಷ್ಣಾಯ ಪರಬ್ರಹ್ಮಣೇ ನಮಃ

# ಗಜೇಂದ್ರಮೋಕ್ಷ

(ಶ್ರೀಮದ್ಭಾಗವತ-ಎಂಟನೆಯ ಸ್ಕಂಧ -೨, ೩, ೪ ನೆಯ ಅಧ್ಯಾಯಗಳು1)

## ಎರಡನೆಯ ಅಧ್ಯಾಯ

### ತ್ರಿಕೂಟಪರ್ವತದ ವರ್ಣನೆ

**ಶ್ರೀ ಶುಕ ಉವಾಚ -**

**ಆಸೀದ್ ಗಿರಿವರೋ ರಾಜನ್ ತ್ರಿಕೂಟ ಇತಿ ವಿಶ್ರುತಃ ।**
**ಕ್ಷೀರೋದೇನಾವೃತಃ ಶ್ರೀಮಾನ್ ಯೋಜನಾಯುತಮುಚ್ಛ್ರಿತಃ ||೧||**

**ತಾವತಾ ವಿಸ್ತೃತಃ ಪರ್ಯಕ್ ತ್ರಿಭಿಃ ಶೃಙ್ಗೈಃ ಪಯೋನಿಧಿಮ್।**
**ದಿಶಃ ಖಂ ರೋಚಯನ್ನಾಸ್ತೇ ರೌಪ್ಯಾಯಸಹಿರಣ್ಮಯೈಃ ||೨||**

೧-೨, ಶ್ರೀ ಶುಕನಿಂತೆಂದನು: ಎಲೈ ರಾಜನೆ,[2] ಕ್ಷೀರಸಮುದ್ರದಿಂದ ಸುತ್ತುವರೆಯಲ್ಪಟ್ಟ ಲಕ್ಷ್ಮೀಯುಕ್ತವಾದ, ಹತ್ತು ಸಾವಿರ ಯೋಜನಗಳ ಎತ್ತರವಾದ ತ್ರಿಕೂಟವೆಂಬ ಪರ್ವತಶ್ರೇಷ್ಠವೊಂದುಂಟು. ಅಷ್ಟೇ (ಅಳತೆ)ಯಿಂದ ಸಮುದ್ರದವರೆಗೂ ಹರಡಿಕೊಂಡು ಇರುವದಾಗಿ, ಬೆಳ್ಳಿ, ಕಬ್ಬಿಣ, ಚಿನ್ನದ ಶಿಖರಗಳುಳ್ಳ(ಆ ಪರ್ವತವು) ದಿಕ್ಕುಗಳನ್ನೂ ಆಕಾಶವನ್ನೂ ತನ್ನ ಕಾಂತಿಯಿಂದ ಬೆಳಗುತ್ತಿದೆ.

1. ಗಜೇಂದ್ರ ಮೋಕ್ಷವು ಪಂಚರತ್ನಗೀತೆಗಳಲ್ಲಿ ಒಂದೆಂದು ಪ್ರಸಿದ್ಧವಾಗಿದೆ. 'ಗೀತಾ ಸಹಸ್ರನಾಮ ಚ ಸ್ತವರಾಜೋ-ಹ್ಯನುಸ್ಮೃತಿಃ'। ಗಜೇನ್ದ್ರಮೋಕ್ಷಣಂ ಚೈವ ಪಞ್ಚ ರತ್ನಾನಿ ಭಾರತೇ' ಎಂಬ ಶ್ಲೋಕವೂ ಮುದ್ರಿತಪುಸ್ತಕಗಳಲ್ಲಿ ಕಂಡುಬಂದಿದೆ. ಆದರೆ ಮಹಾಭಾರತದಲ್ಲಿ ಇದು ಸಿಗಲಿಲ್ಲ. ವಾಮನಪುರಾಣ, ಶ್ರೀಮದ್ಭಾಗವತಗಳಲ್ಲಿ ಮಾತ್ರ ಈ ಕಥೆಯು ಈಗ ಉಪಲಬ್ಧವಾಗಿದೆ. ಇನ್ನೂ ಯಾವದಾದರೂ ಪುರಾಣಗಳಲ್ಲಿ ಇದ್ದರೂ ಇರಬಹುದು. ನಾವು ಪಂಚರತ್ನಗೀತೆಗಳನ್ನು ಪೂರ್ಣವಾಗಿ ಪ್ರಕಟಿಸುವ ಉದ್ದೇಶವನ್ನು ಹೊಂದಿದ್ದು ವಿಚಾರಮಾಡಿದಾಗ ಶ್ರೀಮದ್ಭಾಗವತಾಂತರ್ಗತವಾದ ಈ ಕಥೆಯೇ ಬಹಳ ಚೆನ್ನಾಗಿದ್ದು ಸ್ತೋತ್ರವೂ ಅಧ್ಯಾತ್ಮವಿಚಾರಪ್ರಧಾನವಾಗಿ ಭಕ್ತರಿಗೆ ಹೃದಯಂಗಮವಾಗಿದೆಯೆಂತ ಕಂಡುಬಂದಿತು. ಆದ್ದರಿಂದ ಇದನ್ನು ಪ್ರಕಟಿಸಿದ್ದೇವೆ.

2. ಪರೀಕ್ಷಿದ್ರಾಜನಿಗೆ ಶುಕಮಹಾಮುನಿಗಳು ಭಾಗವತವನ್ನುಪದೇಶಿಸಿದ್ದಾರೆ. ಈವರೆಗೆ ಮನ್ವಂತರಗಳ ಕಥೆಯನ್ನು ಕೇಳಿದ ರಾಜನು 'ತಾಮಸವೆಂಬ ನಾಲ್ಕನೆಯ ಮನ್ವಂತರದಲ್ಲಿ ಹರಿಯೆಂಬ ಹೆಸರಿನಿಂದ ಭಗವಂತನು ಅವತಾರಮಾಡಿ ಮೊಸಳೆಯಿಂದ ಹಿಡಿಯಲ್ಪಟ್ಟಿದ್ದ ಗಜೇಂದ್ರನನ್ನು ಕಾಪಾಡಿದನು' - ಎಂದು ಶುಕರು ನುಡಿದದ್ದನ್ನು ಕೇಳಿ `ಪೂಜ್ಯರೆ, ಆ ಕಥೆಯನ್ನು ವಿವರವಾಗಿ ನನಗೆ ಹೇಳಬೇಕು' - ಎಂದು ಬೇಡಿಕೊಂಡನು. ಆಗ ಶುಕರು

**ಅನ್ಯೈಶ್ಚ ಕಕುಭಃ ಸರ್ವಾ ರತ್ನಧಾತುವಿಚಿತ್ರಿತೈಃ।**
**ನಾನಾದ್ರುಮಲತಾಗುಲ್ಮೈರ್ನಿರ್ಘೋಷೈರ್ನಿರ್ಜರಾಮ್ಭಸಾಮ್ಃ ||೩||**

**ಸ ಚಾವನಿಜ್ಯಮಾನಾಙ್ಘ್ರಿಃ ಸಮನ್ತಾತ್ ಪಯ ಊರ್ಮಿಭಿಃ।**
**ಕರೋತಿ ಶ್ಯಾಮಲಾಂ ಭೂಮಿಂ ಹರಿನ್ಮರಕತಾಶ್ಮಭಿಃ ||೪||**

೩-೪. ನಾನಾರತ್ನಗಳಿಂದಲೂ ವನಸ್ಪತಿಗಳಿಂದಲೂ ಅಲಂಕೃತವಾದ, ಅನೇಕ ಮರಬಳ್ಳಿಗಳು, ಪರ್ವತದಿಂದ ಜಾರಿಬೀಳುವ ನೀರಿನ ಝರಿಗಳ ಶಬ್ದಗಳು - ಇವುಗಳಿಂದ ಕೂಡಿದ ಇನ್ನೂ ಕೆಲವು ಶಿಖರಗಳಿಂದ ಎಲ್ಲಾ ದಿಕ್ಕುಗಳನ್ನೂ ಶೋಭಾಯಮಾನವಾಗಿ ಮಾಡಿರುವ ಆ ಪರ್ವತವು ಸುತ್ತಲೂ ನೀರಿನ ಅಲೆಗಳಿಂದ ತೊಳೆಯಲ್ಪಟ್ಟ ತಗ್ಗು ಪ್ರದೇಶವುಳ್ಳದ್ದಾಗಿ ಹಸಿರಾದ ಮರಕತವೆಂಬ ರತ್ನ (ಕಲ್ಲು) ಗಳಿಂದ ಭೂಮಿಯನ್ನು ಹಸಿರುವರ್ಣವಾಗಿ ಮಾಡಿರುವದು.

**ಸಿದ್ಧಚಾರಣಗನ್ಧರ್ವವಿದ್ಯಾಧರಮಹೋರಗೈಃ।**
**ಕಿನ್ನರೈರಪ್ಸರೋಭಿಶ್ಚ ಕ್ರೀಡದ್ಭಿರ್ಜುಷ್ಟಕನ್ದರಃ ||೫||**

೫. ಸಿದ್ಧರು, ಚಾರಣರು, ಗಂಧರ್ವರು, ವಿದ್ಯಾಧರರು, ಮಹಾನಾಗದೇವತೆಗಳು, ಕಿನ್ನರರು, ಅಪ್ಸರೆಯರು-ಮುಂತಾದವರಿಂದ ಯಾವಾಗಲೂ ಆಟವಾಡುತ್ತಾ ಸೇವಿಸಲ್ಪಟ್ಟಿರುವ ಗುಹೆಗಳಿಂದಲೂ (ಕೂಡಿರುವದು).

**ಯತ್ರ ಸಙ್ಗೀತಸನ್ನಾದೈರ್ನದದ್ಗುಹಮಮರ್ಷಯಾ।**
**ಅಭಿಗರ್ಜನ್ತಿ ಹರಯಃ ಶ್ಲಾಘಿನಃ ಪರಶಙ್ಕಯಾ ||೬||**

**ನಾನಾರಣ್ಯಪಶುವ್ರಾತಸಙ್ಕುಲದ್ರೋಣ್ಯಲಙ್ಕೃತಃ।**
**ಚಿತ್ರದ್ರುಮಸುರೋದ್ಯಾನಕಲಕಣ್ಠವಿಹಙ್ಗಮಃ ||೭||**

**ಸರಿತ್ಸರೋಭಿರಚ್ಛೋದೈಃ ಪುಲಿನೈರ್ಮಣಿವಾಲುಕೈಃ।**
**ದೇವಸ್ತ್ರೀಮಜ್ಜನಾಮೋದಸೌರಭಾಂಬ್ವನಿಲೈರ್ಯುತಃ ||೮||**

೬-೮. ಯಾವ (ತ್ರಿಕೂಟಪರ್ವತದಲ್ಲಿ) ಗಂಧರ್ವರೇ ಮುಂತಾದವರ ಸಂಗೀತದ ಧ್ವನಿಗಳಿಂದ ತುಂಬಿದ ಗುಹೆಗಳಲ್ಲಿರುವ ಶ್ರೇಷ್ಠವಾದ ಸಿಂಹಗಳು ಬೇರೊಂದು ಸಿಂಹದ ಧ್ವನಿಯೆಂಬ ಭ್ರಾಂತಿಯಿಂದ ಪ್ರತಿಗರ್ಜನೆಮಾಡುತ್ತಿರುವವು. ಅನೇಕ ಕಾಡುಪ್ರಾಣಿಗಳ ಸಮೂಹದಿಂದ, ದಟ್ಟವಾದ ತಪ್ಪಲುಗಳಿಂದ ಅಲಂಕೃತವಾಗಿಯೂ ವಿವಿಧವಾದ ಮರಗಳು, ದೇವತೆಗಳ ಉದ್ಯಾನಗಳಲ್ಲಿ ಓಡಾಡುವ ಹಕ್ಕಿಗಳ ಇಂಪಾದ ಧ್ವನಿಗಳಿಂದಲೂ (ಅದು) ಕೂಡಿರುವದು. ಸ್ವಚ್ಛವಾದ ತಿಳಿನೀರಿನಿಂದ ಕೂಡಿದ ಸಣ್ಣ ನದಿಗಳಿಂದಲೂ ಸರೋವರಗಳಿಂದಲೂ ಅವುಗಳ ದಡದಲ್ಲಿರುವ ರತ್ನಮಯವಾದ ಮರಳಿನ ಕಣಗಳ ದಿಣ್ಣೆಗಳಿಂದಲೂ ಕೂಡಿದ್ದು ದೇವತಾಸ್ತ್ರೀಯರುಗಳು ಸ್ನಾನಮಾಡಿದ್ದರಿಂದ ಉಂಟಾದ ಸುಗಂಧಮಯವಾದ ನೀರಿನ ಹನಿಗಳಿಂದ ಕೂಡಿದ ತಂಗಾಳಿಯಿಂದ ರಮ್ಯವಾಗಿರುವದು.

**ತಸ್ಯ ದ್ರೋಣ್ಯಾಂ ಭಗವತೋ ವರುಣಸ್ಯ ಮಹಾತ್ಮನಃ।**
[illegible] ||೯||

೯. ಆ (ಪರ್ವತದ) ತಗ್ಗಾದ ಪ್ರದೇಶದಲ್ಲಿ ದೇವತಾಸ್ತ್ರೀಯರ ಆಟದ ವನವಾದ, ಮಹಾತ್ಮನೂ ಪೂಜ್ಯನೂ ಆದ ವರುಣದೇವನ ಋತುಮತ್ ಎಂಬ ಹೆಸರಿನ ಉದ್ಯಾನವೊಂದಿರುವದು.

ಸರ್ವತೋಽಲಙ್ಕೃತಂ ದಿವ್ಯೈಃ ನಿತ್ಯಂ ಪುಷ್ಪಫಲದ್ರುಮೈಃ।
ಮನ್ದಾರೈಃ ಪಾರಿಜಾತೈಶ್ಚ ಪಾಟಲಾಶೋಕಚಮ್ಪಕೈಃ ॥೧೦॥
ಚೂತೈಃ ಪ್ರಿಯಾಲೈಃ ಪನಸೈರಾಮ್ರೈರಾಮ್ರಾತಕೈರಪಿ।
ಕ್ರಮುಕೈರ್ನಾರಿಕೇಲೈಶ್ಚ ಖರ್ಜೂರೈರ್ಬೀಜಪೂರಕೈಃ ॥೧೧॥
ಮಧೂಕೈಃ ಸಾಲತಾಲೈಶ್ಚ ತಮಾಲೈರಸನಾರ್ಜುನೈಃ।
ಅರಿಷ್ಟೋದುಮ್ಬರಪ್ಲಕ್ಷೈರ್ವಟೈಃ ಕಿಂಶುಕಚನ್ದನೈಃ ॥೧೨॥
ಪಿಚುಮನ್ದೈಃ ಕೋವಿದಾರೈಃ ಸರಲೈಃ ಸುರದಾರುಭಿಃ।
ದ್ರಾಕ್ಷೇಕ್ಷುರಮ್ಭಾಜಮ್ಬೂಭಿಃ ಬದರ್ಯಕ್ಷಾಭಯಾಮಲೈಃ ॥೧೩॥
ಬಿಲ್ವೈಃ ಕಪಿತ್ಥೈರ್ಜಂಬೀರೈರ್ವೃತೋ ಭಲ್ಲಾತಕಾದಿಭಿಃ।

೧೦-೧೩. ಮಂದಾರ, ಪಾರಿಜಾತ, ಪಾದರಿ, ಅಶೋಕ, ಸಂಪಿಗೆ (ಮುಂತಾದ ಹೂಗಿಡಗಳಿಂದ) ಮಾವು, ಮೊರಟೆ, ಹಲಸು, ಆಮ್ರ (ಮಾವಿನಲ್ಲಿ ವಿಶೇಷಜಾತಿ) ಅಮಟೆ, ಅಡಿಕೆ, ತೆಂಗು, ಖರ್ಜೂರ, ಸೀಬೆ, ಹಿಪ್ಪೆ, ಮತ್ತಿ, ಹರಿದಳ, ಹೊಂಗೆ, ತೋರುಮತ್ತಿ, ಬೇವು, ಅತ್ತಿ, ಬಸರಿ, ಆಲ, ಮುತ್ತಗ, (ಮೊದಲಾದ ಹಣ್ಣು, ನೆರಳುಗಳಿಗೆ ಪ್ರಸಿದ್ಧವಾದ ಮರಗಳಿಂದಲೂ) ಚಂದನ, ಬೇವು, ಕೆಂಪು ಕಾಂಚಿವಾಳದ ಗಿಡ, ದೇವದಾರು, ದ್ರಾಕ್ಷಿ, ಕಬ್ಬು, ಬಾಳೆ, ನೇರಲೆ, ಗೊರಟೆ, ತಾವರೆಗೆಡ್ಡೆ, ಲಾಮಂಚ, ಕಿರುನೆಲ್ಲಿ, ಬಿಲ್ವ, ಬೇಲ, ನಿಂಬೆ, ಗೇರು-ಮುಂತಾದ ಯಾವಾಗಲೂ ಹೂಹಣ್ಣುಗಳಿಂದ ಕೂಡಿರುವ ದಿವ್ಯವಾದ ಗಿಡಮರಗಳಿಂದಲೂ ಎಲ್ಲೆಲ್ಲಿಯೂ ಅಲಂಕೃತವಾಗಿರುವದು.

ತಸ್ಮಿನ್ ಸರಃ ಸುವಿಪುಲಂ ಲಸತ್ಕಾಞ್ಚನಪಙ್ಕಜಮ್ ॥೧೪॥
ಕುಮುದೋತ್ಪಲಕಲ್ಹಾರಶತಪತ್ರಶ್ರಿಯೋರ್ಜಿತಮ್।
ಮತ್ತಷಟ್ಪದನಿರ್ಘುಷ್ಟಂ ಶಕುನ್ತೈಶ್ಚ ಕಲಸ್ವನೈಃ ॥೧೫॥
ಹಂಸಕಾರಣ್ಡವಾಕೀರ್ಣಚಕ್ರಾಹ್ವೈಃ ಸಾರಸೈರಪಿ।
ಜಲಕುಕ್ಕುಟಕೋಯಷ್ಟಿದಾತ್ಯೂಹಕುಲಕೂಜಿತಮ್ ॥೧೬॥
ಮತ್ಸ್ಯಕಚ್ಛಪಸಞ್ಚಾರಚಲತ್ಪದ್ಮರಜಃಪಯಃ।
ಕದಮ್ಬವೇತಸನಲನೀಪವಞ್ಜುಲಕೈರ್ವೃತಮ್ ॥೧೭॥
ಕುನ್ದೈಃ ಕುರಬಕಾಶೋಕೈಃ ಶಿರೀಷೈಃ ಕುಟಜೇಙ್ಗುದೈಃ।
ಕುಬ್ಜಕೈಃ ಸ್ವರ್ಣಯೂಥೀಭಿರ್ನಾಗಪುನ್ನಾಗಜಾತಿಭಿಃ ॥೧೮॥
ಮಲ್ಲಿಕಾಶತಪತ್ರೈಶ್ಚ ಮಾಧವೀಜಾಲಕಾದಿಭಿಃ।
ಶೋಭಿತಂ ತೀರಜೈಶ್ಚಾನ್ಯೈರ್ನಿತ್ಯರ್ತುಭಿರಲಂ ದ್ರುಮೈಃ ॥೧೯॥

೧೪-೧೯. ಆ (ತ್ರಿಕೂಟಪರ್ವತದ ವನದಲ್ಲಿ) ದೊಡ್ಡದಾದ, ಚಿನ್ನದ ತಾವರೆಗಳಿಂದ ಹೊಳೆಯುತ್ತಿರುವ, ಬಿಳಿನೈದಿಲೆ, ನೈದಿಲೆ, ಕಲ್ಹಾರ, ತಾವರೆಗಳಿಂದ ಕೂಡಿ ಸುಂದರವಾಗಿರುವ, ಕೊಬ್ಬಿದ ಭ್ರಮರಗಳ ಝೇಂಕಾರದಿಂದ ಕೂಡಿರುವ, ಮಧುರವಾದ ಧ್ವನಿಯುಳ್ಳ ಹಕ್ಕಿಗಳಿಂದ ಆವೃತವಾಗಿರುವ, ಹಂಸ, ಕಾರಂಡವ, ಚಕ್ರವಾಕ, ಸಾರಸ-ಮುಂತಾದ (ಪಕ್ಷಿಗಳಿಂದ) ತುಂಬಿದ, ನೀರುಕೋಳಿ, ಕೀಚುಪಾಲ, ಮಳೆಗುಟುಕ, (ಈ ಹಕ್ಕಿಗಳ) ಧ್ವನಿಯಿಂದ ಶಬ್ದಾಯಮಾನವಾಗಿರುವ, ಮೀನು, ಆಮೆಗಳ ಸಂಚಾರದಿಂದ ಅಳ್ಳಾಡಿದ ಕಮಲದ ಧೂಳಿನಿಂದ ತುಂಬಿದ ನೀರುಳ್ಳ, ದಡವಲ್ಲಿರುವ ಈಚಲು, ಹಬ್ಬೆ, ದೇವಲಾಲಿ, ಬಂದುಗೆ, ಹುಲಿಗಿಲಿ, (ಮರಗಳಿಂದ ಕೂಡಿದ್ದಾಗಿರುವ) ಮತ್ತು ಕೋಲುಮಲ್ಲಿಗೆ, ಕೆಂಪುಗೋರಂಟಿ, ಅಶೋಕ, ಬಾಗೆ, ಬೆಟ್ಟಮಲ್ಲಿಗೆ, ಗಾರೆಗಿಡ, ಕುಬ್ಜಕ, ಹಳದಿಸೇವಂತಿಗೆ, ನಾಗ, ಸುರಹೊನ್ನೆ, ಮಲ್ಲಿಗೆ, ತಾವರೆ, ಮಾಧವೀಗಿಡದ ಎಳೆಮೊಗ್ಗು - (ಮುಂತಾದ ಇನ್ನೂ ಅನೇಕ ಹೂಗಿಡಮರಗಳಿಂದ) ಸುತ್ತಲೂ ಯಾವಾಗಲೂ ಎಲ್ಲಾ ಋತುಧರ್ಮಗಳಿಂದಲೂ ವಿರಾಜಮಾನವಾಗಿರುವ ಸರೋವರವು ಇದೆ.

## ಗಜೇಂದ್ರನ ವರ್ಣನೆ

**ತತ್ರೈಕದಾ ತದ್ಗಿರಿಕಾನನಾಶ್ರಯಃ ।**
**ಕರೇಣುಭಿರ್ವಾರಣಯೂಥಪಶ್ಚರನ್ ॥**
**ಸಕಣ್ಟಕಾನ್ ಕೀಚಕವೇಣುವೇತ್ರವದ್ ।**
**ವಿಶಾಲಗುಲ್ಮಂ ಪ್ರರುಜನ್ ವನಸ್ಪತೀನ್ ॥೨೦॥**

೨೦. ಒಂದು ಬಾರಿ ಆ ಪರ್ವತದ ಕಾಡುಗಳಲ್ಲಿ ವಾಸಿಸುತ್ತಿದ್ದ ಹೆಣ್ಣಾನೆಗಳೊಡನೆ ಕೂಡಿದ ಗುಂಪಿಗೆಲ್ಲ ಒಡೆಯನಾದ ಒಂದು ಆನೆಯು ಅಲ್ಲಿ ಓಡಾಡುತ್ತಾ ಮುಳ್ಳು, ಬಿದಿರು[1] ಬೆತ್ತಗಳ ದೊಡ್ಡದಾದ ಪೊದೆಯನ್ನೂ ಮರಗಳನ್ನೂ ಮುರಿಯುತ್ತಾ (ಸಂಚರಿಸುತ್ತಿತ್ತು.)

**ಯದ್ಗನ್ಧಮಾತ್ರಾದ್ ಹರಯೋ ಗಜೇನ್ದ್ರಾಃ ।**
**ವ್ಯಾಘ್ರಾದಯೋ ವ್ಯಾಲಮೃಗಾಃ ಸಖಡ್ಗಾಃ ॥**
**ಮಹೋರಗಾಶ್ಚಾಪಿ ಭಯಾದ್ ದ್ರವನ್ತಿ ।**
**ಸಗೌರಕೃಷ್ಣಾಃ ಶರಭಾಶ್ಚಮರ್ಯಃ ॥೨೧॥**

೨೧. ಯಾವ ಈ ಸಲಗನ ವಾಸನೆಯಿಂದಲೇ (ಹೆದರಿದ) ಸಿಂಹಗಳು, ದೊಡ್ಡ ಆನೆಗಳು ಹುಲಿಯೇ ಮೊದಲಾದ ಖಡ್ಗಮೃಗಗಳ ಸಮೇತವಾದ ಕ್ರೂರಪ್ರಾಣಿಗಳು, ದೊಡ್ಡ ಹಾವುಗಳು ಶರಭಗಳು, ಬಿಳುಪು ಹಾಗೂ ಕಪ್ಪಾದ ಚಮರೀಮೃಗಗಳು-ಮುಂತಾದವುಗಳ

1. ವೇಣುವೆಂದರೆ ಬಿದಿರೆಂದೂ ಕೀಚಕವೆಂದರೆ ಗಾಳಿಯಿಂದ ತುಂಬಿ ಶಬ್ದಮಾಡುತ್ತಿರುವ ಮಳೆಗಳೆಂದೂ

**ವೃಕಾ ವರಾಹಾ ಮಹಿಷರ್ಕ್ಷಶಲ್ಯಾಃ ।**
**ಗೋಪುಚ್ಛಶಾಲಾವೃಕಮರ್ಕಟಾಶ್ಚ ॥**
**ಅನ್ಯತ್ರ ಕ್ಷುದ್ರಾ ಹರಿಣಾಃ ಶಶಾದಯಃ ।**
**ಚರನ್ತ್ಯಭೀತಾ ಯದನುಗ್ರಹೇಣ ॥೨೨॥**

೨೨. ಯಾವ (ಗಜೇಂದ್ರನ) ಕೃಪೆಯಿಂದ ಅಲ್ಪಪ್ರಾಣಿಗಳಾದ ತೋಳಗಳು, ಹಂದಿಗಳು, ಕಾಡುಕೋಣ, ಕರಡಿ, ಮುಳ್ಳುಹಂದಿ, ಗೋಪುಚ್ಛ, ನರಿ, ಕೋತಿ, ಜಿಂಕೆ, ಮೊಲ - ಮೊದಲಾದವುಗಳು ಬೇರೆ ಕಡೆಗೆ ದೃಷ್ಟಿಯನ್ನಿಡದೆ ಭಯವಿಲ್ಲದೆ ಓಡಾಡುತ್ತಿದ್ದವು.[1]

**ಸ ಘರ್ಮತಪ್ತಃ ಕರಿಭಿಃ ಕರೇಣುಭಿಃ ।**
**ವೃತೋ ಮದಚ್ಯುತ್ ಕಲಭೈರನುದ್ರುತಃ ।**
**ಗಿರಿಂ ಗರಿಮ್ಣಾ ಪರಿತಃ ಪ್ರಕಮ್ಪಯನ್ ।**
**ನಿಷೇವ್ಯಮಾಣೋಽಲಿಕುಲೈರ್ಮದಾಶನೈಃ ॥೨೩॥**

೨೩. ಗಂಡಾನೆಗಳು, ಹೆಣ್ಣಾನೆಗಳು, ಮತ್ತು ಮದೋದಕವನ್ನು ಸುರಿಸುವಂಥ ಪ್ರಾಯದ ಆನೆಗಳೊಡನೆ ಸುತ್ತುವರೆಯಲ್ಪಟ್ಟ ಮತ್ತು ಮದೋದಕವನ್ನು ಸೇವಿಸುವ ದುಂಬಿಗಳಿಂದ ಆವೃತನಾದ ಆ (ಗಜರಾಜನು) ಬಿಸಿಲಿನಿಂದ ಬಳಲಿದವನಾಗಿ ಬೆಟ್ಟವನ್ನು ಸುತ್ತಲೂ ತಿರುಗುತ್ತಾ ತನ್ನ (ಬಲದಿಂದ) ಅಲ್ಲಾಡಿಸುತ್ತಾ (ಸಂಚರಿಸುತ್ತಿದ್ದನು.)

**ಸರೋಽನಿಲಂ ಪಙ್ಕಜರೇಣುರೂಷಿತಂ ।**
**ಜಿಘ್ರನ್ ವಿದೂರಾನ್ಮದವಿಹ್ವಲೇಕ್ಷಣಃ ॥**
**ವೃತಃ ಸ್ವಯೂಥೇನ ತೃಷಾರ್ದಿತೇನ ತತ್ ।**
**ಸರೋವರಾಭ್ಯಾಶಮಥಾಗಮದ್ ದ್ರುತಮ್ ॥೨೪॥**

೨೪. ಕಮಲದ ರೇಣುಗಳಿಂದ ತುಂಬಿದ ಸರೋವರದ (ಮೇಲೆ ಬೀಸಿ ಬರುತ್ತಿರುವ)ಗಾಳಿಯನ್ನು ದೂರದಿಂದಲೇ ಸೇವಿಸುತ್ತಾ ಕೊಬ್ಬಿನಿಂದ ಚಂಚಲವಾದ ಕಣ್ಣುಗಳುಳ್ಳವನಾಗಿ ಬಾಯಾರಿದ ತನ್ನ (ಆನೆಗಳ) ಗುಂಪಿನಿಂದ ಕೂಡಿ ಜಾಗ್ರತೆಯಾಗಿ (ಗಜರಾಜನು) ಆ ಸರೋವರದ ಸಮೀಪಕ್ಕೆ ಬಂದನು.

**ವಿಗಾಹ್ಯ ತಸ್ಮಿನ್ ಅಮೃತಾಮ್ಬು ನಿರ್ಮಲಂ ।**
**ಹೇಮಾರವಿನ್ದೋತ್ಪಲರೇಣುವಾಸಿತಮ್ ॥**
**ಪಪೌ ನಿಕಾಮಂ ನಿಜಪುಷ್ಕರೋದ್ಧೃತಂ ।**
**ಆತ್ಮಾನಮದ್ಭಿಃ ಸ್ನಪಯನ್ ಗತಕ್ಲಮಃ ॥೨೫॥**

1. ಗಜರಾಜನು ಸಂಚರಿಸುವ ಸ್ಥಳದಲ್ಲಿ ಬೇರೆ ಯಾವ ಬಲಿಷ್ಠಪ್ರಾಣಿಗಳೂ ತಮ್ಮನ್ನು ಹಿಂಸಿಸಲಾರವೆಂಬ ಧೈರ್ಯದಿಂದ ಓಡಾಡುತ್ತಿದ್ದವು.

೨೫. ಆ ಸರೋವರದಲ್ಲಿ ಇಳಿದು (ಮುಳುಗಿ) ಸುವರ್ಣಕಮಲಗಳ ಹಾಗೂ ನೈದಿಲೆಗಳ ಧೂಳಿನಿಂದ ಸುವಾಸಿತವಾದ ಅಮೃತ (ಕಲ್ಪ) ವಾದ ಜಲವನ್ನು ಬೇಕಾದಷ್ಟು ಕುಡಿದನು; (ಮತ್ತು) ತನ್ನ ಸೊಂಡಿಲಿನಿಂದ ಮೇಲಕ್ಕೆತ್ತಿದ ನೀರಿನಿಂದ ತನ್ನನ್ನು ಸ್ನಾನಮಾಡಿಸಿಕೊಂಡವನಾಗಿ[1] ಆಯಾಸವನ್ನು ಪರಿಹರಿಸಿಕೊಂಡ (ವನಾದನು).

ಸ್ವಪುಷ್ಕರೇಣೋದ್ಧೃತಶೀಕರಾಮ್ಬುಭಿಃ।
ನಿಪಾಯಯನ್ ಸಂಸ್ನಪಯನ್ ಯಥಾ ಗೃಹೀ ॥
ಘೃಣೀ ಕರೇಣೂಃ ಕಲಭಾಂಶ್ಚ ದುರ್ಮದೋ।
ನಾಚಷ್ಟ ಕೃಚ್ಛ್ರಂ ಕೃಪಣೋಽಜಮಾಯಯಾ ॥೨೬॥

೨೬. ದಯಾವಂತನಾದ, ಮದದಿಂದ ಉಬ್ಬಿದ ಗಜೇಂದ್ರನು ತನ್ನ ಸೊಂಡಲಿನಿಂದ ಎತ್ತಿದ ತಂಪಾದ ನೀರಿನಿಂದ ತನ್ನೊಡನೆ ಇದ್ದ ಹೆಣ್ಣಾನೆಗಳನ್ನೂ ಮದ್ದಾನೆಗಳನ್ನೂ ಸ್ನಾಮಾಡಿಸುತ್ತಾ ನೀರುಕುಡಿಸುತ್ತಾ, ಹೇಗೆ ಗೃಹಸ್ಥನಾದವನು (ವಿಷಯಾಸಕ್ತನಾಗಿದ್ದು ಮುಂದೆ ಬರುವ ಜರಾಮೃತ್ಯುಗಳನ್ನು ಅರಿಯದೆ ನಷ್ಟವಾಗುವನೋ ಹಾಗೆ)[2] ಬ್ರಹ್ಮಮಾಯೆಯಿಂದ (ಆವೃತನಾದ ಗಜರಾಜನು) ಮುಂದೆ ಬರುವ ಆಪತ್ತನ್ನು ಕಾಣಲಾರದೆ ಹೋದನು.

## ಗಜೇಂದ್ರನಿಗೆ ಒದಗಿದ ವಿಪತ್ತು

ತಂ ತತ್ರ ಕಶ್ಚಿನ್ನೃಪ ದೈವಚೋದಿತೋ।
ಗ್ರಾಹೋ ಬಲೀಯಾಂಶ್ಚರಣೇ ರುಷಾಽಗ್ರಹೀತ್ ॥
ಯದೃಚ್ಛಯೈವಂ ವ್ಯಸನಂ ಗತೋ ಗಜೋ।
ಯಥಾಬಲಂ ಸೋಽತಿಬಲೋ ವಿಚಕ್ರಮೇ ॥೨೭॥

೨೭. ಎಲೈ ರಾಜನೆ, ದೈವಪ್ರೇರಿತವಾದ ಒಂದು ಬಲಿಷ್ಠವಾದ ಮೊಸಳೆಯು ಆ (ಗಜರಾಜನನ್ನು) ಅಲ್ಲಿ (ಸರೋವರದಲ್ಲಿ) ಕೋಪದಿಂದ ಕಾಲನ್ನು ಹಿಡಿದುಬಿಟ್ಟಿತು.[3] ಅನಿರೀಕ್ಷಿತವಾಗಿ ಸಂಕಟವನ್ನು ಹೊಂದಿದ ಆ ಹೆಚ್ಚಿನ ಬಲಶಾಲಿಯಾದ ಗಜರಾಜನು ತನ್ನ ಶಕ್ತಿಯಿದ್ದಷ್ಟೂ (ಬಿಡಿಸಿಕೊಳ್ಳಲು) ಪ್ರಯತ್ನಮಾಡಿದನು.

ತಥಾತುರಂ ಯೂಥಪತಿಂ ಕರೇಣವೋ।
ವಿಕೃಷ್ಯಮಾಣಂ ತರಸಾ ಬಲೀಯಸಾ ॥
ವಿಚುಕ್ರುಶುರ್ದೀನಧಿಯೋಽಪರೇ ಗಜಾಃ।
ಪಾರ್ಷ್ಣಿಗ್ರಹಾಸ್ತಾರಯಿತುಂ ನ ಚಾಶಕನ್ ॥೨೮॥

1. ಸೊಂಡಲಿನಿಂದ ನೀರನ್ನು ಮೇಲೆತ್ತಿ ತನ್ನ ಮೈಗೆಲ್ಲ ಸುರಿದುಕೊಂಡು - ಎಂದರ್ಥ. ಆನೆಯು ನೀರಿಗೆ ಇಳಿದಾಗ ಬೇಗ ಹಿಂತಿರುಗುವದಿಲ್ಲ. ಬಹಳ ಹೊತ್ತು ನೀರಿನಲ್ಲಿ ಕ್ರೀಡೆಯಾಡುವದು. ಇದಕ್ಕೆ 'ಗಜಸ್ನಾನ' ವೆಂದು ಕರೆಯುತ್ತಾರೆ.
2. ತನ್ನ ಮನೆ, ಹೊಲ, ಹಣಕಾಸುಗಳಲ್ಲಿಯೂ ಹೆಂಡಿರು ಮಕ್ಕಳುಗಳಲ್ಲಿಯೂ ಅಭಿಮಾನವುಳ್ಳವನಾಗಿ ಅವುಗಳ ರಕ್ಷಣೆಯಲ್ಲೇ ಕಾಲಕಳೆದು ಕೊನೆಗೆ ಮೃತ್ಯುವಶನಾಗುವ ಪ್ರಾಕೃತಗೃಹಸ್ಥನಂತೆ - ಎಂಬ ಉಪಮಾನವನ್ನು ಕೊಟ್ಟಿದೆ.
3. ಪ್ರತಿಯೊಂದು ಪ್ರಾಣಿಯನ್ನೂ ಮೃತ್ಯುವೆಂಬ ಮೊಸಳೆಯು ಒಂದಲ್ಲ ಒಂದು ದಿನ ಹಿಡಿದು ನಾಶಮಾಡುವದೆಂಬುದನ್ನು ಸೂಚಿಸಿದೆ.

೨೮. ಹೀಗೆ ಸಂಕಟಕ್ಕೊಳಗಾದ, ಬಲಿಷ್ಠವಾದ (ಮೊಸಳೆಯಿಂದ) ವೇಗದಿಂದ ಎಳೆಯಲ್ಪಡುತ್ತಿರುವ ಗಜರಾಜನನ್ನು (ಕಂಡು) ಹೆಣ್ಣಾನೆಗಳು ದೈನ್ಯದಿಂದ ಕೂಡಿದ ಮನಸ್ಸುಳ್ಳವಾಗಿ ಕಿರಿಚಿಕೊಂಡವು. ಉಳಿದ ಆನೆಗಳು (ಅವನ) ಹಿಂಭಾಗದ (ಕಾಲುಗಳನ್ನು) ಹಿಡಿದು ಎಳೆಯಲಾರಂಭಿಸಿದವಾದರೂ ಬಿಡಿಸಲು ಸಮರ್ಥವಾಗಲಿಲ್ಲ[1]

**ನಿಯುಧ್ಯತೋರೇವಮಿಭೇನ್ದ್ರನಕ್ರಯೋಃ।**
**ವಿಕರ್ಷತೋರನ್ತರತೋ ಬಹಿರ್ಮಿಥಃ॥**
**ಸಮಾಃ ಸಹಸ್ರಂ ವ್ಯಗಮನ್ ಮಹೀಪತೇ।**
**ಸಪ್ರಾಣಯೋಶ್ಚಿತ್ರಮಮಂಸತಾಮರಾಃ ॥೨೯॥**

೨೯. ಎಲೈ ರಾಜನೆ, ಹೀಗೆ ಯುದ್ಧಮಾಡುತ್ತಿರುವ, ಅನ್ಯೋನ್ಯವಾಗಿ ಹೊರಕ್ಕೂ, ಒಳಕ್ಕೂ ಎಳೆದಾಡುತ್ತಿರುವ, ಪ್ರಾಣಮಾತ್ರವೇ ಉಳಿದುಕೊಂಡಿರುವ ಗಜೇಂದ್ರ, ಮೊಸಳೆಗಳ (ಸೆಣಸಾಟದಲ್ಲಿ) ಒಂದು ಸಾವಿರ ವರ್ಷ (ಗಳೇ) ಕಳೆದುಹೋದವು. ದೇವತೆಗಳೆಲ್ಲ ಇದೊಂದು (ಮಹಾ) ಶ್ಚರ್ಯವೆಂದು ಭಾವಿಸಿದರು.

**ತತೋ ಗಜೇನ್ದ್ರಸ್ಯ ಮನೋಬಲೌಜಸಾಂ।**
**ಕಾಲೇನ ದೀರ್ಘೇಣ ಮಹಾನಭೂದ್ ವ್ಯಯಃ।**
**ವಿಕೃಷ್ಯಮಾಣಸ್ಯ ಜಲೇಽವಸೀದತೋ-**
**ವಿರ್ಪಯರ್ಯೋಽಭೂತ್ ಸಕಲಂ ಜಲೌಕಸಃ ॥೩೦॥**

೩೦. ಅನಂತರ ದೀರ್ಘವಾದ ಕಾಲದ ಆ (ಹೋರಾಟದಿಂದ) ಗಜೇಂದ್ರನ ಉತ್ಸಾಹವೂ ಶರೀರಬಲವೂ ಇಂದ್ರಿಯಬಲವೂ ಬಹಳವಾಗಿ ನಾಶವಾಯಿತು. ನೀರಿನಲ್ಲಿದ್ದುಕೊಂಡು ಎಳೆಯುತ್ತಿರುವ ಮೊಸಳೆಯ ಎಲ್ಲಾ (ಶಕ್ತಿಯೂ) ವಿಪರೀತವಾಗಿ ಹೆಚ್ಚಿತು.

## ಗಜೇಂದ್ರನ ನಿಶ್ಚಯ

**ಇತ್ಥಂ ಗಜೇನ್ದ್ರಃ ಸ ಯದಾಪ ಸಙ್ಕಟಂ।**
**ಪ್ರಾಣಸ್ಯ ದೇಹೀ ವಿವಶೋ ಯದೃಚ್ಛಯಾ॥**
**ಅಪಾರಯನ್ನಾತ್ಮವಿಮೋಕ್ಷಣೇ ಚಿರಂ।**
**ದಧ್ಯಾವಿಮಾಂ ಬುದ್ಧಿಮಥಾಭ್ಯಪದ್ಯತ ॥೩೧॥**

೩೧. ಈ ರೀತಿಯಾಗಿ ಆ ಗಜೇಂದ್ರನು ಪ್ರಾಣಸಂಕಟವನ್ನು ಅಕಸ್ಮಾತ್ತಾಗಿ ಹೊಂದಿದವನಾಗಿ ಯಾವಾಗ ವಿವಶನಾದನೋ (ಆಗ) ತನ್ನ ಬಿಡುಗಡೆಯ (ಉಪಾಯವನ್ನು) ಕಾಣಲಾರದವನಾಗಿ ಬಹಳಕಾಲ ಚಿಂತಿಸಿ ಈ ನಿಶ್ಚಯವನ್ನು ಮಾಡಿದನು.

1. ಮಾನವನು ಮೃತ್ಯುವಶನಾಗಲಿರುವಾಗ ಅವನ ಯಾವ ಬಂಧುಗಳಾಗಲಿ, ಧನಕನಕಾದಿಗಳಾಗಲಿ ಅವನನ್ನು ಬಿಡಿಸಲಾರವು - ಎಂಬಿದನ್ನು ಈ ಸಂದರ್ಭವು ಸೂಚಿಸುತ್ತದೆ.

ನ ಮಾಮಿಮೇ ಜ್ಞಾತಯ ಆತುರಂ ಗಜಾಃ ।
ಕುತಃ ಕರಿಣ್ಯಃ ಪ್ರಭವನ್ತಿ ಮೋಚಿತುಮ್ ॥
ಗ್ರಾಹೇಣ ಪಾಶೇನ ವಿಧಾತುರಾವೃತೋ-
ಪ್ಯಹಂ ಚ ತಂ ಯಾಮಿ ಪರಂ ಪರಾಯಣಮ್ ॥೩೨॥

೩೨. ಈ ಬಂಧುಗಳಾದ ಆನೆಗಳು ಸಂಕಟಕ್ಕೊಳಗಾದ ನನ್ನನ್ನು ಬಿಡಿಸಲಾರರು. ಇನ್ನು ಹೆಣ್ಣಾನೆಗಳು ತಾನೆ ಹೇಗೆ ಬಿಡಿಸಲು ಸಮರ್ಥವಾದಾವು? ವಿಧಿಯ ಪಾಶ (ದಂತಿರುವ) ಮೊಸಳೆಯಿಂದ ಹಿಡಿಯಲ್ಪಟ್ಟಿರುವ ನಾನಾದರೋ (ಈಗ) ಪರಾಯಣನಾದ ಆ ಪರಮ (ಪುರುಷನನ್ನು) ಬಳಿಸಾರುವೆನು[1]

ಯಃ ಕಶ್ಚನೇಶೋ ಬಲಿನೋಽನ್ತಕೋರಗಾತ್ ।
ಪ್ರಚಣ್ಡವೇಗಾದಭಿಧಾವತೋ ಭೃಶಮ್ ॥
ಭೀತಂ ಪ್ರಪನ್ನಂ ಪರಿಪಾತಿ ಯದ್ಭಯಾತ್ ॥
ಮೃತ್ಯುಃ ಪ್ರಧಾವತ್ಯರಣಂ ತಮೀಮಹಿ ॥೩೩॥

೩೩. ಭಯಂಕರವೇಗವುಳ್ಳ, ಹಠಾತ್ತನೆ ಎರಗಿಬೀಳುವ ಬಲಿಷ್ಠನಾದ ಯಮನೆಂಬ ಹಾವಿನ (ಭಯದಿಂದ) ಹೆದರಿ ಶರಣಾದವನನ್ನು ಕಾಪಾಡಲು ಯಾವನು ಸಮರ್ಥನೋ, ಯಾವನ ಭಯದಿಂದ ಮೃತ್ಯುವೇ ಹೆದರಿ ಓಡುತ್ತಾನೋ[2] ಅಂಥ ಶರಣ್ಯನಾದ (ಭಗವಂತನನ್ನು) ಸ್ತುತಿಸಿ ಬಳಿಸಾರುವೆನು.

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಅಷ್ಟಮಸ್ಕನ್ಧೇ

ದ್ವಿತೀಯೋಽಧ್ಯಾಯಃ

1. ಆಪತ್ಕಾಲದಲ್ಲಿಯಾದರೂ ಭಗವಂತನನ್ನೇ ಶರಣುಹೊಂದುವ ಬುದ್ಧಿಯು ಪುಣ್ಯವಂತರಿಗೆ ಮಾತ್ರವೇ ಉಂಟಾದೀತು. ಹಾಗಿಲ್ಲದೆ ಆಪತ್ತಿಗೆ ಒಳಗಾದವರೆಲ್ಲ ಭಗವಂತನನ್ನೇ ನೆನೆಯುವರೆಂಬ ಭರವಸೆಯು ಇರುವದಿಲ್ಲ. ಗೀ. ೭-೧೬ನ್ನು ನೋಡಿರಿ.

೨-[illegible]

# ಮೂರನೆಯ ಅಧ್ಯಾಯ

## ಗಜೇಂದ್ರನು ಮಾಡಿದ ಭಗವಂತನ ಸ್ತುತಿ

ಶ್ರೀ ಶುಕ ಉವಾಚ-
ಏವಂ ವ್ಯವಸಿತೋ ಬುದ್ಧ್ಯಾ ಸಮಾಧಾಯ ಮನೋ ಹೃದಿ ।
ಜಜಾಪ ಪರಮಂ ಜಾಪ್ಯಂ ಪ್ರಾಗ್ಜನ್ಮನ್ಯನುಶಿಕ್ಷಿತಮ್ ॥೧॥

೧. ಶ್ರೀಶುಕನಿಂತೆಂದನು: ಈ ರೀತಿಯಾಗಿ ಬುದ್ಧಿಯಿಂದ ನಿಶ್ಚಯಿಸಿಕೊಂಡು ಮನಸ್ಸನ್ನು ಹೃದಯದಲ್ಲಿ ನೆಲೆಗೊಳಿಸಿ ಹಿಂದಿನ ಜನ್ಮದಲ್ಲಿ[1] (ಗುರುಶಾಸ್ತ್ರೋಪದೇಶಗಳಿಂದ) ಅಭ್ಯಾಸಮಾಡಿದ್ದರಿಂದ ಪರಮವಾದ ಜಪಕ್ಕೆ ತಕ್ಕ (ಭಗವಂತನ ಸ್ತೋತ್ರವನ್ನು) ಪಠಿಸಿದನು.

ಗಜೇನ್ದ್ರ ಉವಾಚ -
ಓಂ ॥ ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಮ್ ।
ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ॥೨॥

೨. ಗಜೇಂದ್ರನಿಂತೆಂದನು: ಯಾವಾತನಿಂದ ಈ ಜಗತ್ತು ಉಂಟಾಗಿ ಚಿದಾತ್ಮಕವಾಗಿಯೇ ಇರುವದೋ ಆ ಭಗವಂತನಿಗೆ, ಆದಿಕಾರಣನಾದ ಪುರುಷನಿಗೆ, ಪರಮೇಶ್ವರನಿಗೆ ಓಂ ! ನಮಸ್ಕಾರವಚನವನ್ನು ಹೇಳುತ್ತಿದೇವೆ.

ಯಸ್ಮಿನ್ನಿದಂ ಯತಶ್ಚೇದಂ ಯೇನೇದಂ ಯ ಇದಂ ಸ್ವಯಮ್ ।
ಯೋಽಸ್ಮಾತ್ ಪರಸ್ಮಾಚ್ಚ ಪರಸ್ತಂ ಪ್ರಪದ್ಯೇ ಸ್ವಯಂಭುವಮ್ ॥೩॥

೩. ಈ ಜಗತ್ತು ಯಾವಾತನಲ್ಲೇ ಇರುವದೋ ಯಾವಾತನಿಂದಲೇ ಇದು ಬಂದಿರುವದೋ[2] ಯಾವನಿಂದ ಇದು ನಿಯಂತ್ರಿತವಾಗಿದೆಯೋ ಯಾವನು ತಾನೇ ಇದಾಗಿರುವನೋ ಯಾವನು ಈ ಜಗತ್ತಿಗಿಂತಲೂ ಇದರ ಕಾರಣಕ್ಕಿಂತಲೂ ಪರಮನಾಗಿರುವನೋ ಆ ಸ್ವಯಂಭುವನ್ನು ಶರಣುಹೊಕ್ಕಿರುವೆನು.

ಯಃ ಸ್ವಾತ್ಮನೀದಂ ನಿಜಮಾಯಯಾರ್ಪಿತಂ ।
ಕ್ವಚಿದ್ವಿಭಾತಂ ಕ್ವ ಚ ತತ್ತಿರೋಹಿತಮ್ ॥
ಅವಿದ್ಧದೃಕ್ ಸಾಕ್ಷ್ಯುಭಯಂ ತದೀಕ್ಷತೇ ।
ಸ ಆತ್ಮಮೂಲೋಽವತು ಮಾಂ ಪರಾತ್ಪರಃ ॥೪॥

1. ಗೀ. ೭-೧೯ರ ಸೂಚನೆ.
2. 'ಯತೋ ವಾ ಇಮಾನಿ ಭೂತಾನಿ ಜಾಯನ್ತೇ....' (ತೈ. ೩-೧) ಎಂಬ ಉಪನಿಷದ್ವಾಕ್ಯವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

೪. ಯಾವಾತನು ತನ್ನಲ್ಲಿ ಮಾಯೆಯಿಂದ ತೋರಿಸಲ್ಪಡುತ್ತಿರುವ (ಈ ಜಗತ್ತಿನ) ಕೆಲವು ವೇಳೆ ತೋರುವಿಕೆ, ಕೆಲವು ವೇಳೆ ಮೊಳೆತು ಮರೆಯಾಗುವಿಕೆ ಈ ಎರಡನ್ನೂ ಅಲುಪ್ತದೃಷ್ಟಿಯಿಂದೊಡಗೂಡಿದ ಸಾಕ್ಷಿಯಾಗಿ[1] ನೋಡುತ್ತಿರುವನೋ ಆ ತನಗೆ ತಾನೇ ಮೂಲನಾಗಿರುವ ಪರಾತ್ಪರನು ನನ್ನನ್ನು ಕಾಪಾಡಲಿ !

**ಕಾಲೇನ ಪಞ್ಚತ್ವಮಿತೇಷು ಕೃತ್ಸ್ನಶಃ ।**
**ಲೋಕೇಷು ಪಾಲೇಷು ಚ ಸರ್ವಹೇತುಷು ॥**
**ತಮಸ್ತದಾಸೀದ್ ಗಹನಂ ಗಭೀರಂ ।**
**ಯಸ್ತಸ್ಯ ಪಾರೇಽಭಿವಿರಾಜತೇ ವಿಭುಃ ॥೫॥**
**ನ ಯಸ್ಯ ದೇವಾ ಋಷಯಃ ಪದಂ ವಿದುಃ ।**
**ಜನ್ತುಃ ಪುನಃ ಕೋಽರ್ಹತಿ ಗನ್ತುಮೀರಿತುಮ್ ॥**
**ಯಥಾ ನಟಸ್ಯಾಕೃತಿಭಿರ್ವಿಚೇಷ್ಟತೋ ॥**
**ದುರತ್ಯಯಾನುಕ್ರಮಣಃ ಸ ಮಾಽವತು ॥೬॥**

೫-೬. ಲೋಕಗಳೂ ಲೋಕಪಾಲಕರೂ ಸಮಸ್ತಲೋಕಗಳೂ -ಇವೆಲ್ಲ ಕಾಲಾನುಕಾಲಕ್ಕೆ ಸಂಪೂರ್ಣವಾಗಿ ನಾಶವಾಗಲು ಗಹನವಾದ ದಟ್ಟವಾದ ಕತ್ತಲೆಯೊಂದೇ ಆವರಿಸಿಕೊಂಡಿರುವಲ್ಲಿ[2] ಯಾವ ವಿಭುವು ಅದರಿಂದಾಚೆಗೆ ಪ್ರಕಾಶಿಸುತ್ತಿರುವನೋ ಯಾವಾತನ ಸ್ಥಾನವನ್ನು ದೇವತೆಗಳಾಗಲಿ ಋಷಿಗಳಾಗಲೀ ಅರಿಯಲಾರರೋ[3] ಮಿಕ್ಕ ಜೀವನು ಹೇಗೆ ತಾನೆ ಅರಿತಾನು? ಹೇಳಿಯಾನು? ಬಗೆಬಗೆಯ ವೇಷಗಳಿಂದ ಅಭಿನಯಿಸುವ ನಟನನ್ನು ಗೊತ್ತುಪಡಿಸಲಾಗದಿರುವಂತೆ,[4] ಯಾವನನ್ನು ಅನುಸರಿಸಿ ತಿಳಿಯುವದು ಯಾರಿಂದಲೂ ಆಗದೋ ಆತನು ನನ್ನನ್ನು ಕಾಪಾಡಲಿ.

**ದಿದೃಕ್ಷವೋ ಯಸ್ಯ ಪದಂ ಸುಮಙ್ಗಲಂ ।**
**ವಿಮುಕ್ತಸಙ್ಗಾ ಮುನಯಃ ಸುಸಾಧವಃ ॥**
**ಚರನ್ತ್ಯಲೋಕವ್ರತಮವ್ರಣಂ ವನೇ ।**
**ಭೂತಾತ್ಮಭೂತಾಃ ಸುಹೃದಃ ಸ ಮೇ ಗತಿಃ ॥೭॥**

೭. ಯಾವಾತನ ಅತ್ಯಂತಮಂಗಲವಾದ ಪರಮಪದವನ್ನು ಕಾಣಬೇಕೆಂದು ಸಂಗವನ್ನು ತ್ಯಜಿಸಿ ಸುಸಾಧುಗಳಾದ ಮುನಿಗಳು ಸರ್ವಭೂತಗಳಿಗೂ ಆತ್ಮರಾಗಿ ಕಾಡಿನಲ್ಲಿ ಅವಿಚ್ಛಿನ್ನವಾದ ತಪಸ್ಸನ್ನು ಮಾಡುತ್ತಿರುವರೋ ಆತನೇ ನನಗೆ ಗತಿ.

1. ಜಗತ್ತು ಎಂದರೆ ದ್ವೈತವು. ಆತ್ಮನು ಯಾವಾಗಲೂ ದ್ವೈತಸಂಪರ್ಕವಿಲ್ಲದೆ ಅದಕ್ಕೆ ಸಾಕ್ಷಿಯೇ ಆಗಿರುತ್ತಾನೆ. ಎಚ್ಚರದಲ್ಲಿ ದ್ವೈತಸಾಕ್ಷಿಯಾಗಿಯೂ, ಕನಸಿನಲ್ಲಿ ದ್ವೈತಾಭಾಸಕ್ಕೆ ಸಾಕ್ಷಿಯಾಗಿಯೂ ತನಿನಿದ್ರೆಯಲ್ಲಿ ದ್ವೈತಾಭಾವಕ್ಕೆ ಸಾಕ್ಷಿಯಾಗಿಯೂ ಇರುತ್ತಾನೆ. ಆದ್ದರಿಂದ ಆತ್ಮನು ಅಲುಪ್ತದೃಕ್ ಎನಿಸುವನು.
2. ಋಗ್ವೇದ ೧೦-೧೧-೧೨೯ ಸೂಚನೆ.
3. ಗೀ. ೧೦-೨ ರ ಸೂಚನೆ.
4. 'ಮೂಲಕಾರಣಮೇವ ಆ ಅನ್ತ್ಯಾತ್ ಕಾರ್ಯಾತ್ ತೇನ ತೇನ ಕಾರ್ಯಾಕಾರೇಣ ನಟವತ್ ಸರ್ವವ್ಯವಹಾರಾಸ್ಪದತ್ವಂ ಪ್ರತಿಪದ್ಯತೇ' (ಸೂ. ಭಾ. ೨-೧-೧೮) ಎಂಬ ಶಾಂಕರಭಾಷ್ಯದ ವಾಕ್ಯವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

ನ ವಿದ್ಯತೇ ಯಸ್ಯ ಚ ಜನ್ಮ ಕರ್ಮ ವಾ ।
ನ ನಾಮರೂಪೇ ಗುಣದೋಷ ಏವ ವಾ ॥
ತಥಾಪಿ ಲೋಕಾಪ್ಯಯಸಂಭವಾಯ ಯಃ ।
ಸ್ವಮಾಯಯಾ ತಾನ್ಯನು ಕಾಲಮೃಚ್ಛತಿ ॥೮॥
ತಸ್ಮೈ ನಮಃ ಪರೇಶಾಯ ಬ್ರಹ್ಮಣೇಽನನ್ತಶಕ್ತಯೇ ।
ಅರೂಪಾಯೋರುರೂಪಾಯ ನಮ ಆಶ್ಚರ್ಯಕರ್ಮಣೇ ॥೯॥

೮-೯. ಯಾವಾತನಿಗೆ ಜನ್ಮವಾಗಲಿ, ಕರ್ಮವಾಗಲಿ, ನಾಮರೂಪಗಳಾಗಲಿ, ಗುಣವಾಗಲಿ, ದೋಷವೇ ಆಗಲಿ -ಇಲ್ಲವೋ, ಆದರೂ ಲೋಕಗಳ ಸೃಷ್ಟಿಪ್ರಲಯಕ್ಕಾಗಿ ಯಾವಾತನು ತನ್ನ ಮಾಯೆಯಿಂದಲೇ ಅವುಗಳನ್ನು ಕಾಲಾನುಗುಣವಾಗಿ ಪಡೆಯುತ್ತಿರುವನೋ[1] ಆ ಬ್ರಹ್ಮನಿಗೆ, ಅನಂತಶಕ್ತಿಗಳುಳ್ಳವನಾಗಿ ರೂಪರಹಿತವಾಗಿ ಬಹುರೂಪನಾಗಿರುವ ಆಶ್ಚರ್ಯಕರ್ಮನಾದ ಆ ಪರಮೇಶನಿಗೆ ನಮಸ್ಕಾರ !

ನಮ ಆತ್ಮಪ್ರದೀಪಾಯ ಸಾಕ್ಷಿಣೇ ಪರಮಾತ್ಮನೇ ।
ನಮೋ ಗಿರಾಂ ವಿದೂರಾಯ ಮನಸಶ್ಚೇತಸಾಮಪಿ ॥೧೦॥

೧೦. ಸ್ವಯಂಪ್ರಕಾಶನಾದ ಸಾಕ್ಷಿಯಾದ ಪರಮಾತ್ಮನಿಗೆ ನಮಸ್ಕಾರ ! ವಾಕ್ಕುಗಳು, ಮನಸ್ಸು, ಚಿತ್ತವೃತ್ತಿಗಳು -ಇವೆಲ್ಲಕ್ಕೂ ದೂರವಿರುವಾತನಿಗೆ[2] ನಮಸ್ಕಾರ!

ಸತ್ತ್ವೇನ ಪ್ರತಿಲಭ್ಯಾಯ ನೈಷ್ಕರ್ಮ್ಯೇಣ ವಿಪಶ್ಚಿತಾ ।
ನಮಃ ಕೈವಲ್ಯನಾಥಾಯ ನಿರ್ವಾಣಸುಖಸಂವಿದೇ ॥೧೧॥

೧೧. ವಿವೇಕಿಯಾದ ಪುರುಷನಿಗೆ ನೈಷ್ಕರ್ಮ್ಯದ. ಮೂಲಕ ಮನಸ್ಸಿನಿಂದಲೇ ಅರಿತುಕೊಳ್ಳಲಾಗುವ ಕೈವಲ್ಯದೊಡೆಯನಿಗೆ, ಮೋಕ್ಷಸುಖವಿಜ್ಞಾನ ರೂಪನಾದವನಿಗೆ ನಮಸ್ಕಾರ!

ನಮಃ ಶಾನ್ತಾಯ ಘೋರಾಯ ಮೂಢಾಯ ಗುಣಧರ್ಮಿಣೇ ।
ನಿರ್ವಿಶೇಷಾಯ ಸಾಮ್ಯಾಯ ನಮೋ ಜ್ಞಾನಘನಾಯ ಚ ॥೧೨॥

೧೨. ಮೂರು ಗುಣಗಳ ಧರ್ಮದಿಂದ ಶಾಂತನೂ ಘೋರನೂ ಮೂಢನೂ ಆಗಿರುವಾತನಿಗೆ, ಆದರೂ ಯಾವ ವಿಶೇಷವೂ ಇಲ್ಲದೇ ಸಮತ್ವರೂಪದಲ್ಲಿರುವ ಜ್ಞಾನದ ಗಟ್ಟಿಯಾಗಿರುವವನಿಗೆ ನಮಸ್ಕಾರ !

ಕ್ಷೇತ್ರಜ್ಞಾಯ ನಮಸ್ತುಭ್ಯಂ ಸರ್ವಾಧ್ಯಕ್ಷಾಯ ಸಾಕ್ಷಿಣೇ ।
ಪುರುಷಾಯಾತ್ಮಮೂಲಾಯ ಮೂಲಪ್ರಕೃತಯೇ ನಮಃ ॥೧೩॥

೧೩. ಕ್ಷೇತ್ರಜ್ಞನೂ[1] ಸರ್ವರಿಗೂ ಒಡೆಯನೂ ಸಾಕ್ಷಿಯೂ ಎಲ್ಲೆಲ್ಲಿಯೂ ಪೂರ್ಣನಾಗಿರುವಾತನೂ ಸ್ವಯಂಕಾರಣನಾಗಿರುವ ಮೂಲಪ್ರಕೃತಿಯೂ ಆಗಿರುವ ನಿನಗೆ ನಮಸಾ ರ !

1. ಗೀ. ೪-೬ ರ ಸೂಚನೆ.
2. ತೈ. ೨-೯ ರ ಸೂಚನೆ.
3. ಗೀ. ೧೩-೨ ರ ಸೂಚನೆ.

**ಸರ್ವೇನ್ದ್ರಿಯಗುಣದ್ರಷ್ಟ್ರೇ ಸರ್ವಪ್ರತ್ಯಯಹೇತವೇ।**
**ಅಸತಾ ಛಾಯಯೋಕ್ತಾಯ ಸದಾಭಾಸಾಯ ತೇ ನಮಃ ॥೧೪॥**

೧೪. ಇಂದ್ರಿಯಗಳೆಲ್ಲದರ ಗುಣವನ್ನು ನೋಡುತ್ತಿರುವ, ಪ್ರತ್ಯಯಗಳೆಲ್ಲಕ್ಕೂ ಕಾರಣನಾಗಿರುವ ಮಿಥ್ಯಾರೂಪವಾದ ನೆರಳಿನಂತಿರುವ ಅಹಂಕಾರಾದಿಗಳಿಂದ ತಿಳಿಯಬರುವ, ವಸ್ತುಗಳಲ್ಲಿ ಸತ್ತಾರೂಪವಾಗಿ ತೋರುತ್ತಿರುವ, ನಿನಗೆ ನಮಸ್ಕಾರ!

**ನಮೋ ನಮಸ್ತೇಽಖಿಲಕಾರಣಾಯ।**
**ನಿಷ್ಕಾರಣಾಯಾದ್ಭುತಕಾರಣಾಯ॥**
**ಸರ್ವಾಗಮಾಮ್ನಾಯಮಹಾರ್ಣವಾಯ।**
**ನಮೋಽಪವರ್ಗಾಯ ಪರಾಯಣಾಯ ॥೧೫॥**

೧೫. ಎಲ್ಲಕ್ಕೂ ಕಾರಣನಾಗಿರುವ ಕಾರಣಶೂನ್ಯನಾದ, ಇದ್ದಂತೆ ಇದ್ದು ಕಾರಣವಾಗಿರುವ, ಅದ್ಭುತಕಾರಣರೂಪನಾದ ನಿನಗೆ ನಮಸ್ಕಾರ! ನಮಸ್ಕಾರ! ಸಮಸ್ತ ಆಗಮಗಳಿಗೂ ವೇದಗಳಿಗೂ[1] (ನದಿಗಳು ಹೋಗಿ ಸೇರುವ) ಸಮುದ್ರದಂತಿರುವ ನಿನಗೆ,[2] ಮೋಕ್ಷಸ್ವರೂಪನಾಗಿ ಎಲ್ಲರಿಗೂ ಪರಮಗತಿಯಾಗಿರುವ ನಿನಗೆ ನಮಸ್ಕಾರ!

**ಗುಣಾರಣಿಚ್ಛನ್ನಚಿದೂಷ್ಮಪಾಯ।**
**ತತ್ಕ್ಷೋಭವಿಸ್ಫೂರ್ಜಿತಮಾನಸಾಯ॥**
**ನೈಷ್ಕರ್ಮ್ಯಭಾವೇನ ವಿವರ್ಜಿತಾಗಮ-**
**ಸ್ವಯಂಪ್ರಕಾಶಾಯ ನಮಸ್ಕರೋಮಿ ॥೧೬॥**

೧೬. ಗುಣತ್ರಯಗಳೆಂಬ ಅರಣಿಯಲ್ಲಿ ಮುಚ್ಚಿಹೋಗಿರುವ ಚಿತ್ಸ್ವರೂಪದ ತೇಜಸ್ಸುಳ್ಳವನಾದ, ಆ ಗುಣಗಳ ಅಳ್ಳಾಡುವಿಕೆಯಿಂದ ಹೊರಹೊಮ್ಮಿದ ಸಂಕಲ್ಪವುಳ್ಳಾತನಿಗೆ, ನೈಷ್ಕರ್ಮ್ಯಭಾವದಿಂದ ಶಾಸ್ತ್ರವನ್ನು ದಾಟಿರುವವರಿಗೆ ತಾನೇ ಹೊಳೆಯುತ್ತಿರುವ ನಿನಗೆ ನಮಸ್ಕಾರ!

**ಮಾದೃಕ್‌ಪ್ರಪನ್ನಪಶುಪಾಶವಿಮೋಕ್ಷಣಾಯ।**
**ಮುಕ್ತಾಯ ಭೂರಿಕರುಣಾಯ ನಮೋಽಲಯಾಯ॥**
**ಸ್ವಾಂಶೇನ ಸರ್ವತನುಭೃನ್ಮನಸಿ ಪ್ರತೀತ-**
**ಪ್ರತ್ಯಗ್‌ದೃಶೇ ಭಗವತೇ ಬೃಹತೇ ನಮಸ್ತೇ ॥೧೭॥**

೧೭. ನನ್ನಂಥ ಶರಣುಬಂದ[3] ಪಶುಗಳ ಪಾಶಗಳನ್ನು ಬಿಡಿಸುವಂಥ ನಿನಗೆ, ಮುಕ್ತನೂ ಮಹಾಕರುಣಾಶಾಲಿಯೂ ನಾಶರಹಿತನೂ ಆದ ನಿನಗೆ ನಮಸ್ಕಾರ, ತನ್ನ ಅಂಶದಿಂದ ಸರ್ವಶರೀರಿಗಳ ಮನಸ್ಸಿನಲ್ಲಿ ಕಾಣುವ ಪ್ರತ್ಯಗ್ದ್ರಷ್ಟೃರೂಪನಾದ ಮಹಾಭಗವಂತನೆ, ನಿನಗೆ ನಮಸ್ಕಾರ !

1. ಕಠ ೨-೧೫ರ ಸೂಚನೆ.
2. ಪ್ರ. ೬-೫ರ ಸೂಚನೆ.
3. ಗೀ. ೭-೧೪; ೧೮-೬೬ ರ ಸೂಚನೆ.

**ಆತ್ಮಾತ್ಮಜಾಪ್ತಗೃಹವಿತ್ತಜನೇಷು ಸಕ್ತೈಃ ।**
**ದುಷ್ಪ್ರಾಪಣಾಯ ಗುಣಸಙ್ಗವಿವರ್ಜಿತಾಯ ॥**
**ಮುಕ್ತಾತ್ಮಭಿಃ ಸ್ವಹೃದಯೇ ಪರಿಭಾವಿತಾಯ ।**
**ಜ್ಞಾನಾತ್ಮನೇ ಭಗವತೇ ನಮ ಈಶ್ವರಾಯ ॥೧೮॥**

೧೮. ಶರೀರ, ಪುತ್ರ, ಬಂಧು, ಗೃಹ, ವಿತ್ತ, ಜನರು -ಇವರುಗಳಲ್ಲಿ ಆಸಕ್ತರಾಗಿರುವವರಿಗೆ ಸಿಕ್ಕದೆ ಇರುವ, ಗುಣಗಳ ಸಂಬಂಧವು ಒಂದಿಷ್ಟೂ ಇಲ್ಲದಿರುವ ಮುಕ್ತಾತ್ಮರಾದವರು ತಮ್ಮ ಹೃದಯದಲ್ಲಿ ಚಿಂತಿಸುತ್ತಿರುವ ಚೈತನ್ಯಸ್ವರೂಪನಾದ, ಭಗವಂತನಾದ, ಈಶ್ವರನಾದ ನಿನಗೆ ನಮಸ್ಕಾರ !

**ಯಂ ಧರ್ಮಕಾಮಾರ್ಥವಿಮುಕ್ತಿಕಾಮಾ ।**
**ಭಜನ್ತ ಇಷ್ಟಾಂ ಗತಿಮಾಪ್ನುವನ್ತಿ ॥**
**ಕಿಂ ತ್ವಾಶಿಷೋ ರಾತ್ಯಪಿ ದೇಹಮವ್ಯಯಂ ।**
**ಕರೋತು ಮೇಽದಭ್ರದಯೋ ವಿಮೋಕ್ಷಣಮ್ ॥೧೯॥**

೧೯. ಧರ್ಮ, ಅರ್ಥ, ಕಾಮ, ಮೋಕ್ಷ - ಇವುಗಳನ್ನು ಬಯಸಿಯಾವಾತನನ್ನು ಭಜಿಸುವವರು ತಮತಮಗೆ ಇಷ್ಟವಾದ ಗತಿಯನ್ನು ಪಡೆದುಕೊಳ್ಳುವರೋ,[1] ಮತ್ತು ಬೇರೆಯ ಇಚ್ಛೆಗಳನ್ನೂ ಅವ್ಯಯವಾದ ದೇಹವನ್ನೂ ಯಾವನು ಕೊಡುವನೋ ಅಂಥ ಪೂರ್ಣದಯಾಕರನಾದ ಪರಮಾತ್ಮನು ನನಗೆ ವಿಮುಕ್ತಿಯನ್ನು ಕೊಡಲಿ !

**ಏಕಾನ್ತಿನೋ ಯಸ್ಯನ ಕಞ್ಚನಾರ್ಥಂ ।**
**ವಾಞ್ಛನ್ತಿ ಯೇ ವೈ ಭಗವತ್ಪ್ರಪನ್ನಾಃ ॥**
**ಅತ್ಯದ್ಭುತಂ ತಚ್ಚರಿತಂ ಸುಮಙ್ಗಲಂ ।**
**ಗಾಯನ್ತಿ ಆನನ್ದಸಮುದ್ರಮಗ್ನಾಃ ॥೨೦॥**
**ತಮಕ್ಷರಂ ಬ್ರಹ್ಮ ಪರಂ ಪರೇಶ-**
**ಮವ್ಯಕ್ತಮಾಧ್ಯಾತ್ಮಿಕಯೋಗಗಮ್ಯಮ್ ॥**
**ಅತೀನ್ದ್ರಿಯಂ ಸೂಕ್ಷ್ಮಮಿವಾತಿದೂರ-**
**ಮನನ್ತಮಾದ್ಯಂ ಪರಿಪೂರ್ಣಮೀಡೇ ॥೨೧॥**

೨೦-೨೧. ಯಾವಾತನ ಏಕಾಂತಭಕ್ತರು ಯಾವುದೊಂದು ಅರ್ಥವನ್ನೂ ಬಯಸದೆ ಇರುವರೋ, ಯಾರು ಭಗವಂತನನ್ನು ಶರಣುಹೊಂದಿ ಅತ್ಯದ್ಬುತವಾದ ಆತನ ಸುಮಂಗಲವಾದ ಚರಿತ್ರೆಯನ್ನು ಗಾನಮಾಡುತ್ತಾ ಆನಂದಸಮುದ್ರದಲ್ಲಿ ಮುಳುಗಿರುವರೋ ಆ ಅಕ್ಷರವನ್ನು, ಪರಬ್ರಹ್ಮನನ್ನು, ಪರಮೇಶನನ್ನು, ಅಧ್ಯಾತ್ಮಯೋಗದಿಂದಲೇ ತಿಳಿಯಬರುವ ಆ ಅವ್ಯಕ್ತನನ್ನು, ಅತೀಂದ್ರಿಯನಾಗಿ ಸೂಕ್ಷ್ಮನಾಗಿ ಅತಿದೂರನಂತಿರುವ, ಅನಂತನೂ ಆದ್ಯನೂ ಆಗಿರುವ ಪರಿಪೂರ್ಣನನ್ನು ಸ್ತೋತ್ರಮಾಡುತ್ತಿದೇನೆ.

1. ನಾಲ್ಕು ವಿಧವಾದ ಪುರುಷಾರ್ಥಗಳನ್ನೂ ಕೊಡಬಲ್ಲವನಾದ್ದರಿಂದಲೇ ನಾಲ್ಕು ಭುಜಗಳು ಭಗವಂತನಿಗೆ ಇದ್ದುಕೊಂಡಿವೆ - ಎಂದಭಿಪ್ರಾಯ.

ಯಸ್ಯ ಬ್ರಹ್ಮಾದಯೋ ದೇವಾ ವೇದಾ ಲೋಕಾಶ್ಚರಾಚರಾಃ ।
ನಾಮರೂಪವಿಭೇದೇನ ಫಲ್ಗ್ವ್ಯಾ ಚ ಕಲಯಾ ಕೃತಾಃ ॥೨೨॥
ಯಥಾಽರ್ಚಿಷೋಽಗ್ನೇಃ ಸವಿತುರ್ಗಭಸ್ತಯೋ ।
ನಿರ್ಯಾನ್ತಿ ಸಂಯಾನ್ತ್ಯಸಕೃತ್ ಸ್ವರೋಚಿಷಃ ॥
ತಥಾ ಯತೋಽಯಂ ಗುಣಸಂಪ್ರವಾಹೋ ।
ಬುದ್ಧಿರ್ಮನಃ ಖಾನಿ ಶರೀರಸರ್ಗಾಃ ॥೨೩॥
ಸ ವೈ ನ ದೇವಾಸುರಮರ್ತ್ಯತಿರ್ಯಕ್
ನ ಸ್ತ್ರೀ ನ ಷಣ್ಢೋ ನ ಪುಮಾನ್ ನ ಜನ್ತುಃ ॥
ನಾಯಂ ಗುಣಃ ಕರ್ಮ ನ ಸನ್ ನ ಚಾಸನ್
ನಿಷೇಧಶೇಷೋ ಜಯತಾದಶೇಷಃ ॥೨೪॥

೨೨-೨೪. ಬ್ರಹ್ಮನೇ ಮೊದಲಾದ ದೇವತೆಗಳೂ ವೇದಗಳೂ ಲೋಕಗಳೂ ಚರಾಚರಪ್ರಾಣಿಗಳೂ ನಾಮರೂಪಗಳ ಭೇದದಿಂದೊಡಗೂಡಿ ಯಾವಾತನ ಸ್ವಲ್ಪತರವಾದ ಕಲೆಯಿಂದ ಮಾಡಲ್ಪಟ್ಟಿರುತ್ತಾರೋ, ಸ್ವಯಂಪ್ರಕಾಶವಾದ ಬೆಂಕಿಯಿಂದ ಕಿಡಿಗಳು ಹೇಗೋ, ಸೂರ್ಯನಿಂದ ಕಿರಣಗಳು ಹೇಗೋ ಹಾಗೆ ಯಾವಾತನಿಂದ ಬುದ್ಧಿ, ಮನಸ್ಸು, ಇಂದ್ರಿಯಗಳು, ಶರೀರಸೃಷ್ಟಿಗಳು -ಎಂಬೀ ಗುಣಪ್ರವಾಹವು ಬಂದಿರುವದೋ ಆತನು ದೇವತೆಯಲ್ಲ, ಅಸುರನಲ್ಲ, ಮರ್ತ್ಯನಲ್ಲ, ಮೂಕಪ್ರಾಣಿಯಲ್ಲ, ಹೆಣ್ಣಲ್ಲ, ಗಂಡಲ್ಲ, ನಪುಂಸಕನಲ್ಲ, ಜೀವನಲ್ಲ, ಗುಣವಲ್ಲ, ಕರ್ಮವಲ್ಲ, ಸತ್ತಲ್ಲ, ಅಸತ್ತಲ್ಲ. -ಎಲ್ಲವನ್ನೂ ಅಲ್ಲಗಳೆದ[1] ಉಳಿಮೆಯಾದ ಪೂರ್ಣವಾದ ಆತನೇ ಜಯಶೀಲನಾಗಲಿ!

ಜಿಜೀವಿಷೇ ನಾಹಮಿಹಾಮುಯಾ ಕಿ-
ಮನ್ತರ್ಬಹಿಶ್ಚಾವೃತಯೇಭಯೋನ್ಯಾ ॥
ಇಚ್ಛಾಮಿ ಕಾಲೇನ ನ ಯಸ್ಯ ವಿಪ್ಲವ-
ಸ್ತಸ್ಯಾತ್ಮಲೋಕಾವರಣಸ್ಯ ಮೋಕ್ಷಮ್ ॥೨೫॥

೨೫. ಒಳಗೂ ಹೊರಗೂ ತಮಸ್ಸಿನಿಂದ ಆವೃತವಾಗಿರುವ ಈ ಆನೆಯ ಶರೀರದಿಂದಲೇ ಬದುಕಿರಬೇಕೆಂದು ನಾನು ಇಚ್ಛಿಸುವದಿಲ್ಲ. ಆದರೆ ಯಾವದಕ್ಕೆ ಕಾಲದಿಂದಲೂ ಬಾಧೆಯಾಗಲಾರದೋ ಆ ಆತ್ಮಲೋಕದ ಆವರಣವಾದ ಅಜ್ಞಾನದ ಮೋಕ್ಷವನ್ನು ಇಚ್ಛಿಸುತ್ತೇನೆ.

ಸೋಽಹಂ ವಿಶ್ವಸೃಜಂ ವಿಶ್ವಮವಿಶ್ವಂ ವಿಶ್ವವೇದಸಮ್ ।
ವಿಶ್ವಾತ್ಮಾನಮಜಂ ಬ್ರಹ್ಮ ಪ್ರಣತೋಽಸ್ಮಿ ಪರಂ ಪದಮ್ ॥೨೬॥

೨೬. ಆ ನಾನು ವಿಶ್ವವನ್ನು ಸೃಷ್ಟಿಸಿದವನಾದ, ವಿಶ್ವರೂಪನಾದ, ವಿಶ್ವವಿಲಕ್ಷಣನಾದ, ವಿಶ್ವವನ್ನೇ ಉಪಕರಣವಾಗುಳ್ಳ ವಿಶ್ವಕ್ಕೆಲ್ಲ ಆತ್ಮನಾದ ಜನ್ಮರಹಿತಬ್ರಹ್ಮವಾದ ಪರಮಪದವನ್ನು ನಮಸ್ಕರಿಸುತ್ತೇನೆ.

1. ಬೃಹ. ೩-೯-೨೬ ನ್ನು ನೋಡಿರಿ.

**ಯೋಗರನ್ಧಿತಕರ್ಮಾಣೋ ಹೃದಿ ಯೋಗವಿಭಾವಿತೇ ।**
**ಯೋಗಿನೋ ಯಂ ಪ್ರಪಶ್ಯನ್ತಿ ಯೋಗೇಶಂ ತಂ ನತೋಽಸ್ಮ್ಯಹಮ್॥೨೭॥**

೨೭. ಯೋಗದಿಂದ ಕರ್ಮವನ್ನು ನಾಶಮಾಡಿಕೊಂಡ, ಯೋಗಭಾವನೆಯುಳ್ಳ ಹೃದಯದಲ್ಲಿ ಯೋಗಿಗಳು ಯಾವಾತನನ್ನು ಕಾಣುವರೋ ಅಂಥ ಯೋಗೇಶ್ವರನನ್ನು ನಾನು ನಮಸ್ಕರಿಸುತ್ತೇನೆ.

**ನಮೋ ನಮಸ್ತುಭ್ಯಮಸಹ್ಯವೇಗ-**
**ಶಕ್ತಿತ್ರಯಾಯಾಖಿಲಧೀಗುಣಾಯ ॥**

**ಪ್ರಪನ್ನಪಾಲಾಯ ದುರನ್ತಶಕ್ತಯೇ ।**
**ಕದಿನ್ದ್ರಿಯಾಣಾಮನವಾಪ್ಯವತ್ಮರ್ನೇ ॥೨೮॥**

೨೮. ತಡೆಯುವದಕ್ಕಾಗದ ವೇಗವುಳ್ಳ ರಾಗಾದಿಶಕ್ತಿತ್ರಯವುಳ್ಳಾತನೆ, ನಿನಗೆ ನಮಸ್ಕಾರ! ಅಂತಃಕರಣದ ಸರ್ವಗುಣವುಳ್ಳಾತನೆ, ನಿನಗೆ ನಮಸ್ಕಾರ! ಶರಣಾಗತರನ್ನು ಕಾಪಾಡುವಾತನೆ, ಕೊನೆಗಾಣದ ಶಕ್ತಿಯುಳ್ಳಾತನೆ, ಅಜಿತೇಂದ್ರಿಯರಿಗೆ ಸಿಕ್ಕದ ಮಾರ್ಗವುಳ್ಳಾತನೆ, ನಿನಗೆ ನಮಸ್ಕಾರ!

**ನಾಯಂ ವೇದ ಸ್ವಮಾತ್ಮಾನಂ ಯಚ್ಛಕ್ತ್ಯಾಽಹಂಧಿಯಾ ಹತಮ್ ।**
**ತಂ ದುರತ್ಯಯಮಾಹಾತ್ಮ್ಯಂ ಭಗವನ್ತಮಿತೋಽಸ್ಮ್ಯ ಹಮ್ ॥೨೯॥**

೨೯. ನಾನೆಂಬ ಬುದ್ಧಿಯಿಂದ ಆವೃತನಾಗಿರುವ ಯಾವಾತನ ಮಾಯಾಶಕ್ತಿಯಿಂದ ತನ್ನ ಆತ್ಮನನ್ನೂ ಈ ಜನರು ಅರಿತುಕೊಳ್ಳದೆ ಇರುವರೋ ಆ ಅರಿಯಲಸದಳವಾದ ಮಹಿಮೆಯುಳ್ಳ ಭಗವಂತನನ್ನು ನಾನು ಶರಣುಹೊಕ್ಕಿರುವೆನು.

## ಭಗವಂತನ ಪ್ರಾದುರ್ಭಾವ

**ಶ್ರೀಶುಕ ಉವಾಚ-**

**ಏವಂ ಗಜೇನ್ದ್ರಮುಪವರ್ಣಿತನಿರ್ವಿಶೇಷಂ ।**
**ಬ್ರಹ್ಮಾದಯೋ ವಿವಿಧಲಿಙ್ಗಭಿದಾಽಭಿಮಾನಾಃ ॥**
**ನೈತೇ ಯದೋಪಸಸೃಪುರ್ನಿಖಿಲಾತ್ಮಕತ್ವಾತ್ ।**
**ತತ್ರಾಖಿಲಾಮರವರೋ ಹರಿರಾವಿರಾಸೀತ್ ॥೩೦॥**

೩೦. ಶ್ರೀಶುಕನಿಂತೆಂದನು: ಎಲೈ ರಾಜನೆ, ಹೀಗೆ ಗಜೇಂದ್ರನು ನಿರ್ವಿಶೇಷ ಪರಮಾತ್ಮನನ್ನು ವರ್ಣಿಸುತ್ತಿರಲು ಬೇರೆಬೇರೆಯ ಆಕಾರವಿಶೇಷಗಳಲ್ಲಿ ಅಭಿಮಾನವುಳ್ಳ ಬ್ರಹ್ಮಾದಿಗಳು ಅವನ ಬಳಿಗೆ ಬರಲಿಲ್ಲ. ಆಗ ಸರ್ವಾತ್ಮನಾದ್ದರಿಂದ ಸರ್ವದೇವಮಯನಾದ ಹರಿಯು ಕಾಣಿಸಿಕೊಂಡನು.

**ತಂ ತದ್ವದಾರ್ತಮುಪಲಭ್ಯ ಜಗನ್ನಿವಾಸಃ ।**
**ಸ್ತೋತ್ರಂ ನಿಶಮ್ಯ ದಿವಿಜೈಃ ಸಹ ಸಂಸ್ತುವದ್ಭಿಃ ॥**
**ಛನ್ದೋಮಯೇನ ಗರುಡೇನ ಸಮುಹ್ಯಮಾನಃ ।**
**ಚಕ್ರಾಯುಧೋಽಭ್ಯಗಮದಾಶು ಯತೋ ಗಜೇನ್ದ್ರಃ ॥೩೧॥**

೩೧. ಜಗತ್ತನ್ನೆಲ್ಲ ವ್ಯಾಪಿಸಿಕೊಂಡಿರುವ (ಭಗವಂತನು) ಆರ್ತನಾದ ಆ ಗಜರಾಜನ (ಸ್ಥಿತಿ) ಯನ್ನು ಅರಿತು ಸ್ತೋತ್ರವನ್ನು ಕೇಳಿ, ಸ್ತುತಿಸುತ್ತಿರುವ ದೇವತೆಗಳಿಂದ ಕೂಡಿ ಛಂದೋಮಯನಾದ ಗರುಡನ ವಾಹನವುಳ್ಳವನಾಗಿ ಜಾಗ್ರತೆಯಾಗಿ ಗಜೇಂದ್ರನಿದ್ದಲ್ಲಿಗೆ ಚಕ್ರಾಯುಧವನ್ನು ಹಿಡಿದು ಬಂದನು.

**ಸೋಽನ್ತಃ ಸರಸ್ಯುರುಬಲೇನ ಗೃಹೀತ ಆರ್ತಃ।**
**ದೃಷ್ಟ್ವಾ ಗರುತ್ಮತಿ ಹರಿಂ ಖ ಉಪಾತ್ತಚಕ್ರಮ್ ॥**
**ಉತ್ಕ್ಷಿಪ್ಯ ಸಾಮ್ಬುಜಕರಂ ಗಿರಮಾಹ ಕೃಚ್ಛ್ರಾತ್।**
**ನಾರಾಯಣಾಖಿಲಗುರೋ ಭಗವನ್ನಮಸ್ತೇ** ॥೩೨॥

೩೨. ಸರೋವರದೊಳಗೆ ಮೊಸಳೆಯಿಂದ ಹಿಡಿಯಲ್ಪಟ್ಟಿದ್ದ ಆರ್ತನಾದ ಆ (ಗಜೇಂದ್ರನು) ಚಕ್ರವನ್ನು ಹಿಡಿದು ಗರುಡನನ್ನೇರಿ ಬರುತ್ತಿದ್ದ ಹರಿಯನ್ನು ಆಕಾಶದಲ್ಲಿ ನೋಡಿ ಕಮಲ (ಪುಷ್ಪ) ದಿಂದ ಕೂಡಿದ ಸೊಂಡಿಲನ್ನು ಮೇಲಕ್ಕೆತ್ತಿ ಸಮಸ್ತಕ್ಕೂ ಗುರುವಾದವನೆ, ನಾರಾಯಣನೆ, ಭಗವಂತನೆ, ನಿನಗೆ ನಮಸ್ಕಾರ! ಎಂದು ಕಷ್ಟದಿಂದ ಮಾತನಾಡಿದನು.

**ತಂ ವೀಕ್ಷ್ಯ ಪೀಡಿತಮಜಃ ಸಹಸಾವತೀರ್ಯ।**
**ಸಗ್ರಾಹಮಾಶು ಸರಸಃ ಕೃಪಯೋಜ್ಜಹಾರ ॥**
**ಗ್ರಾಹಾದ್ ವಿಪಾಟಿತಮುಖಾದರಿಣಾ ಗಜೇನ್ದ್ರಂ।**
**ಸಂಪಶ್ಯತಾಂ ಹರಿರಮೂಮುಚದುಸ್ರಿಯಾಣಾಮ್** ॥೩೩॥

೩೩. ಮೊಸಳೆಯಿಂದ ಹಿಡಿಯಲ್ಪಟ್ಟು ಪೀಡಿತನಾಗಿದ್ದ ಅವನನ್ನು ಅಜ (ನಾದ ದೇವನು) ನೋಡಿ ಕೂಡಲೆ (ಗರುಡನಿಂದ) ಕೆಳಕ್ಕಿಳಿದು ಬೇಗನೆ ಕೃಪೆಯಿಂದ ಸರೋವರದ (ದಡದ) ಮೇಲಕ್ಕೆ ಎತ್ತಿದನು. ಮುಖವನ್ನು (ಚಕ್ರದಿಂದ) ಸೀಳಲ್ಪಟ್ಟ, ಶತ್ರುವಾದ ಮೊಸಳೆಯ ಕಡೆಯಿಂದ ಆ ಗಜರಾಜನನ್ನು ದೇವತೆಗಳು ನೋಡುತ್ತಿರುವಂತೆಯೇ ಹರಿಯು ಬಿಡಿಸಿದನು.

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಅಷ್ಟಮಸ್ಕನ್ಧೇ ತೃತೀಯೋಽಧ್ಯಾಯಃ

# ನಾಲ್ಕನೆಯ ಅಧ್ಯಾಯ

ಶ್ರೀ ಶುಕ ಉವಾಚ-

ತದಾ ದೇವರ್ಷಿಗನ್ಧರ್ವಾ ಬ್ರಹ್ಮೇಶಾನಪುರೋಗಮಾಃ ।
ಮುಮುಚುಃ ಕುಸುಮಾಸಾರಂ ಶಂಸನ್ತಃ ಕರ್ಮ ತದ್ಧರೇಃ ॥೧॥

ನೇದುರ್ದುನ್ದುಭಯೋ ದಿವ್ಯಾ ಗನ್ಧರ್ವಾ ನನೃತುರ್ಜಗುಃ ॥
ಋಷಯಶ್ಚಾರಣಾಃ ಸಿದ್ಧಾಸ್ತುಷ್ಟುವುಃ ಪುರುಷೋತ್ತಮಮ್ ॥೨॥

೧-೨. ಆಗ ದೇವತೆಗಳು, ಋಷಿಗಳು, ಗಂಧರ್ವರು, ಬ್ರಹ್ಮ, ಈಶ್ವರ-ಮೊದಲಾದವರೆಲ್ಲರೂ ಭಗವಂತನ ಆ (ಭಕ್ತೋದ್ಧಾರವೆಂಬ) ಕರ್ಮವನ್ನು ಹೊಗಳುತ್ತಾ ಹೂವಿನ ಮಳೆಯನ್ನು ಕರೆದರು, ಆಕಾಶದಲ್ಲಿ ದಿವ್ಯವಾದ ನಗಾರಿಗಳು ಬಾರಿಸಲ್ಪಟ್ಟವು. ಗಂಧರ್ವರು ಗಾನಮಾಡುತ್ತಾ ಕುಣಿದರು. ಋಷಿಗಳು, ಚಾರಣರು, ಸಿದ್ಧರು–ಪುರುಷೋತ್ತಮನನ್ನು ಸ್ತೋತ್ರ ಮಾಡಿದರು.

## ಮೊಸಳೆಯ ಹಿಂದಿನ ಜನ್ಮದ ವೃತ್ತಾಂತ

ಯೋಽಸೌ ಗ್ರಾಹಃ ಸ ವೈ ಸದ್ಯಃ ಪರಮಾಶ್ಚರ್ಯರೂಪಧೃಕ್ ।
ಮುಕ್ತೋ ದೇವಲಶಾಪೇನ ಹೂಹೂರ್ಗನ್ಧರ್ವಸತ್ತಮಃ ॥ ೩॥
ಪ್ರಣಮ್ಯ ಶಿರಸಾಧೀಶಮುತ್ತಮಶ್ಲೋಕಮವ್ಯಯಮ್ ।
ಅಗಾಯತ ಯಶೋಧಾಮ ಕೀರ್ತನ್ಯಗುಣಸತ್ಕಥಮ್ ॥೪॥
ಸೋಽನುಕಮ್ಪಿತ ಈಶೇನ ಪರಿಕ್ರಮ್ಯ ಪ್ರಣಮ್ಯ ತಮ್ ।
ಲೋಕಸ್ಯ ಪಶ್ಯತೋ ಲೋಕಂ ಸ್ವಮಗಾನ್ಮುಕ್ತಕಿಲ್ಬಿಷಃ ॥೫॥

೩-೫. ಯಾವದು ಮೊಸಳೆಯ (ಜನ್ಮದಲ್ಲಿತ್ತೋ) ಅದು ಕೂಡಲೆ ಪರಮಾಶ್ಚರ್ಯಕರವಾದ ರೂಪವನ್ನು ಹೊಂದಿ ದೇವಲ (ಋಷಿಗಳ) ಶಾಪದಿಂದ (ಮೊಸಳೆಯಾಗಿದ್ದ) ಹೂಹೂ (ಎಂಬ ಹೆಸರಿನ) ಗಂಧರ್ವಶ್ರೇಷ್ಠನು (ಶಾಪದಿಂದ) ಬಿಡುಗಡೆಯಾಗಿ ಉತ್ತಮಶ್ಲೋಕನೂ ಅವ್ಯಯನೂ ಆದ ಈಶ್ವರರಿಗೆಲ್ಲ ಒಡೆಯನಾದ ಭಗವಂತನನ್ನು ನಮಸ್ಕರಿಸಿ, ಯಶಸ್ಸಿಗೆ ಸ್ಥಾನವಾಗಿರುವ (ಆ ದೇವನ) ಗುಣಗಳ ಹೊಗಳಿಕೆಯೆಂಬ ಉತ್ತಮಕಥೆಯನ್ನು ಹಾಡಿದನು. ಪರಮೇಶನಾದ (ವಿಷ್ಣುವಿನಿಂದ) ಅನುಗ್ರಹಿಸಲ್ಪಟ್ಟವನಾಗಿ ಅವನನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಪಾಪಗಳಿಂದ ಬಿಡಲ್ಪಟ್ಟವನಾಗಿ ಲೋಕ (ಜನ)ರೆಲ್ಲರೂ ನೋಡುತ್ತಿರುವಂತೆಯೇ ತನ್ನ ಲೋಕವನ್ನು ಕುರಿತು ಪ್ರಯಾಣಮಾಡಿದನು.

# ಗಜೇಂದ್ರನ ಹಿಂದಿನ ಜನ್ಮದ ವೃತ್ತಾಂತ

ಗಜೇನ್ದ್ರೋ ಭಗವತ್‌ಸ್ಪರ್ಶಾದ್ ವಿಮುಕ್ತೋಽಜ್ಞಾನಬನ್ಧನಾತ್ ।
ಪ್ರಾಪ್ತೋ ಭಗವತೋ ರೂಪಂ ಪೀತವಾಸಾಶ್ಚತುರ್ಭುಜಃ ॥೬॥

ಸ ವೈ ಪೂರ್ವಮಭೂದ್ರಾಜಾ ಪಾಣ್ಡ್ಯೋ ದ್ರವಿಡಸತ್ತಮಃ ।
ಇನ್ದ್ರದ್ಯುಮ್ನ ಇತಿ ಖ್ಯಾತೋ ವಿಷ್ಣುವ್ರತಪರಾಯಣಃ ॥೭॥

೬-೭. ಗಜೇಂದ್ರನು ಭಗವಂತನ ಸ್ಪರ್ಶದಿಂದ ಅಜ್ಞಾನದ ಬಂಧದಿಂದ ಬಿಡಲ್ಪಟ್ಟವನಾಗಿ ಪೀತಾಂಬರಧಾರಿಯೂ ಚತುರ್ಭುಜನೂ ಆಗಿ ಭಗವಂತನ (ಸಮಾನ) ರೂಪವನ್ನೇ ಪಡೆದುಕೊಂಡನು. ಅವನು ಹಿಂದಿನ(ಜನ್ಮ) ದಲ್ಲಿ ದ್ರವಿಡಶ್ರೇಷ್ಠನಾದ ಪಾಂಡ್ಯರಾಜನಾಗಿ (ಹುಟ್ಟಿ) ವಿಷ್ಣುವ್ರತಗಳಲ್ಲಿ ಯಾವಾಗಲೂ ತೊಡಗಿದ್ದಂಥ ಇಂದ್ರದ್ಯುಮ್ನನೆಂಬ ಹೆಸರಿನ ಪ್ರಖ್ಯಾತದೊರೆಯಾಗಿದ್ದನು.

ಸ ಏಕದಾರಾಧನಕಾಲ ಆತ್ಮವಾನ್ ।
ಗೃಹೀತಮೌನವ್ರತ ಈಶ್ವರಂ ಹರಿಮ್ ॥
ಜಟಾಧರಸ್ತಾಪಸ ಆಪ್ಲುತೋಽಚ್ಯುತಂ ।
ಸಮರ್ಚಯಾಮಾಸ ಕುಲಾಚಲಾಶ್ರಮಃ ॥೮॥

೮. ಅವನು ಒಂದು ಬಾರಿ ಮಲಯಪರ್ವತದಲ್ಲಿ ಆಶ್ರಮವನ್ನು ಮಾಡಿಕೊಂಡು ತಪಸ್ವಿಯಾಗಿ ಜಟೆಗಳನ್ನು ಧರಿಸಿ (ದಿನವೂ ತ್ರಿಷವಣ) ಸ್ನಾನ ಮಾಡುತ್ತಾ ಇಂದ್ರಿಯನಿಗ್ರಹವುಳ್ಳವನಾಗಿ ಅಚ್ಯುತನೂ ಈಶ್ವರನೂ ಆದ ಹರಿಯನ್ನು ಪೂಜಿಸುತ್ತಿದ್ದನು. ಹಾಗೆ ಪೂಜಿಸುವ ಸಮಯದಲ್ಲಿ ಮೌನವ್ರತವನ್ನು ಧರಿಸಿದ್ದನು.

ಯದೃಚ್ಛಯಾ ತತ್ರ ಮಹಾಯಶಾ ಮುನಿಃ ।
ಸಮಾಗಮಚ್ಛಿಷ್ಯಗಣೈಃ ಪರಿಶ್ರಿತಃ ॥
ತಂ ವೀಕ್ಷ್ಯ ತೂಷ್ಣೀಮಕೃತಾರ್ಹಣಾದಿಕಂ ।
ರಹಸ್ಯುಪಾಸೀನಮೃಷಿಶ್ಚುಕೋಪ ಹ ॥೯॥

೯. ಅಲ್ಲಿಗೆ ಅಕಸ್ಮಾತ್ತಾಗಿ ಮಹಾಕೀರ್ತಿಶಾಲಿಯಾದ, ಶಿಷ್ಯವೃಂದದಿಂದ ಒಡಗೂಡಿದ (ಅಗಸ್ತ್ಯ) ಮುನಿಯು ಬಂದನು. ಏಕಾಂತದಲ್ಲಿ ಕುಳಿತು ಧ್ಯಾನಮಾಡುತ್ತಿದ್ದುದರಿಂದ (ಅತಿಥಿಗಳಿಗೆ) ಪೂಜಾಸತ್ಕಾರಗಳನ್ನು ಮಾಡದೆ ಸುಮ್ಮನೆ ಕುಳಿತಿದ್ದ ಅವನನ್ನು ನೋಡಿ ಋಷಿಯು ಕೋಪಗೊಂಡನು.

ತಸ್ಮಾ ಇಮಂ ಶಾಪಮದಾದಸಾಧು -
ರಯಂ ದುರಾತ್ಮಾ ಽಕೃತಬುದ್ಧಿರದ್ಯ॥
ವಿಪ್ರಾವಮನ್ತಾ ವಿಶತಾಂ ತಮೋಽನ್ಧಂ।
ಯಥಾ ಗಜಃ ಸ್ತಬ್ಧಮತಿಃ ಸ ಏವ ॥೧೦॥

೧೦. ಅವನಿಗೆ (ಋಷಿಯು) ಈ ಶಾಪವನ್ನು ಕೊಟ್ಟನು. ಏನೆಂದರೆ: ಈ ದುರಾತ್ಮನೂ ಅಪಕ್ವಬುದ್ಧಿಯೂ ಬ್ರಾಹ್ಮಣರನ್ನು ಅವಮಾನಗೊಳಿಸುವವನೂ ಆದ ಇವನು ಮಂದಬುದ್ಧಿಯುಳ್ಳ ಆನೆಯಂತೆ (ಇರುವದರಿಂದ) ಅದೇ ಆಗಿ ಕತ್ತಲೆಯಂತಿರುವ ಅಜ್ಞಾನವನ್ನು ಹೊಂದಲಿ!

ಶ್ರೀಶುಕ ಉವಾಚ-

ಏವಂ ಶಪ್ತ್ವಾ ಗತೋಽಗಸ್ತ್ಯೋ ಭಗವಾನ್ ನೃಪ ಸಾನುಗಃ।
ಇನ್ದ್ರದ್ಯುಮ್ನೋಽಪಿ ರಾಜರ್ಷಿರ್ದಿಷ್ಟಂ ತದುಪಧಾರಯನ್ ॥೧೧॥

ಆಪನ್ನಃ ಕೌಞ್ಜರೀಂ ಯೋನಿಮಾತ್ಮಸ್ಮೃತಿವಿನಾಶಿನೀಮ್।
ಹರ್ಯರ್ಚನಾನುಭಾವೇನ ಯದ್ಗಜತ್ವೇಽಪ್ಯನುಸ್ಮೃತಿಃ ॥೧೨॥

೧೧-೧೨. ಶ್ರೀಶುಕನಿಂತೆಂದನು : ಎಲೈ ರಾಜನೆ, ಶಿಷ್ಯರೊಡಗೂಡಿದ ಪೂಜ್ಯನಾದ ಅಗಸ್ತ್ಯನು ಹೀಗೆ ಶಾಪವನ್ನು ಕೊಟ್ಟವನಾಗಿ ಹೊರಟುಹೋದನು. ರಾಜರ್ಷಿಯಾದ ಇಂದ್ರದ್ಯುಮ್ನನೂಕೂಡ ಇದು ವಿಧಿಯ[1] (ಕೆಲಸ) ವೆಂದು ಭಾವಿಸಿ ಆತ್ಮಸ್ಮೃತಿ (ಸಂತತಿ) ಯನ್ನು ನಾಶಗೊಳಿಸುವ ಆನೆಯ ಜನ್ಮವನ್ನು ಹೊಂದಿದವನಾಗಿ ಶ್ರೀಹರಿಯ ಪೂಜೆಯನ್ನು ಮಾಡಿದ್ದರ ಸಂಸ್ಕಾರದಿಂದ ಆನೆಯಾಗಿದ್ದಾಗಲೂ (ಸಂಕಟದಲ್ಲಿ ಭಗವಂತನ) ಸ್ಮೃತಿಯನ್ನು (ಪಡೆದವನಾಗಿ ಕೃತಕೃತ್ಯನಾದನು).

## ಉಪಸಂಹಾರ

ಏವಂ ವಿಮೋಕ್ಷ್ಯ ಗಜಯೂಥಪಮಬ್ಜನಾಭಃ।
ತೇನಾಪಿ ಪಾರ್ಷದಗತಿಂ ಗಮಿತೇನ ಯುಕ್ತಃ॥
ಗನ್ಧರ್ವಸಿದ್ಧವಿಬುಧೈರುಪಗೀಯಮಾನ-
ಕರ್ಮಾದ್ಭುತಂ ಸ್ವಭವನಂ ಗರುಡಾಸನೋಽಗಾತ್ ॥೧೩॥

೧೩. ಪದ್ಮನಾಭ(ನಾದ ಹರಿಯು) ಹೀಗೆ ಗಜರಾಜನನ್ನು ಬಿಡಿಸಿ ತನ್ನ ಸೇವಕರಲ್ಲಿ ಒಂದು ಸ್ಥಾನವನ್ನು ಹೊಂದಿ (ವಿಷ್ಣು) ಪಾರ್ಷದನಾದ ಅವನಿಂದ ಕೂಡಿದವನಾಗಿ ಗಂಧರ್ವರು, ಸಿದ್ಧರು, ದೇವತೆಗಳು - ಇವರುಗಳಿಂದ ಸ್ತೋತ್ರಮಾಡಲ್ಪಟ್ಟ ಅದ್ಭುತಕರ್ಮವುಳ್ಳವನಾಗಿ ಗರುಡಾರೂಢನಾಗಿ ತನ್ನ ಮನೆಯಾದ (ವೈಕುಂಠಕ್ಕೆ) ಹೊರಟುಹೋದನು.

. ಪ್ರಾರಬ್ಧಫಲ (ಹಣೆಯಬರಹ) ವೆಂತ ಭಾವಿಸಿ - ಎಂದಭಿಪ್ರಾಯ.

ಏತನ್ಮಹಾರಾಜ ತವೇರಿತೋ ಮಯಾ।
ಕೃಷ್ಣಾನುಭಾವೋ ಗಜರಾಜಮೋಕ್ಷಣಮ್ ॥
ಸ್ವರ್ಗ್ಯಂ ಯಶಸ್ಯಂ ಕಲಿಕಲ್ಮಷಾಪಹಂ।
ದುಃಸ್ವಪ್ನನಾಶಂ ಕುರುವರ್ಯ ಶೃಣ್ವತಾಮ್ ॥೧೪॥

೧೪. ಎಲೈ ಕುರುಶ್ರೇಷ್ಠನೆ, ಮಹಾರಾಜನೆ, ಕೇಳುವವರಿಗೆ ಸ್ವರ್ಗಪ್ರದವೂ ಯಶಸ್ಸನ್ನುಂಟುಮಾಡತಕ್ಕದ್ದೂ ಕಲಿದೋಷವನ್ನು ಕಳೆಯತಕ್ಕದ್ದೂ ಕೆಟ್ಟ ಕನಸುಗಳ (ಸೂಚಿತ) ಫಲವನ್ನು ನಾಶಮಾಡತಕ್ಕದ್ದೂ ಆದ ಗಜರಾಜನನ್ನು ಬಿಡಿಸಿದ್ದೆಂಬ ಕೃಷ್ಣನ ಭಕ್ತಿಮಯವಾದ ಈ ಕಥೆಯು ನನ್ನಿಂದ ನಿನಗೆ ಹೇಳಲ್ಪಟ್ಟಿತು.

ಯಥಾನುಕೀರ್ತಯನ್ತ್ಯೇತತ್ ಶ್ರೇಯಸ್ಕಾಮಾ ದ್ವಿಜಾತಯಃ।
ಶುಚಯಃ ಪ್ರಾತರುತ್ಥಾಯ ದುಃಸ್ವಪ್ನಾದ್ಯುಪಶಾನ್ತಯೇ ॥೧೫॥

೧೫. ಇದನ್ನು ಶ್ರೇಯಸ್ಕಾಮರಾದ ದ್ವಿಜರು ದುಃಸ್ವಪ್ನಗಳೇ (ಮುಂತಾದ ಅರಿಷ್ಟ) ಪರಿಹಾರಗಳಿಗಾಗಿ ಬೆಳಗಿನವೇಳೆಯಲ್ಲಿ ಶುಚಿರ್ಭೂತರಾಗಿ ಈಗ (ನಿನಗೆ) ಹೇಳಿರುವಂತೆಯೇ ಕೀರ್ತನೆಮಾಡುವರು.

## ಫಲಶ್ರುತಿ

ಇದಮಾಹ ಹರಿಃ ಪ್ರೀತೋ ಗಜೇನ್ದ್ರಂ ಕುರುಸತ್ತಮ।
ಶೃಣ್ವತಾಂ ಸರ್ವಭೂತಾನಾಂ ಸರ್ವಭೂತಮಯೋ ವಿಭುಃ ॥೧೬॥

೧೬. ಎಲೈ ಕುರುಶ್ರೇಷ್ಠನೆ, ಸರ್ವಭೂತಗಳಲ್ಲಿಯೂ ವ್ಯಾಪಿಸಿಕೊಂಡಿರುವವನೂ ವಿಭುವೂ ಆದ ಸಂತುಷ್ಟನಾದ ಹರಿಯು ಎಲ್ಲಾ ಭೂತಗಳೂ ಕೇಳುತ್ತಿರುವಂತೆಯೇ ಗಜೇಂದ್ರನನ್ನು ಕುರಿತು ಇದನ್ನು (ಹೀಗೆಂದು) ಹೇಳಿದನು.

ಶ್ರೀ ಭಗವಾನುವಾಚ -
ಯೇ ಮಾಂ ತ್ವಾಂ ಚ ಸರಶ್ಚೇದಂ ಗಿರಿಕನ್ದರಕಾನನಮ್।
ವೇತ್ರಕೀಚಕವೇಣೂನಾಂ ಗುಲ್ಮಾನಿ ಸುರಪಾದಪಾನ್ ॥೧೭॥

ಶೃಙ್ಗಾಣೀಮಾನಿ ಧಿಷ್ಣ್ಯಾನಿ ಬ್ರಹ್ಮಣೋ ಮೇ ಶಿವಸ್ಯ ಚ।
ಕ್ಷೀರೋದಂ ಮೇ ಪ್ರಿಯಂ ಧಾಮ ಶ್ವೇತದ್ವೀಪಂ ಚ ಭಾಸ್ವರಮ್ ॥೧೮॥

ಶ್ರೀವತ್ಸಂ ಕೌಸ್ತುಭಂ ಮಾಲಾಂ ಗದಾಂ ಕೌಮೋದಕೀಂ ಮಮ।
ಸುದರ್ಶನಂ ಪಾಞ್ಚಜನ್ಯಂ ಸುಪರ್ಣಂ ಪತಗೇಶ್ವರಮ್ ॥೧೯॥

ಶೇಷಂ ಚ ಮತ್ಕಲಾಂ ಸೂಕ್ಷ್ಮಾಂ ಶ್ರಿಯಂ ದೇವೀಂ ಮದಾಶ್ರಯಾಮ್।
ಬ್ರಹ್ಮಾಣಂ ನಾರದಮೃಷಿಂ ಭವಂ ಪ್ರಹ್ಲಾದಮೇವ ಚ ॥೨೦॥

ಮತ್ಸ್ಯಕೂರ್ಮವರಾಹಾದ್ಯೈರವತಾರೈಃ ಕೃತಾನಿ ಮೇ ।
ಕರ್ಮಾಣ್ಯನನ್ತಪುಣ್ಯಾನಿ ಸೂರ್ಯಂ ಸೋಮಂ ಹುತಾಶನಮ್ ॥೨೧॥

ಪ್ರಣವಂ ಸತ್ಯಮವ್ಯಕ್ತಂ ಗೋವಿಪ್ರಾನ್ ಧರ್ಮಮವ್ಯಯಮ್ ।
ದಾಕ್ಷಾಯಣೀರ್ಧರ್ಮಪತ್ನೀಃ ಸೋಮಕಾಶ್ಯಪಯೋರಪಿ ॥೨೨॥

ಗಙ್ಗಾಂ ಸರಸ್ವತೀಂ ನನ್ದಾಂ ಕಾಲಿನ್ದೀಂ ಸಿತವಾರಣಮ್ ।
ಧ್ರುವಂ ಬ್ರಹ್ಮಋಷೀನ್ ಸಪ್ತ ಪುಣ್ಯಶ್ಲೋಕಾಂಶ್ಚ ಮಾನವಾನ್॥೨೩॥

ಉತ್ಥಾಯಾಪರರಾತ್ರಾನ್ತೇ ಪ್ರಯತಾಃ ಸುಸಮಾಹಿತಾಃ ।
ಸ್ಮರನ್ತಿ ಮಮ ರೂಪಾಣಿ ಮುಚ್ಯನ್ತೇ ಹ್ಯೇನಸೋಽಖಿಲಾತ್ ॥೨೪॥

೧೭-೨೪. ಶ್ರೀಭಗವಂತನಿಂತೆಂದನು: ಯಾರು (ಪ್ರತಿದಿನವೂ) ಬೆಳಗಿನ ಜಾವದಲ್ಲಿ (ಉಷಃಕಾಲದಲ್ಲಿ) ಎದ್ದು ನನ್ನನ್ನು, ನಿನ್ನನ್ನು[1] ಈ ಸರೋವರವನ್ನೂ ಬೆಟ್ಟ, ಗುಹೆ, ಕಾಡುಗಳನ್ನೂ, ಬೆತ್ತ, ಬಿದಿರು, ಸಣ್ಣಬಿದಿರುಗಳ ಪೊದೆಗಳನ್ನೂ ದೇವತಾವೃಕ್ಷಗಳನ್ನೂ[2] ಬ್ರಹ್ಮನ, ನನ್ನ,[3] ಹಾಗೂ ಶಿವನ ಸ್ಥಾನಗಳಾದ ಈ ತ್ರಿಕೂಟಶಿಖರಗಳನ್ನೂ ನನಗೆ ಪ್ರಿಯವಾದ ವಾಸಸ್ಥಾನವಾದ ಕ್ಷೀರಸಮುದ್ರ, ಹೊಳೆಯುತ್ತಿರುವ ಶ್ವೇತದ್ವೀಪ, ನನ್ನ (ಅಲಂಕಾರಗಳಾದ) ಶ್ರೀವತ್ಸ, ಕೌಸ್ತುಭ, ವನಮಾಲೆ - ಇವುಗಳನ್ನೂ (ಆಯುಧಗಳಾದ) ಕೌಮೋದಕೀ ಎಂಬ ಗದೆ, ಸುದರ್ಶನವೆಂಬ (ಚಕ್ರ), ಪಾಂಚಜನ್ಯವೆಂಬ (ಶಂಖ) ಮತ್ತು ವಾಹನವಾದ ಪಕ್ಷಿಶ್ರೇಷ್ಠನಾದ ಗರುಡ, ನನ್ನ ಸೂಕ್ಷ್ಮ ಅಂಶನಾದ ಆದಿಶೇಷ, ನನ್ನನ್ನು ಆಶ್ರಯಿಸಿರುವ ಲಕ್ಷ್ಮೀದೇವಿ, ಬ್ರಹ್ಮದೇವ, ದೇವ ಋಷಿಯಾದ ನಾರದ, ಪರಮೇಶ್ವರ, ಪ್ರಹ್ಲಾದ, ಮತ್ಸ್ಯ, ಕೂರ್ಮ, ವರಾಹಾದಿ ಅವತಾರಗಳಲ್ಲಿ ನಾನು ಮಾಡಿರುವ ಅನಂತಪುಣ್ಯಕರವಾದ ಲೋಕಾನುಗ್ರಹಕರ್ಮಗಳು, ಸೂರ್ಯದೇವ, ಚಂದ್ರ, ಅಗ್ನಿ, ಓಂಕಾರ, ಸತ್ಯ, ಅವ್ಯಕ್ತ (ವಾದ ನನ್ನ ಮಾಯೆ), ಗೋವುಗಳು, ಬ್ರಾಹ್ಮಣರು, ಅವ್ಯಯವಾದ ಧರ್ಮ, ಧರ್ಮಪತ್ನಿಯರಾದ ದಾಕ್ಷಾಯಣಿಯರು[4] ಚಂದ್ರ ಹಾಗೂ ಕಾಶ್ಯಪನ ಪತ್ನಿಯರು,[5]

1. ಗಜೇಂದ್ರನನ್ನು,

2. ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ, ಹರಿಚಂದನ - ಇವೇ ದೇವತರುಗಳು.

3. ವಿಷ್ಣುವಿನ.

4. ಧರ್ಮದೇವತೆಯ ಪತ್ನಿಯರು ದಾಕ್ಷಾಯಣಿಯರಾದ ಶ್ರದ್ಧಾ, ಮೈತ್ರೀ, ದಯಾ, ಶಾನ್ತಿಃ, ತುಷ್ಟಿಃ, ಪುಷ್ಟಿಃ, ಕ್ರಿಯಾ, ಉನ್ನತಿಃ, ಬುದ್ಧಿಃ, ಮೇಧಾ, ತಿತಿಕ್ಷಾ, ಹ್ರೀಃ, ಮೂರ್ತಿಃ - ಎಂಬ ಹದಿಮೂರು ಜನರೆಂತ ಸ್ವಾಯಂಭುವಮನ್ವಂತರದ ದಕ್ಷನೆಂಬ ಹೆಸರಿನ ಪ್ರಜಾಪತಿಯ ಮಕ್ಕಳು ಪ್ರಸಿದ್ಧರಾಗಿದ್ದಾರೆ. ಚಾಕ್ಷುಷಮನ್ವಂತರದ ಮತ್ತೊಬ್ಬ ದಕ್ಷನ ಮಕ್ಕಳಾದ ಭಾನುಃ, ಲಮ್ಬಾ, ಕಕುಬ್, ಜಾಮಿಃ, ವಿಶ್ವಾ, ಸಾಧ್ಯಾ, ಮರುತ್ವತೀ, ವಸು, ಮುಹೂರ್ತಾ, ಸಂಕಲ್ಪಾ - ಎಂಬ ಹತ್ತು ಜನರು ಧರ್ಮದೇವನ ಪತ್ನಿಯರೆಂದೂ ಭಾಗವತ (೬-೬) ದಲ್ಲಿದೆ.

5. ಅದಿತಿಃ, ದಿತಿಃ, ದನುಃ, ಕಾಷ್ಠಾ, ಅರಿಷ್ಟಾ, ಸುರಸಾ, ಇಲಾ, ಮುನಿಃ, ಕ್ರೋಧವಶಾ, ತಾಮ್ರಾ, ಸುರಭಿಃ, ಸರಮಾ, ತಿಮಿಃ - ಎಂಬ ಹದಿಮೂರು ಜನರು ಕಾಶ್ಯಪನ ಪತ್ನಿಯರು. ಕೃತ್ತಿಕಾ - ಮುಂತಾದ ಇಪ್ಪತ್ತೇಳು ನಕ್ಷತ್ರದೇವತೆಗಳು ಚಂದ್ರನ ಪತ್ನಿಯರು. ಇವರೆಲ್ಲರೂ ದಕ್ಷಪ್ರಜಾಪತಿಯ ಮಕ್ಕಳೇ.

ಗಂಗೆ, ಸರಸ್ವತೀ, ನಂದೆ, ಯಮುನೆ, ಐರಾವತ, ಧ್ರುವ, ಏಳುಜನ ಬ್ರಹ್ಮರ್ಷಿಗಳು,[1] ಪುಣ್ಯಶ್ಲೋಕರಾದ ಮನುವಂಶಜರು - ಇವರನ್ನೂ ಮತ್ತು ನನ್ನ ಮಂಗಳರೂಪಗಳನ್ನೂ ಸ್ಮರಿಸುವರೋ ಅವರು ಎಲ್ಲಾ ಪಾಪಗಳಿಂದಲೂ ಬಿಡಲ್ಪಡುವರು.

**ಯೇ ಮಾಂ ಸ್ತುವನ್ತ್ಯನೇನಾಙ್ಗ ಪ್ರತಿಬುಧ್ಯ ನಿಶಾತ್ಯಯೇ ।**
**ತೇಷಾಂ ಪ್ರಾಣಾತ್ಯಯೇ ಚಾಹಂ ದದಾಮಿ ವಿಮಲಾಂ ಮತಿಮ್ ॥೨೫ ॥**

೨೫. ಅಪ್ಪ, ಯಾರು ರಾತ್ರಿಯಕೊನೆಯಲ್ಲಿ ಎಚ್ಚತ್ತು ಈ ಸೋತ್ರದಿಂದ ನನ್ನನ್ನು ಸ್ತುತಿಸುವರೋ ಅವರಿಗೆ ಪ್ರಾಣವು ಹೋಗುವ ಕಾಲದಲ್ಲಿ ನಾನು ಪವಿತ್ರವಾದ ಬುದ್ಧಿಯನ್ನು ಕೊಡುವೆನು.[2]

**ಶ್ರೀಶುಕ ಉವಾಚ -**

**ಇತ್ಯಾದಿಶ್ಯ ಹೃಷೀಕೇಶಃ ಪ್ರಧ್ಮಾಯ ಜಲಜೋತ್ತಮಮ್ ।**
**ಹರ್ಷಯನ್ ವಿಬುಧಾನೀಕಮಾರುರೋಹ ಖಗಾಧಿಪಮ್ ॥೨೬॥**

೨೬. ಹೀಗೆಂದು (ಗಜೇಂದ್ರನಿಗೆ) ಹೃಷೀಕೇಶನಾದ (ಹರಿಯು) ಅಪ್ಪಣೆ ಮಾಡಿ ನೀರಿನಲ್ಲಿ ಹುಟ್ಟಿದ ಶ್ರೇಷ್ಠವಾದ (ಪಾಂಚಜನ್ಯವೆಂಬ ತನ್ನ) ಶಂಖವನ್ನು ಚೆನ್ನಾಗಿ ಧ್ವನಿಮಾಡಿ ದೇವತೆಗಳ ಸಮೂಹವನ್ನು ಸಂತೋಷಗೊಳಿಸುತ್ತಾ ಪಕ್ಷಿಶ್ರೇಷ್ಠನಾದ (ಗರುಡ) ನನ್ನು ಏರಿ (ದಯಮಾಡಿಸಿದನು).

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಅಷ್ಟಮಸ್ಕನ್ಧೇ ಚತುರ್ಥೋಽಧ್ಯಾಯಃ

ಓಂ ತತ್ಸತ್

1. ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠ ಈ ಏಳುಜನ ಬ್ರಹ್ಮರ್ಷಿಗಳು.
2. `ಅನ್ತಕಾಲೇ ಚ ಮಾಮೇವ' (ಗೀ. ೮-೫) `ಯಂ ಯಂ ವಾಪಿ ಸ್ಮರನ್ ಭಾವಮ್' (ಗೀ. ೮-೬) ಎಂಬ ಗೀತಾಶ್ಲೋಕಗಳನ್ನೂ ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

||ಓಮ್||

||ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ||

# ಭೀಷ್ಮಸ್ತವರಾಜ

## ಪೀಠಿಕೆ

ಜನಮೇಜಯ ಉವಾಚ-

ಶರತಲ್ಪೇ ಶಯಾನಸ್ತು ಭಾರತಾನಾಂ ಪಿತಾಮಹಃ।
ಕಥಮುತ್ಸೃಷ್ಟವಾನ್ ದೇಹಂ ಕಂ ಚ ಯೋಗಮಧಾರಯತ್ ||೧||

ಜನಮೇಜಯನಿಂತೆಂದನು: ಎಲೈ ವೈಶಂಪಾಯನರೆ, ಶರತಲ್ಪದಲ್ಲಿ ಪವಡಿಸಿದ್ದ ಆ ಕೌರವಪಾಂಡವರ ಅಜ್ಜನಾದ ಭೀಷ್ಮನು ಹೇಗೆ ದೇಹವನ್ನು ಬಿಟ್ಟನು? ಆತನು ಆಗ ಯಾವ ಯೋಗವನ್ನು ಧರಿಸಿದ್ದನು?

ವೈಶಂಪಾಯನ ಉವಾಚ -

ಶೃಣುಷ್ವಾವಹಿತೋ ರಾಜನ್ ಶುಚಿರ್ಭೂತ್ವಾ ಸಮಾಹಿತಃ ||
ಭೀಷ್ಮಸ್ಯ ಕುರುಶಾರ್ದೂಲ ದೇಹೋತ್ಸರ್ಗಂ ಮಹಾತ್ಮನಃ ||೨||

ನಿವೃತ್ತಮಾತ್ರೇ ತ್ವಯನೇ ಉತ್ತರೇ ವೈ ದಿವಾಕರೇ।
ಸಮಾವೇಶಯದಾತ್ಮಾನಮಾತ್ಮನ್ಯೇವ ಸಮಾಹಿತಃ ||೩||

[ಶುಕ್ಲಪಕ್ಷಸ್ಯ ಚಾಷ್ಟಮ್ಯಾಂ ಮಾಘಮಾಸಸ್ಯ ಪಾರ್ಥಿವ]
ಪ್ರಾಜಾಪತ್ಯೇ ಚ ನಕ್ಷತ್ರೇ ಮಧ್ಯಂ ಪ್ರಾಪ್ತೇ ದಿವಾಕರೇ ||]

ವಿಕೀರ್ಣಾಂಶುರಿವಾದಿತ್ಯೋ ಭೀಷ್ಮಃ ಶರಶತೈಶ್ಚಿತಃ।
ಶುಶುಭೇ ಪರಯಾ ಲಕ್ಷ್ಮ್ಯಾ ವೃತೋ ಬ್ರಾಹ್ಮಣಸತ್ತಮೈಃ ||೪||

ವ್ಯಾಸೇನ ವೇದವಿದುಶಾ ನಾರದೇನ ಸುರರ್ಷಿಣಾ।
ದೇವಸ್ಥಾನೇನ[1] ವಾತ್ಸ್ಯೇನ ತಥಾತ್ಮಕ[2] ಸುಮನ್ತುನಾ ||೫||

ತಥಾ ಜೈಮಿನಿನಾ ಚೈವ ಪೈಲೇನ ಚ ಮಹಾತ್ಮನಾ।
ಶಾಣ್ಡಿಲ್ಯದೇವಲಾಭ್ಯಾಂ ಚ ಮೈತ್ರೇಯೇಣ ಚ ಧೀಮತಾ ||೬||

ಅಸಿತೇನ ವಸಿಷ್ಠೇನ ಕೌಶಿಕೇನ ಮಹಾತ್ಮನಾ।
ಹಾರೀತಲೋಮಶಾಭ್ಯಾಂ ಚ ತಥಾತ್ರೇಯೇಣ ಧೀಮತಾ ||೭||

1. 'ದೇವರಾತೇನ' ಪಾ||
2. 'ತಥಾ ತೇನ' ಪಾ||

ಬೃಹಸ್ಪತಿಶ್ಚ ಶುಕ್ರಶ್ಚ ಚ್ಯವನಶ್ಚ ಮಹಾಮುನಿಃ ।
ಸನತ್ಕುಮಾರಃ ಕಪಿಲೋ ವಾಲ್ಮೀಕಿಸ್ತುಮ್ಬುರುಃ ಕುರುಃ ॥೮॥

ಮೌದ್ಗಲ್ಯೋ ಭಾರ್ಗವೋ ರಾಮಸ್ತೃಣಬಿನ್ದುರ್ಮಹಾಮುನಿಃ ।
ಪಿಪ್ಪಲಾದಶ್ಚ ವಾಯುಶ್ಚ ಸಂವರ್ತಃ ಪುಲಹಃ ಕಚಃ ॥೯॥

ಕಶ್ಯಪಶ್ಚ[1] ಪುಲಸ್ತ್ಯಶ್ಚ ಕ್ರತುರ್ದಕ್ಷಃ ಪರಾಶರಃ ।
ಮರೀಚಿರಙ್ಗಿರಾಃ ಕಣ್ವೋ ಗೌತಮೋ ಗಾಲವೋ ಮುನಿಃ ॥೧೦॥

ಧೌಮ್ಯೋ ವಿಭಾಣ್ಡೋ ಮಾಣ್ಡವ್ಯೋ ಧೌಮ್ರಃ ಕೃಷ್ಣಾನುಭೌತಿಕಃ ।[2]
ಉಲೂಕಃ ಪರಮೋ ವಿಪ್ರೋ ಮಾರ್ಕಣ್ಡೇಯೋ ಮಹಾಮುನಿಃ ॥

ಭಾಸ್ಕರಃ ಪೂರಣಃ ಕೃಷ್ಣಃ ಸೂತಃ ಪರಮಧಾರ್ಮಿಕಃ ।
[ಶೈಬ್ಯೇನ[3] ಯಾಜ್ಞವಲ್ಕ್ಯೇನ ಶಙ್ಖೇನ ಲಿಖಿತೇನ ಚ]
ಏತೈಶ್ಚಾನ್ಯೈರ್ಮುನಿಗಣೈರ್ಮಹಾಭಾಗೈರ್ಮಹಾತ್ಮಭಿಃ ॥೧೨॥

ಶ್ರದ್ಧಾದಮಶಮೋಪೇತೈರ್ವೃತಶ್ಚನ್ದ್ರ ಇವ ಗ್ರಹೈಃ ।
ಭೀಷ್ಮಸ್ತು ಪುರುಷವ್ಯಾಘ್ರಃ ಕರ್ಮಣಾ ಮನಸಾ ಗಿರಾ ॥೧೩॥

ಶರತಲ್ಪಗತಃ ಕೃಷ್ಣಂ ಪ್ರದಧ್ಯೌ ಪ್ರಾಞ್ಜಲಿಃ ಶುಚಿಃ ।
ಸ್ವರೇಣ ಹೃಷ್ಟಪುಷ್ಟೇನ ತುಷ್ಟಾವ ಮಧುಸೂದನಮ್ ॥೧೪॥

ಯೋಗೇಶ್ವರಂ ಪದ್ಮನಾಭಂ ವಿಷ್ಣುಂ ಜಿಷ್ಣುಂ ಜಗತ್ಪ್ರಭುಮ್ ।
ಕೃತಾಞ್ಜಲಿಃ ಶುಚಿರ್ಭೂತ್ವಾ ವಾಗ್ವಿದಾಂ ಪ್ರವರಂ ಪ್ರಭುಃ ।
ಭೀಷ್ಮಃ ಪರಮಧರ್ಮಾತ್ಮಾ ವಾಸುದೇವಮಥಾಸ್ತುವತ್ ॥೧೫॥

೨-೧೫. ಎಲೈ ರಾಜನೆ, ಕುರುಶ್ರೇಷ್ಠನೆ, ಮಹಾತ್ಮನಾದ ಭೀಷ್ಮನು ದೇಹವನ್ನು ಬಿಟ್ಟ ಬಗೆಯನ್ನು ಚಿತ್ತವಿಟ್ಟು ಶುಚಿಯಾಗಿ ಸಮಾಧಾನದಿಂದ ಕೇಳು. ಉತ್ತರಾಯಣಕ್ಕೆ ಸೂರ್ಯನು ಬಂದನೋ ಇಲ್ಲವೋ, ಆತನು ತನ್ನನ್ನು ಪರಮಾತ್ಮನಲ್ಲಿಯೇ ಸೇರಿಸಿಕೊಂಡುಬಿಟ್ಟನು. ಕಿರಣಗಳನ್ನು ಪಸರಿಸುವ ಸೂರ್ಯನಂತೆ ನೂರಾರು ಬಾಣಗಳಿಂದ ಸುತ್ತುವರೆಯಲ್ಪಟ್ಟಿದ್ದ ಭೀಷ್ಮನು ಬ್ರಾಹ್ಮಣಶ್ರೇಷ್ಠರಿಂದ ಕೂಡಿ ಪರಮಕಾಂತಿಯಿಂದ ಒಪ್ಪುತ್ತಿದ್ದನು. ವೇದವನ್ನು ಬಲ್ಲ ವ್ಯಾಸನು, ದೇವರ್ಷಿಯಾದ ನಾರದನು, ದೇವಸ್ಥಾನನು, ವಾತ್ಸ್ಯನು, ಅಶ್ಮಕಸುಮಂತು, ಜೈಮಿನಿ, ಮಹಾತ್ಮನಾದ ಪೈಲನು, ಶಾಂಡಿಲ್ಯನು, ದೇವಲನು, ಬುಧವರ್ಯನಾದ ಮೈತ್ರೇಯನು, ಅಸಿತನು, ವಸಿಷ್ಠನು, ಮಹಾತ್ಮನಾದ ಕೌಶಿಕನು, ಹಾರೀತನು, ಲೋಮಶನು, ಮತ್ತು ಬುಧಶ್ರೇಷ್ಠನಾದ ಆತ್ರೇಯನು, ಬೃಹಸ್ಪತಿ, ಶುಕ್ರನು, ಮಹಾಮುನಿಯಾದ ಚ್ಯವನನು,

1. 'ಕಾಶ್ಯಪಶ್ಚ', ಪಾ॥
2. 'ಕೃಷ್ಣೋನು ಭೌತಿಕಃ;, ಪಾ॥
3. ಈ ಅರ್ಧ ಶ್ಲೋಕವು ಭಾರತದಲ್ಲಿಲ್ಲ

ಸನತ್ಕುಮಾರನು, ಕಪಿಲನು, ವಾಲ್ಮೀಕಿ, ತುಂಬುರು, ಕುರು, ಮೌದ್ಗಲ್ಯನು, ಭಾರ್ಗವನು, ಮಹಾಮುನಿಯಾದ ತೃಣಬಿಂದು, ಪಿಪ್ಪಲಾದನು, ವಾಯು, ಸಂವರ್ತನು, ಪುಲಹನು, ಕಚನು, ಕಶ್ಯಪನು, ಪುಲಸ್ತ್ಯನು, ಕ್ರತು, ದಕ್ಷನು, ಪರಾಶರನು, ಮರೀಚಿ, ಅಂಗಿರಸ್ಸು, ಕಣ್ವನು, ಗೌತಮನು, ಗಾಲವಮುನಿ, ಧೌಮ್ಯನು, ವಿಭಾಂಡನು, ಮಾಂಡವ್ಯನು, ಧೌಮ್ರನು, ಕೃಷ್ಣಾನುಭೌತಿಕನು, ಪರಮವಿಪ್ರನಾದ ಉಲೂಕನು, ಮಹಾಮುನಿಯಾದ ಮಾರ್ಕಂಡೇಯನು, ಭಾಸ್ಕರನು, ಪೂರಣನು, ಕೃಷ್ಣನು, ಪರಮಧಾರ್ಮಿಕನಾದ ಸೂತನು -ಇವರೇ ಮೊದಲಾದ ಮಹಾಭಾಗ್ಯಶಾಲಿಗಳೂ ಮಹಾತ್ಮರೂ ಶ್ರದ್ಧಾದಮಶಮಗಳಿಂದೊಡಗೂಡಿದವರೂ ಆಗಿರುವ ಮುನಿಗಣಗಳಿಂದ - ಗ್ರಹಗಳಿಂದೊಡಗೂಡಿದ ಚಂದ್ರನಂತೆ - ಸುತ್ತುವರಿಯಲ್ಪಟ್ಟು ಆ ಪುರುಷವ್ಯಾಘ್ರನಾದ ಭೀಷ್ಮನು ವಾಕ್ಕಿನಿಂದಲೂ ಮನಸ್ಸಿನಿಂದಲೂ ಕರ್ಮದಿಂದಲೂ ಶರಶಯ್ಯೆಯಿಂದಲೇ ಕೈಮುಗಿದುಕೊಂಡು ಶುಚಿರ್ಭೂತನಾಗಿ ಕೃಷ್ಣನನ್ನು ಧ್ಯಾನಮಾಡಿದನು. ಬಳಿಕ ಹರ್ಷದಿಂದೊಡಗೂಡಿದ ಗಟ್ಟಿಯಾದ ಸ್ವರದಿಂದ ಯೋಗಿಗಳೊಡೆಯನೂ ಪದ್ಮನಾಭನೂ ವಿಷ್ಣುವೂ ಜಯಶೀಲನೂ ಜಗತ್ಪ್ರಭುವೂ ಆದ ಆ ಮಧುಸೂದನನನ್ನು ಸ್ತೋತ್ರಮಾಡಿದನು. ಪರಮಧರ್ಮಾತ್ಮನಾದ ಭೀಷ್ಮನು ಸ್ತೋತ್ರಮಾಡಿದ ಬಗೆಯೆಂತೆಂದರೆ :

# ಸ್ತೋತ್ರ

**ಭೀಷ್ಮ ಉವಾಚ -**

**ಆರಿರಾಧಯಿಷುಃ ಕೃಷ್ಣಂ ವಾಚಂ ಜಿಗದಿಷಾಮಿ ಯಾಮ್[1] |**
**ತಯಾ ವ್ಯಾಸಸಮಾಸಿನ್ಯಾ ಪ್ರೀಯತಾಂ ಪುರುಷೋತ್ತಮಃ || ೧೬ ||**

೧೬. ಕೃಷ್ಣನನ್ನು ಆರಾಧನೆಮಾಡಬೇಕೆಂದು ನಾನು ಯಾವ ಮಾತನ್ನು ಹೇಳಲಿರುವೆನೋ ಸಂಕ್ಷೇಪವಿಸ್ತರಾತ್ಮಕವಾದ ಆ ವಾಕ್ಕಿನಿಂದ ಪುರುಷೋತ್ತಮನು ಪ್ರೀತನಾಗಲಿ!

'ಕೃಷಿರ್ಭೂವಾಚಕಃ ಶಬ್ದೋ ಣಶ್ಚ ನಿರ್ವೃತಿವಾಚಕಃ' ಎಂಬ ಉಕ್ತಿಯಿಂದ ಕೃಷ್ಣನೆಂಬುದು ಸದಾನಂದಸ್ವರೂಪನಾದ ಪರಮಾತ್ಮನ ನಾಮವು. ಶ್ರೀಕೃಷ್ಣನ ರೂಪದಿಂದ ಅವತಾರಮಾಡಿದ್ದರಿಂದಲೂ ಕೃಷ್ಣವರ್ಣದ ಆಕಾರದಿಂದ ಆತನು ತೋರಿಕೊಂಡದ್ದರಿಂದಲೂ ಕೃಷ್ಣನೆಂಬ ಹೆಸರು ರೂಢವಾಗಿಯೂ ಆತನದೇ ಆಗಿರುವದರಿಂದಲೂ ಇಲ್ಲಿ ಸಗುಣನಿರ್ಗುಣರೂಪವಾಗಿರುವ ಪರಮಾತ್ಮನನ್ನೇ ಕೃಷ್ಣನೆಂದು ಕರೆದಿದೆ. ಸ್ತೋತ್ರಕ್ಕೆ ಸಗುಣರೂಪವೇ ಬೇಕಾಗಿರುವದರಿಂದ ಇಲ್ಲಿ ಅದನ್ನೇ ಮುಖ್ಯವಾಗಿ ಲಕ್ಷ್ಯವಾಗಿಟ್ಟುಕೊಂಡಿದೆಯೆಂದೂ ಹೇಳಬಹುದು. ಪರಮಾತ್ಮನನ್ನು ಆರಾಧಿಸುವದೆಂದರೆ ತತ್ತ್ವವನ್ನರಿತು ಧ್ಯಾನ ಮಾಡುವದು; ಇದಕ್ಕಾಗಿ ಇಲ್ಲಿ ಸ್ತೋತ್ರವನ್ನು ಮಾಡುತ್ತೇನೆಂದು ಭೀಷ್ಮರು ಹೇಳಿರುವದರಿಂದ ಸಾಧಕರೂ ಈ ಸ್ತೋತ್ರವನ್ನು ಹೇಳುವಾಗ ಭಗವಂತನ ಸ್ವರೂಪವನ್ನು ಚಿಂತಿಸಿಕೊಳ್ಳುತ್ತಿರಬೇಕು. ಅದರಿಂದ ಆ ಪರಮೇಶ್ವರನ ಆರಾಧನೆಯಾಗುತ್ತದೆ.

1. 'ಜಿಗದಿಷಾಮ್ಯಹಮ್' ಪಾ||

ಈ ಸ್ತೋತ್ರದಲ್ಲಿ ಸಂಕ್ಷೇಪಭಾಗವೆಂದೂ ವಿಸ್ತರಭಾಗವೆಂದೂ ಎರಡು ಭಾಗಗಳಿವೆ. ೧೬ ರಿಂದ ೧೮ನೆಯ ಶ್ಲೋಕಗಳವರೆಗಿನ ಭಾಗವು ಸಂಕ್ಷೇಪ ಭಾಗವು, ಎಂದರೆ ಸಾಮಾನ್ಯರೂಪದಿಂದ ಪರಮಾತ್ಮನನ್ನು ವರ್ಣಿಸುವ ಶ್ಲೋಕಗಳ ಭಾಗವು. ಅಲ್ಲಿಂದ ಮುಂದಕ್ಕೆ ವಿಸ್ತರಭಾಗವು, ಎಂದರೆ ಸೂರ್ಯಸೋಮಾದಿ ವಿಶೇಷರೂಪದಿಂದ ವರ್ಣಿಸುವ ಶ್ಲೋಕಗಳ ಭಾಗವು.

**ಶುಚಿಂ ಶುಚಿಷದಂ[1] ಹಂಸಂ ತತ್ಪದಂ ಪರಮೇಷ್ಠಿನಮ್ ।**
**ಮುಕ್ತ್ವಾ ಸರ್ವಾತ್ಮನಾತ್ಮಾನಂ ತಂ ಪ್ರಪದ್ಯೇ ಪ್ರಜಾಪತಿಮ್ ॥೧೭॥**

೧೭. ಶುಚಿಯಾಗಿಯೂ ಶುಚಿಯಲ್ಲಿರುವವನಾಗಿಯೂ ಹಂಸನಾಗಿಯೂ ಆ ಪ್ರಸಿದ್ಧವಾದ ಸ್ಥಾನವಾಗಿಯೂ ಇರುವ ಪರಮೇಷ್ಠಿಯಾಗಿರುವ ಆ ಪ್ರಜಾಪತಿಯನ್ನು, ಮುಕ್ತರಿಗೆ ಸರ್ವರೀತಿಯಿಂದಲೂ ಆತ್ಮನಾಗಿರುವ ಆ ಪರಮಾತ್ಮನನ್ನು, ಶರಣುಹೊಕ್ಕಿರುತ್ತೇನೆ.

ಪರಮಾತ್ಮನು ಶುಚಿಯು, ತನ್ನಲ್ಲಿಯಾಗಲಿ ಮತ್ತೊಂದರಿಂದಾಗಲಿ ದೋಷದ ಸೋಂಕಿಲ್ಲದೆ ಶುದ್ಧನಾಗಿರುವಾತನು. ಶುಚಿಷದನು, ಎಂದರೆ ಶುಚಿಯಾದ ಹೃದಯದಲ್ಲಿರುವಾತನು, ಶುಚಿಯಾದೆಡೆಯಲ್ಲಿ ಮಾತ್ರವೇ ಪ್ರಕಟವಾಗುವವನು. `ಶುಚಿಪದನು' ಎಂಬ ಪಾಠಾಂತರವೂ ಉಂಟು. ಆಗ ಶುಚಿಯಾದ ಸಾಧನದಿಂದಲೇ ದೊರಕುವಾತನು ಎಂದರ್ಥ. ತತ್ಪದವು, ಆ ಸ್ಥಾನವು, ಎಂದರೆ ಎಲ್ಲಕ್ಕಿಂತಲೂ ಹೆಚ್ಚಿನದಾದ ಶ್ರುತಿಸ್ಮೃತಿಪ್ರಸಿದ್ಧವಾದ ವಿಷ್ಣುತತ್ತ್ವವು. ಈ ನಿತ್ಯನಿರ್ಗುಣನಿರ್ವಿಶೇಷನಾಗಿರುವ ಪರಮಾತ್ಮನೇ ಹಂಸನಾಗಿರುತ್ತಾನೆ; ಎಲ್ಲರ ಶರೀರದಲ್ಲಿಯೂ ಇರುವ ಜೀವನಾಗಿರುತ್ತಾನೆ, ಆತನೇ ಅತ್ಯಂತ ಉತ್ಕೃಷ್ಟವಾದ ಉಪಾಧಿಯಿಂದ ಪರಮೇಷ್ಠಿ, ಎಂದರೆ ಹಿರಣ್ಯಗರ್ಭನು ಎನ್ನಿಸಿಕೊಂಡಿರುತ್ತಾನೆ. ಆತನೇ ಸ್ಥೂಲಸಮಷ್ಟಿಯ ಉಪಾಧಿಯಿಂದ ಪ್ರಜಾಪತಿ ಎಂದರೆ ವಿರಾಟ್ಪುರುಷನೆನಿಸಿಕೊಂಡಿರುತ್ತಾನೆ. ಬದ್ಧರಾದ ನಮ್ಮಗಳ ದೃಷ್ಟಿಯಿಂದ ನಮಗಿಂತ ಬೇರೆಯಾಗಿರುವವನಾದರೂ ಜ್ಞಾನದಿಂದ ಮುಕ್ತರಾದವರ ಕಣ್ಣಿನಿಂದ ನೋಡಿದರೆ ಎಲ್ಲಾ ಬಗೆಯಿಂದಲೂ ನಮ್ಮಗಳ ಆತ್ಮನೇ ಆಗಿರುತ್ತಾನೆ; ಆತನೇ ಎಲ್ಲವೂ ಆಗಿರುತ್ತಾನೆ, ಎಲ್ಲದರ ತಿರುಳೂ ಆಗಿರುತ್ತಾನೆ.

ಹೀಗೆ, ಸಂಗ್ರಹವಾಗಿ ಹೇಳಿದರೆ, ಶ್ರೀಕೃಷ್ಣಪರಮಾತ್ಮನು ಸರ್ವವೂ ಆಗಿರುತ್ತಾನೆ.

**ಅನಾದ್ಯನ್ತಂ ಪರಂ ಬ್ರಹ್ಮ ನ ದೇವಾ ನರ್ಷಯೋ ವಿದುಃ ।**
**ಏಕೋಽಯಂ ವೇದ ಭಗವಾನ್[2] ಧಾತಾ ನಾರಾಯಣೋ ಹರಿಃ ॥೧೮॥**

೧೮. ಆದ್ಯಂತಗಳಿಲ್ಲದ ಪರಬ್ರಹ್ಮವನ್ನು ದೇವತೆಗಳಾಗಲಿ ಋಷಿಗಳಾಗಲಿ ಅರಿಯರು. ಈ ಭಗವಂತನಾದ ಧಾತನಾದ ನಾರಾಯಣನೇ, ಹರಿಯೇ (ಆ ತನ್ನ ಸ್ವರೂಪವನ್ನು) ಬಲ್ಲನು.

1. `ಶುಚಿಪದಮ್' ಪಾ ॥
2. `ಭಗವಾನ್ ದೇವೋ' ಪಾ॥

**ನಾರಾಯಣಾದೃಷಿಗಣಾಸ್ತಥಾ ಸಿದ್ಧಮಹೋರಗಾಃ।**
**ದೇವಾ ದೇವರ್ಷಯಶ್ಚೈವ ಯಂ ವಿದುಃ ಪರಮವ್ಯಯಮ್ ॥೧೯॥**

೧೯. ನಾರಾಯಣನಿಂದಲೇ ಋಷಿಗಣಗಳೂ ಸಿದ್ಧರೂ ಮಹೋರಗರೂ ದೇವತೆಗಳೂ ದೇವರ್ಷಿಗಳೂ ಉಂಟಾಗಿರುವರು; ಆತನನ್ನೇ ಪರನೆಂದೂ ಅವ್ಯಯನೆಂದೂ ಬಲ್ಲವರು ಎಣಿಸುತ್ತಾರೆ.

**ದೇವದಾನವಗನ್ಧರ್ವಾ ಯಕ್ಷರಾಕ್ಷಸಪನ್ನಗಾಃ।**
**ಯಂ ನ ಜಾನನ್ತಿ ಕೋ ಹ್ಯೇಷ ಕುತೋ ವಾ ಭಗವಾನಿತಿ ॥೨೦॥**

೨೦. ದೇವತೆಗಳು, ದಾನವರು, ಗಂಧರ್ವರು, ಯಕ್ಷರು, ರಾಕ್ಷಸರು, ಪನ್ನಗರು- ಯಾರೊಬ್ಬರೂ ಭಗವಂತನು ಯಾರು, ಈತನು ಎಲ್ಲಿಂದ ಬಂದಿರುವನು? - ಎಂದು ತಿಳಿದುಕೊಳ್ಳಲರಿಯರು.

ಪರಮಾತ್ಮನ ಸ್ವರೂಪವು ಕಾಲದಿಂದಲಾಗಲಿ ದೇಶದಿಂದಲಾಗಲಿ ಮೊದಲು ಕೊನೆಗಳಿಲ್ಲದ್ದು; ಆದ್ದರಿಂದ ಅದನ್ನು `ಪರಬ್ರಹ್ಮ' ಎಲ್ಲವನ್ನೂ ಮೀರಿರುವ ಮಿಗಿಲಿಲ್ಲದ ಸ್ವರೂಪವು ಎಂದು ಕರೆಯುತ್ತಾರೆ. ಈ ಸ್ವರೂಪವನ್ನು ದೇವತೆಗಳಾಗಲಿ ಋಷಿಗಳಾಗಲಿ ವಿಷಯೀಕರಿಸಿ ಅರಿಯಲಾರರು, ದೇವತೆಗಳಿಗೆ ಪ್ರಕಟವಾಗುವದು, ಮರೆಯಾಗುವುದು- ಮುಂತಾದ ಸಿದ್ಧಿಗಳು ಉಂಟು; ಅವರಿಗೆ ಮರ್ತ್ಯರಾದ ನಮ್ಮಗಳ ಹೃದಯದಲ್ಲಿರುವ ಭಾವನೆಗಳನ್ನು ತಾವೇ ಅರಿತುಕೊಳ್ಳುವದಕ್ಕೂ ನಮ್ಮ ಇಷ್ಟಾರ್ಥಗಳನ್ನು ಈಡೇರಿಸುವದಕ್ಕೂ ಶಕ್ತಿಯುಂಟು, ಇದರಂತೆ ಋಷಿಗಳು ತಪಸ್ಸಿನಿಂದ ಶುದ್ಧರಾಗಿ ಮಂತ್ರಾದಿಗಳನ್ನು ಕಂಡುಕೊಂಡಿರುತ್ತಾರೆ; ಬಹುದೂರವಾಗಿ ಪರೋಕ್ಷದಲ್ಲಿ ಆಗುವ ಘಟನೆಗಳನ್ನು ಬಲ್ಲವರಾಗಿರುತ್ತಾರೆ. ಆದ್ದರಿಂದ ಸಾಮಾನ್ಯರಾದ ನಮಗಿಂತ ಅವರು ಸರ್ವಜ್ಞರೂ ಆಗಿರುತ್ತಾರೆ. ಆದಕಾರಣ ನಮ್ಮಂಥವರ ಮೇಲೆ ಅವರ ಅನುಗ್ರಹದ ಪರಿಣಾಮವು ಆಗುವ ಸಂಭವವುಂಟು. ಆದರೆ ಈ ದೇವತೆಗಳಾಗಲಿ ಋಷಿಗಳಾಗಲಿ ಯಾರೊಬ್ಬರೂ ಪರಮೇಶ್ವರನಾದ ಭಗವನ್ನಾರಾಯಣನ ತತ್ತ್ವವನ್ನು ತಮ್ಮ ಸ್ವಂತಪ್ರತಿಭೆಯಿಂದ ಎಂದಿಗೂ ಅಳೆಯಲಾರರು. ಏಕೆಂದರೆ ಇವರೆಲ್ಲರೂ ಅವನಿಂದಲೇ ಹುಟ್ಟಿರುತ್ತಾರೆ. ಆತನ ಸ್ವರೂಪವು ಅನಂತವಾದ ಮಹಿಮೆಯುಳ್ಳದ್ದು.

ಆ ಭಗವಂತನೊಬ್ಬನೇ ತನ್ನ ತತ್ತ್ವವನ್ನು ಇದ್ದಷ್ಟು ಇದ್ದಂತೆ ಅರಿತುಕೊಂಡಿರುವವನು. ಆತನು ಮಿಕ್ಕವರಿಗೂ ತನ್ನ ಸ್ವರೂಪವನ್ನು ತನ್ನ ಇಚ್ಛೆ ಬಂದರೆ ಅರಿಯುವಂತೆ ಅನುಗ್ರಹಿಸಬಲ್ಲನು. ಆತನ ಸ್ವರೂಪಕ್ಕೆ ಎಂದಿಗೂ ಚ್ಯುತಿಯಿಲ್ಲ, ನಾಶವಿಲ್ಲ.

**ಯಸ್ಮಿನ್ ವಿಶ್ವಾನಿ ಭೂತಾನಿ ತಿಷ್ಠನ್ತಿ ಚ ವಿಶನ್ತಿ ಚ।**
**ಗುಣಭೂತಾನಿ ಭೂತೇಶೇ ಸೂತ್ರೇ ಮಣಿಗಣಾ ಇವ ॥೨೧॥**

**ಯಸ್ಮಿನ್ನಿತ್ಯೇ ತತೇ ತನ್ತೌ ದೃಢೇ ಸ್ರಗಿವ ತಿಷ್ಠತಿ।**
**ಸದಸದ್ಗ್ರಥಿತಂ ವಿಶ್ವಂ ವಿಶ್ವಾಙ್ಗೇ ವಿಶ್ವಕರ್ಮಣಿ ॥೨೨॥**

೨೧. ೨೨. ಭೂತೇಶನಾದ ಯಾವಾತನಲ್ಲಿ ಸಮಸ್ತಭೂತಗಳೂ ಅಧೀನವಾಗಿದ್ದುಕೊಂಡು ದಾರದಲ್ಲಿ ರತ್ನಗಳ ಗುಂಪುಗಳಂತೆ ಇದ್ದುಕೊಂಡು ಒಳಹೊಗುವವೋ, ವಿಶ್ವರೂಪನೂ ವಿಶ್ವಕರ್ಮನೂ ಆದ ನಿತ್ಯವಾದ ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಯಾವಾತನಲ್ಲಿ, ಗಟ್ಟಿಯಾದ ದಾರದಲ್ಲಿ ಮಾಲೆಯು ಬಿಗಿದುಕೊಂಡಿರುವಂತೆ, ಸತ್ತೂ ಅಸತ್ತೂ ಆಗಿರುವ ವಿಶ್ವವು ಬಿಗಿವಡೆದುಕೊಂಡಿರುವದೋ (ಆ ಪ್ರಜಾಪತಿಯನ್ನು ಶರಣುಹೊಕ್ಕಿರುವೆನು.)

ಇಲ್ಲಿಂದ ಮುಂದಕ್ಕೆ ೩೦ನೆಯ ಶ್ಲೋಕದಲ್ಲಿರುವ 'ತಂ ಪ್ರಪದ್ಯೇ ಪ್ರಜಾಪತಿಮ್' ಎಂಬವರೆಗಿನ ಶ್ಲೋಕಗಳೆಲ್ಲ ಸೇರಿ ಒಂದು ವಾಕ್ಯವಾಗಿದೆ. ಅರ್ಥಸ್ವಾರಸ್ಯವನ್ನು ವಿವರಿಸುವದಕ್ಕಾಗಿ ಅಲ್ಲಿಗಲ್ಲಿಗೇ ಬಿಡಿಸಿಕೊಂಡು ಭಾವಾರ್ಥವನ್ನು ಬೇರೆಬೇರೆಯಾಗಿ ಕೊಟ್ಟಿರುತ್ತದೆ.

ಆಕಾಶವೇ ಮುಂತಾದ ಸಮಸ್ತಭೂತಗಳೂ ಆ ಭೂತಗಳಿಂದಾಗಿರುವ ಸಮಸ್ತ ಪ್ರಾಣಿದೇಹಗಳೂ ದಾರದಲ್ಲಿ ರತ್ನಗಳು ಪೋಣಿಸಿರುವ ಹಾಗೆ ಪರಮಾತ್ಮನಲ್ಲಿ ಪೋಣಿಸಿವೆ - ಎಂದು ಹೇಳಿದ್ದರಲ್ಲಿ ಪರಮಾತ್ಮನು ಅವುಗಳಿಗೆಲ್ಲ ಅಂತರ್ಯಾಮಿಯಾಗಿರುತ್ತಾನೆಂಬ ಅರ್ಥವೇ ಅಲ್ಲದೆ, ಭೂತಗಳಿಗೆ ಆತನನ್ನು ಬಿಟ್ಟರೆ ಯಾವ ಸ್ವತಂತ್ರವಾದ ಇರವೂ ಇಲ್ಲವೆಂಬರ್ಥವೂ ಅಡಗಿರುತ್ತದೆ. ಆದ್ದರಿಂದಲೇ ಭೂತಗಳೆಲ್ಲವೂ ಆತ್ಮನಲ್ಲಿಯೇ ಸೇರಿಕೊಳ್ಳುತ್ತವೆ ಎಂದು ಹೇಳಿರುವದು. ದಾರದಲ್ಲಿ ರತ್ನಗಳು ಸೇರಿಕೊಂಡಾಗ ಅವು ದಾರವಾಗುವಹಾಗಿಲ್ಲ; ಆದರೆ ಭೂತಗಳು ತಾವು ಬೇರೆಬೇರೆಯಿದ್ದು ಅವುಗಳಿಗೆ ಆತ್ಮನು ಅಂತರ್ಯಾಮಿಯಾಗಿರುವಂತೆ ತೋರಿದರೂ ಪ್ರಲಯಕಾಲಕ್ಕೆ ಆತ್ಮನಲ್ಲಿಯೇ ಅವೆಲ್ಲವೂ ಅಡಕವಾಗಿಬಿಡುತ್ತವೆ. ಆದ್ದರಿಂದ ಸ್ಥಿತಿಕಾಲದಲ್ಲಿಯೂ ಅವುಗಳ ತಿರುಳು ಪರಮಾತ್ಮನೇ ಎಂದು ಏರ್ಪಡುತ್ತದೆ. ನಾಮರೂಪಗಳು ಬಿಡಿಬಿಡಿಯಾಗಿ ಹೊರತೋರುವ ಸದ್ರೂಪ, ವಿಂಗಡವಿಲ್ಲದೆ ಅವ್ಯಾಕೃತವಾಗಿರುವ ಅಸದ್ರೂಪ- ಎಂದು ಪ್ರಪಂಚಕ್ಕೆ ಎರಡು ರೂಪಗಳುಂಟು. ಈ ಎರಡು ರೂಪಗಳೂ ನಾರಿನಲ್ಲಿ ಕಟ್ಟಿರುವ ಮಾಲಿಕೆಯಂತೆ ಆತ್ಮನಿಗೇ ಕಟ್ಟುಬಿದ್ದಿರುತ್ತವೆ; ನಿಜವಾಗಿ ವಿಶ್ವವೆಂಬುದೇ ಆತ್ಮನ ಶರೀರವಾಗಿರುತ್ತದೆ, ಅದರಲ್ಲಿ ತೋರುವ ಕ್ರಿಯೆಯೆಲ್ಲವೂ ಆತ್ಮನ ಸನ್ನಿಧಿಯಿಂದಲೇ ನಡೆಯುವದಾಗಿರುತ್ತದೆ.

**ಹರಿಂ ಸಹಸ್ರಶಿರಸಂ ಸಹಸ್ರಚರಣೇಕ್ಷಣಮ್ ।**
**ಸಹಸ್ರಬಾಹುಮುಕುಟಂ ಸಹಸ್ರವದನೋಜ್ಜ್ವಲಮ್ ॥೨೩॥**

**ಪ್ರಾಹುರ್ನಾರಾಯಣಂ ದೇವಂ ಯಂ ವಿಶ್ವಸ್ಯ ಪರಾಯಣಮ್ ।**
**ಅಣೀಯಸಾಮಣೀಯಾಂಸಂ ಸ್ಥವಿಷ್ಠಂ ಚ ಸ್ಥವೀಯಸಾಮ್ ॥೨೪॥**

**ಗರೀಯಸಾಂ ಗರಿಷ್ಠಂ ಚ ಶ್ರೇಷ್ಠಂ ಚ ಶ್ರೇಯಸಾಮಪಿ ॥೨೪½॥**

೨೩-೨೪½. ಹರಿಯೆಂದೂ ಸಾವಿರಾರು ತಲೆಗಳುಳ್ಳವನೆಂದೂ ಸಾವಿರಾರು ಪಾದಗಳೂ ಸಾವಿರಾರು ಕಣ್ಣುಗಳೂ ಉಳ್ಳವನೆಂದೂ ಸಾವಿರಾರು ಭುಜಗಳೂ ಕಿರೀಟಗಳೂ ಉಳ್ಳವನೆಂದೂ

ಸಾವಿರಾರು ಮುಖಗಳಿಂದ ಬೆಳಬೆಳಗುತ್ತಿರುವವನೆಂದೂ ತೀರ ಅಣುವಾಗಿರುವವುಗಳೆಲ್ಲಕ್ಕೂ ಅಣುವಾಗಿ ತೀರ ಸ್ಥೂಲವಾಗಿರುವವೆಲ್ಲಕ್ಕೂ ಸ್ಥೂಲವಾಗಿ ಬಹಳ ತೂಕವುಳ್ಳವುಗಳೆಲ್ಲಕ್ಕೂ ತೂಕವುಳ್ಳವನಾಗಿ ಮೇಲೆನಿಸಿಕೊಂಡಿರುವವಕ್ಕೆಲ್ಲ ಮೇಲೆನಿಸಿಕೊಂಡಿರುವವನೆಂದೂ ನಾರಾಯಣನೆಂದೂ ದೇವನೆಂದೂ ವಿಶ್ವಕ್ಕೆ ಕೊನೆಯ ಗತಿಯೆಂದೂ ಯಾವನನ್ನು ಹೇಳುವರೋ (ಆತನನ್ನು ಶರಣುಹೊಕ್ಕಿರುವೆನು).

ಹೀಗೆ ಆ ಪರಮಾತ್ಮನೇ ವಿಶ್ವವೆಲ್ಲವೂ ಆಗಿರುವದರಿಂದ ವಿಶ್ವದಲ್ಲಿ ಕಾರಣಬರುವ ಜೀವರುಗಳ ದೇಹೇಂದ್ರಿಯಗಳೆಲ್ಲವೂ ಆತನವೇ; ಆದ್ದರಿಂದ ಆತನ ದೇಹಗಳಾಗಲಿ ತಲೆಯೇ ಮುಂತಾದ ಅವಯವಗಳಾಗಲಿ ಇಷ್ಟೆಂದು ಲೆಕ್ಕಮಾಡಿ ಹೇಳುವದಕ್ಕೆ ಬರುವಂತಿಲ್ಲ. ಇದೇ ಕಾರಣದಿಂದಲೇ ಆ ಪರಮಾತ್ಮನು ಗಾತ್ರದಲ್ಲಿ ಅಥವಾ ತೂಕದಲ್ಲಿ ಅಥವಾ ಗುಣದಿಂದ ಇಷ್ಟೆಂದೂ ಇಂಥವನೆಂದೂ ನಿರ್ಣಯಿಸುವದಕ್ಕಸದಳವೇ ಸರಿ. ಆತನು ವಿಶ್ವವೆಲ್ಲವೂ ಆಗಿರುತ್ತಾನೆ, ವಿಶ್ವವನ್ನು ಮೀರಿಯೂ ಇರುತ್ತಾನೆ. ಆತನು ಸ್ವಯಂಪ್ರಕಾಶನಾದ್ದರಿಂದ ದೇವನು; ಮನುಷ್ಯರಿಗೆಲ್ಲ ಪುರುಷಾರ್ಥವನ್ನು ದೊರಕಿಸುವ ಆಸರೆಯಾಗಿರುವದರಿಂದ ನಾರಾಯಣನು; ಇಡಿಯ ವಿಶ್ವಕ್ಕೆ ಕೊನೆಯ ಗತಿಯಾಗಿರುವದರಿಂದ ಪರಾಯಣನು.

**ಯಂ ವಾಕೇಷ್ವನುವಾಕೇಷು ನಿಷತ್ಸೂಪನಿಷತ್ಸು ಚ ।**
**ಗೃಣನ್ತಿ ಸತ್ಯಕರ್ಮಾಣಂ ಸತ್ಯಂ ಸತ್ಯೇಷು ಸಾಮಸು ॥೨೫॥**

೨೫. ಮಂತ್ರಗಳಲ್ಲಿಯೂ ಬ್ರಾಹ್ಮಣವಾಕ್ಯಗಳಲ್ಲಿಯೂ ಉಪಾಸನಾವಾಕ್ಯಗಳಲ್ಲಿಯೂ ಜ್ಞಾನವಾಕ್ಯಗಳಲ್ಲಿಯೂ ಸತ್ಯವಾದ ನಾಮಗಳಲ್ಲಿಯೂ ಯಾವಾತನನ್ನೇ ಹೊಗಳಿದೆಯೋ ಸತ್ಯರೂಪನಾದ (ಆತನನ್ನು ಶರಣು ಹೊಕ್ಕಿರುವೆನು.)

ವೇದದಲ್ಲಿ ಕರ್ಮವನ್ನು ಹೇಳುವ ಮಂತ್ರಗಳು (ವಾಕ), ಅವುಗಳನ್ನು ವಿವರಿಸುವ ಬ್ರಾಹ್ಮಣವಾಕ್ಯಗಳು (ಅನುವಾಕ), ಕರ್ಮದ ಅಂಗವಾಗಿರುವ ಅಥವಾ ಪ್ರತೀಕದ ಅಥವಾ ಅಹಂಗ್ರಹದ ಉಪಾಸನೆಗಳು - ಇವನ್ನು ಹೇಳುವ ಉಪಾಸನಾವಾಕ್ಯಗಳು (ನಿಷತ್), ತತ್ತ್ವವನ್ನು ತಿಳಿಯಪಡಿಸುವ ಜ್ಞಾನವಾಕ್ಯಗಳು (ಉಪನಿಷತ್)- ಎಂದು ನಾಲ್ಕು ಬಗೆಯ ವಾಕ್ಯಗಳಿರುವವು. ಇವುಗಳಿಗೆಲ್ಲ ಈ ನಾರಾಯಣನೇ ಪರಮತಾತ್ಪರ್ಯನಾಗಿರುತ್ತಾನೆ. ಏಕೆಂದರೆ ಕರ್ಮವನ್ನು ಆತನಿಗಾಗಿಯೇ ಮಾಡಬೇಕು, ಉಪಾಸನೆಯನ್ನು ಮಾಡಿ ಆತನಿಂದಲೇ ಅಭ್ಯುದಯವನ್ನೂ ಕ್ರಮಮುಕ್ತಿಯನ್ನೂ ಪಡೆಯಬೇಕು ; ಶ್ರವಣಮನನನಿದಿಧ್ಯಾಸನಗಳಿಂದ ಆತನ ಸ್ವರೂಪವನ್ನೇ ಅರಿತುಕೊಂಡು ಸದ್ಯೋಮುಕ್ತಿಯನ್ನು ಹೊಂದಬೇಕು.

ಆ ನಾರಾಯಣನು ಅಬಾಧಿತಸತ್ಯಸ್ವರೂಪನಾಗಿರುತ್ತಾನೆ ; ಸಾಮಗಳು ಗಾನಮಾಡಿತ್ತಿರುವದು ಆ ಸತ್ಯರೂಪನಾದ ನಾರಾಯಣನನ್ನೇ.

**ಚತುರ್ಭಿಶ್ಚತುರಾತ್ಮಾನಂ ಸತ್ತ್ವಸ್ಥಂ ಸಾತ್ವತಾಂ ಪತಿಮ್ ।**
**ಯಂ ದಿವ್ಯೈರ್ದೇವಮರ್ಚನ್ತಿ ಗುಹ್ಯೈಃ ಪರಮನಾಮಭಿಃ ॥೨೬॥**

೨೬. ಸತ್ತ್ವದಲ್ಲಿದ್ದುಕೊಂಡು ನಾಲ್ಕು ರೂಪವಾಗಿರುವ ಯಾವ ಸಾತ್ವತಪತಿಯನ್ನು ದಿವ್ಯವಾದ ನಾಲ್ಕು ಗುಹ್ಯವಾದ ಪರಮನಾಮಗಳಿಂದ ಅರ್ಚಿಸುತ್ತಾರೋ (ಆತನನ್ನು ಶರಣುಹೊಕ್ಕಿರುತ್ತೇನೆ.)

ಆ ಪರಮಾತ್ಮನು ಭಕ್ತರ ಒಡೆಯನು ; ಅವರನ್ನು ಕಾಪಾಡುವದಕ್ಕಾಗಿ ಅವರ ಸಾತ್ತ್ವಿಕಬುದ್ಧಿಯಲ್ಲಿ ಪ್ರಕಟವಾಗುವನು. ಆತನು ಒಬ್ಬನೇ ಆಗಿರುವನಾದರೂ ವಾಸುದೇವ (ಪರಮಾತ್ಮ), ಸಂಕರ್ಷಣ (ಜೀವ), ಪ್ರದ್ಯುಮ್ನ (ಮನಸ್ಸು), ಅನಿರುದ್ಧ (ಅಹಂಕಾರ) ಎಂಬ ನಾಲ್ಕು ವ್ಯೂಹಗಳಿಂದ ತೋರಿಕೊಳ್ಳುತ್ತಾನೆ. ಹೀಗೆ ನಾಲ್ಕು ರೂಪದಿಂದ ಕಾಣಿಸಿಕೊಂಡರೂ ಆತನು ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸು - ಎಂಬ ಷಡ್ಗುಣಗಳಿಂದ ನಿತ್ಯಸಂಪನ್ನನಾಗಿ ನಿರಂಜನಜ್ಞಾನಸ್ವರೂಪನಾದ ವಾಸುದೇವನೇ ಆಗಿರುತ್ತಾನೆ. ಆತನನ್ನು ಎಡೆಬಿಡದೆ ಉಪಾಸನೆಮಾಡುವವರು ಈ ದಿವ್ಯವಾದ ರಹಸ್ಯನಾಮಗಳಿಂದ ಆತನನ್ನು ಅರ್ಚನೆಮಾಡಿ ಆತನ ಸಾಯುಜ್ಯವನ್ನೇ ಪಡೆಯುತ್ತಾರೆ.

**ಯಸ್ಮಿನ್ ನಿತ್ಯಂ ತಪಸ್ತಪ್ತಂ ಯದಙ್ಗೇಷ್ವನುತಿಷ್ಠತಿ ।**
**ಸರ್ವಾತ್ಮಾ ಸರ್ವವಿತ್ ಸರ್ವಃ ಸರ್ವಜ್ಞಃ[1] ಸರ್ವಭಾವನಃ ॥೨೭॥**

೨೭. ಯಾವನ ವಿಷಯದಲ್ಲಿ ನಿತ್ಯವೂ ಮಾಡಿದ ತಪಸ್ಸು ಆತನ ಚಿತ್ತವೃತ್ತಿಗಳಲ್ಲಿ ಬಂದು ನಿಲ್ಲುವದೋ ಯಾವನು ಸರ್ವಾತ್ಮನೋ, ಸರ್ವವಿದನೋ, ಸರ್ವನೋ, ಸರ್ವಜ್ಞನೋ, ಸರ್ವಭಾವನನೋ (ಆತನನ್ನು ಶರಣುಹೊಕ್ಕಿರುವೆನು.)

ಇಲ್ಲಿ ಹೇಳಿರುವ ತಪಸ್ಸಿನಲ್ಲಿ ಕಾಯಿಕ, ವಾಚಿಕ, ಮಾನಸಿಕ - ಎಂಬ ಮೂರನ್ನೂ ಸೇರಿಸಿಕೊಳ್ಳಬೇಕು. ಇದನ್ನು ಪಾಂಚರಾತ್ರದಲ್ಲಿ 'ಅಭಿಗಮನ' (ಮಂತ್ರಜಪಸ್ತುತಿನಮಸ್ಕಾರಾದಿಗಳನ್ನು ಆಚರಿಸುವದು)', 'ಉಪಾದಾನ' (ಪೂಜಾದ್ರವ್ಯಗಳನ್ನು ತರುವದು), 'ಇಜ್ಯಾ' (ಪೂಜೆ), 'ಸ್ವಾಧ್ಯಾಯ' (ಶಾಸ್ತ್ರಪುರಾಣಾಗಮಗಳನ್ನು ಶ್ರವಣಮಾಡುವದು, ಚಿಂತನಮಾಡುವದು), 'ಯೋಗ' (ಭಗವಂತನನ್ನು ಧ್ಯಾನಮಾಡುವದು)- ಎಂದು ಐದು ಬಗೆಯಾಗಿ ವಿಂಗಡಿಸಿರುತ್ತಾರೆ. ಭಕ್ತರಾದವರು ಎಡೆಬಿಡದೆ ಮಾಡುವ ಈ ಬಗೆಯ ತಪಸ್ಸಿನಿಂದ ಪರಮೇಶ್ವರನು ಹೇಗೆ ತುಷ್ಟನಾಗುವನೆಂದರೆ ಆತನು ಸರ್ವಸ್ವರೂಪನಾಗಿರುತ್ತಾನೆ, ಸರ್ವವೂ ಆತನೇ ಆಗಿರುತ್ತಾನೆ, ಸರ್ವವನ್ನೂ ವಿಶೇಷರೂಪದಿಂದ ತಿಳಿಯುವವನೂ ಸಾಮಾನ್ಯರೂಪದಿಂದ ತಿಳಿಯುವವನೂ ಆತನೇ ಆಗಿರುತ್ತಾನೆ, ಸರ್ವರನ್ನೂ ರಕ್ಷಿಸುವಾತನೂ ಆತನೇ ಆಗಿರುತ್ತಾನೆ, ಆದ್ದರಿಂದ ಯಾವಯಾವಾಗ ಭಕ್ತರು ಯಾವಯಾವ ತಪಸ್ಸನ್ನು ಆಚರಿಸುವರೋ ಆಗಾಗಲೇ ಅದು ಆ ಪರಮೇಶ್ವರನಿಗೆ ಮುಟ್ಟುತ್ತದೆ; ಆತನು ಅದಕ್ಕೆ ತಕ್ಕ ಫಲವನ್ನು ಕೂಡಲೆ ಏರ್ಪಡಿಸಿಬಿಡುತ್ತಾನೆ.

1. 'ಸರ್ವಗಃ' ಪಾ ।

ಯಂ ದೇವಂ ದೇವಕೀದೇವೀ ವಸುದೇವಾದಜೀಜನತ್ |
ಭೌಮಸ್ಯ ಬ್ರಹ್ಮಣೋ ಗುಪ್ತ್ಯೈ ದೀಪ್ತಮಗ್ನಿಮಿವಾರಣಿಃ ||೨೮||

೨೮. ಯಾವ ದೇವನನ್ನು ದೇವಕೀದೇವಿಯು ವಸುದೇವನಿಂದ ಅರಣಿಯು ಉರಿಯುವ ಬೆಂಕಿಯನ್ನು ಹಡೆಯುವಂತೆ ಭೂಮಿಯ ಬ್ರಹ್ಮವನ್ನು ಕಾಪಾಡುವದಕ್ಕೆಂದು ಹಡೆದಳೋ (ಆತನನ್ನು ಶರಣುಹೊಕ್ಕಿರುವೆನು.)

ಅರಣಿಯಲ್ಲಿ ಅಡಗಿರುವ ಬೆಂಕಿಯು ಅದನ್ನು ಕಡೆದಮೇಲೆ ಭುಗಿಲೆಂದು ಎದ್ದು ಕಾಣುವಂತೆ ಮೊದಲು ಅವ್ಯಕ್ತಸ್ವರೂಪನಾಗಿದ್ದ ಪರಮಾತ್ಮನೇ ಕಾಂತಿಯುತವಾದ ಶ್ರೀ ಕೃಷ್ಣನ ರೂಪದಿಂದ ಪ್ರಕಟವಾಗಿರುತ್ತಾನೆ. ಆತನ ಅವತಾರದಿಂದ ಭೂಮಿಯ ಬ್ರಹ್ಮವಾದ ವೇದವೂ ಯಜ್ಞವೂ ಅದರ ಮೂಲಕವಾಗಿ ಬ್ರಾಹ್ಮಣ್ಯವೂ ಕಾಪಾಡಲ್ಪಟ್ಟಿತು. ಬ್ರಾಹ್ಮಣ್ಯವನ್ನು ಕಾಪಾಡಿದರೆ ಇಡಿಯ ವೈದಿಕಧರ್ಮವನ್ನೇ ಕಾಪಾಡಿದಂತೆ; ಏಕೆಂದರೆ ಮಿಕ್ಕ ಧರ್ಮವೆಲ್ಲವೂ ಬ್ರಾಹ್ಮಣ್ಯಕ್ಕೆ ವಶವಾಗಿರುತ್ತದೆ. ಆದ್ದರಿಂದ ನಿರ್ಗುಣನಾದ ಆ ಪರವಾಸುದೇವನೇ ವಸುದೇವನ ಮಗನಾಗಿ ಸಗುಣವಾಸುದೇವನಾಗಿ ಪ್ರಕಟನಾಗಿರುತ್ತಾನೆಯೇ ಹೊರತು ಮಿಕ್ಕವರಂತೆ ಕರ್ಮವಶನಾಗಿ ಜನ್ಮವನ್ನು ತಳೆದಿಲ್ಲ. ಸಗುಣನಾದ ಶ್ರೀಕೃಷ್ಣನ ಆರಾಧನೆಯೂ ನಿರ್ಗುಣನಾದ ವಾಸುದೇವನ ಆರಾಧನೆಯೇ ಎಂದು ಭಾವ.

ಯಮನನ್ಯೋ ವ್ಯಪೇತಾಶೀರಾತ್ಮಾನಂ ವೀತಕಲ್ಮಷಮ್ |
ಇಷ್ಟ್ವಾನನ್ತ್ಯಾಯ ಗೋವಿನ್ದಂ ಪಶ್ಯತ್ಯಾತ್ಮಾನಮಾತ್ಮನಿ ||೨೯||

೨೯. ಅನನ್ಯಭಕ್ತಿಯಿಂದ ನಿಷ್ಕಾಮನಾಗಿ ಯಾವ ನಿಷ್ಕಲ್ಮಷನಾದ ಗೋವಿಂದಪರಮಾತ್ಮನನ್ನು ಪೂಜಿಸಿದರೆ ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳುವನೋ (ಆತನನ್ನು ಶರಣುಹೊಕ್ಕಿರುವೆನು.)

ವಾಸುದೇವನನ್ನು ಪೂಜಿಸಿ ಸತತವಾಗಿ ಆರಾಧನೆಮಾಡಿದ್ದಕ್ಕೆ ಶರೀರವು ಬಿದ್ದುಹೋದಮೇಲೆ ಆತನ ಸಾಯುಜ್ಯವನ್ನು ಪಡೆಯುವದೊಂದೇ ಮುಖ್ಯ ಗುರಿಯಲ್ಲ. ನಿಷ್ಕಾಮನಾಗಿ ಅನನ್ಯಭಕ್ತಿಯಿಂದ ಆತನನ್ನು ಭಜಿಸಿದರೆ ಇಲ್ಲಿಯೇ ಆತನ ಅನುಗ್ರಹದಿಂದ ಜ್ಞಾನವು ಲಭಿಸಿ ತನ್ನ ಆತ್ಮನಲ್ಲಿಯೇ ಆತನ ಪರಮಾರ್ಥಸ್ವರೂಪವನ್ನು ಕಂಡುಕೊಂಡು ಅನಂತವಾದ ಮುಕ್ತಿಯನ್ನು ಪಡೆದುಕೊಂಡುಬಿಡಬಹುದು. ಆ ವಾಸುದೇವನು ನಮ್ಮಗಳ ಆತ್ಮನೇ ಆಗಿರುವನೆಂಬ ಅರಿವಿನಿಂದ ಮಿಕ್ಕದ್ದೆಲ್ಲವನ್ನೂ ಬಿಟ್ಟು ಆತನಲ್ಲಿಯೇ ರೂಢಮೂಲವಾಗುವ ಪ್ರೇಮಕ್ಕೆ ಅನನ್ಯಭಕ್ತಿಯೆಂದು ಹೆಸರು.

ಅತಿವಾಯ್ವಿನ್ದ್ರಕರ್ಮಾಣಮತಿಸೂರ್ಯಾಗ್ನಿತೇಜಸಮ್ |
ಅತಿಬುದ್ಧೀನ್ದ್ರಿಯಾತ್ಮಾನಂ ತಂ ಪ್ರಪದ್ಯೇ ಪ್ರಜಾಪತಿಮ್ ||೩೦||

೩೦. ವಾಯು, ಇಂದ್ರ - ಇವರುಗಳನ್ನು ಮೀರಿಸುವ ಕರ್ಮವುಳ್ಳವನಾಗಿ ಸೂರ್ಯ, ಅಗ್ನಿ - ಇವರುಗಳನ್ನು ಮೀರಿದ ಆತ್ಮನಾಗಿರುವ ಆ ಪ್ರಜಾಪತಿಯನ್ನು ಶರಣುಹೊಕ್ಕಿರುವೆನು.

ವಾಯುವು ಜಗತ್ತಿನಲ್ಲಿರುವ ಎಂಥ ಭಾರವಾದ ವಸ್ತುವನ್ನೂ ಲೀಲಾಮಾತ್ರದಿಂದ ಹಾರಿಸಬಲ್ಲವನು, ಇಂದ್ರನು ಪರ್ವತದಂತೆ ಅಪ್ರಕಂಪ್ಯರಾದವರನ್ನು ಕೂಡ ಪುಡಿಮಾಡಬಲ್ಲ, ಬಲಶಾಲಿಯು - ಎಂದು ಪ್ರಸಿದ್ಧಿಯಿದೆ. ಆದರೆ ಇಂದ್ರವಾಯುಗಳಿಗೂ ಅಸದಳವಾದ ಸೃಷ್ಟಿಸ್ಥಿತಿಲಯಗಳನ್ನು ಲೀಲಾಮಾತ್ರದಿಂದ ಮಾಡುವಂಥ ಬಲವುಳ್ಳಾತನೇ ಭಗವಂತನು. ಹಗಲು ಸೂರ್ಯನೂ ರಾತ್ರಿಯಲ್ಲಿ ಅಗ್ನಿಯೂ ಮಿಕ್ಕವರೆಲ್ಲರ ತೇಜಸ್ಸನ್ನೂ ಮಂಕುಗೊಳಿಸುವ ತೇಜಸ್ಸಿನವರಾಗಿರುವರೆಂದು ಸುಪ್ರಸಿದ್ಧವಾಗಿದೆ. ಆದರೆ ಸೂರ್ಯ, ಚಂದ್ರ, ನಕ್ಷತ್ರ, ಮಿಂಚು, ಅಗ್ನಿ - ಎಲ್ಲವನ್ನೂ ಕೀಳೆನಿಸುವ ದಿವ್ಯತೇಜಸ್ಸಿನಿಂದೊಪ್ಪುತ್ತಿರುವವನೇ ಭಗವಂತನು! ಇಂದ್ರಿಯಗಳೂ ಅಂತಃಕರಣವೂ ನಮ್ಮೊಳಗೆ ಇದ್ದುಕೊಂಡು ಹೊರಗಿನ ವಿಷಯಗಳೆಲ್ಲವನ್ನೂ ಅರಿಯುವದಕ್ಕೆ ಸಹಾಯಕವಾಗಿರುವದರಿಂದ ನಮ್ಮ ಆತ್ಮರೆನಿಸಿಕೊಂಡಿರುತ್ತವೆಯಷ್ಟೆ. ಇವೆಲ್ಲವನ್ನೂ ತನ್ನ ಸ್ವಯಂಪ್ರಕಾಶವಾದ ಅರಿವಿನಿಂದಲೇ ಬೆಳಗುತ್ತಾ ಹೊರಒಳಗಿನದೆಲ್ಲಕ್ಕೂ ಒಳತಿರುಳೆನಿಸಿರುವ ಆತ್ಮನೇ ಭಗವಂತನು ! ಆದ್ದರಿಂದ ಮುಮುಕ್ಷುಗಳು ಇಂಥ ಜಗದೊಡೆಯನನ್ನೇ ಶರಣುಹೊಗಬೇಕು.

**ಪುರಾಣೇ ಪುರುಷಂ ಪ್ರೋಕ್ತಂ ಬ್ರಹ್ಮ ಪ್ರೋಕ್ತಂ ಯುಗಾದಿಷು |**
**ಕ್ಷಯೇ ಸಂಕರ್ಷಣಂ ಪ್ರೋಕ್ತಂ ತಮುಪಾಸ್ಯಮುಪಾಸ್ಮಹೇ ||೩೧||**

೩೧. ಪುರಾಣದಲ್ಲಿ ಪುರುಷನೆಂದೆನಿಸಿಕೊಳ್ಳುವ, ಯುಗಾದಿಗಳಲ್ಲಿ ಬ್ರಹ್ಮವೆಂದೆನಿಸಿಕೊಂಡಿರುವ, ಕ್ಷಯದಲ್ಲಿ ಸಂಕರ್ಷಣನೆನಿಸಿಕೊಳ್ಳುವ, ಆ ಉಪಾಸ್ಯನನ್ನು ಉಪಾಸನೆಮಾಡುತ್ತೇವೆ.

ಪುರಾಣವೆಂದರೆ ಹಿಂದಿನ ಕಲ್ಪಗಳು ; ಅವುಗಳನ್ನು ವ್ಯಾಪಿಸಿಕೊಂಡಿರುವದರಿಂದ ಈತನಿಗೆ ಪುರುಷನೆಂದು ಹೆಸರು. ಅಥವಾ `ಪೂರಣೇ' ಎಂದು ಪಾಠಾಂತರ. ಸ್ಥಿತಿಕಾಲದಲ್ಲಿ ಎಲ್ಲವನ್ನೂ ತುಂಬಿಕೊಂಡಿರುವದರಿಂದ ಪೂರ್ಣನಾಗಿರುತ್ತಾನೆ. ಎಂಬರ್ಥದಿಂದ ಈತನಿಗೆ ಪುರುಷನೆಂಬ ಹೆಸರು ಬಂದಿರುತ್ತದೆ. ಯುಗಗಳು ಪ್ರಾರಂಭವಾಗುವಾಗ ಎಂದರೆ ಸೃಷ್ಟಿಯು ಮೊದಲಾಗುವಾಗ ಸೃಷ್ಟಿಯನ್ನು ದೊಡ್ಡದೆನಿಸಿ ಮೇಲಕ್ಕೆಬ್ಬಿಸುವದರಿಂದ ಬ್ರಹ್ಮವೆಂದು ಈತನಿಗೆ ಹೆಸರು. ಇನ್ನು ಕ್ಷಯದಲ್ಲಿ ಎಂದರೆ ಪ್ರಲಯಕಾಲದಲ್ಲಿ ಎಲ್ಲವನ್ನೂ ಸ್ವಲ್ಪವೂ ಉಳಿಯದಂತೆ ತನ್ನಲ್ಲಿಗೇ ಎಳೆದುಕೊಂಡು ಸೇರಿಸಿಕೊಂಡಿರುವದರಿಂದ ಸಂಕರ್ಷಣನೆಂದು ಈತನಿಗೆ ಹೆಸರು. ಹೀಗೆ ಸೃಷ್ಟಿಸ್ಥಿತಿಲಯಗಳಿಗೆ ಆಧಾರನಾಗಿರುವ ಈ ಭಗವಂತನನ್ನೇ ಧ್ಯಾನಮಾಡಬೇಕು.

**ಯಮೇಕಂ ಬಹುಧಾऽऽತ್ಮಾನಂ ಪ್ರಾದುರ್ಭೂತಮಧೋಕ್ಷಜಮ್ |**
**ನಾನ್ಯಭಕ್ತಾಃ ಕ್ರಿಯಾವನ್ತೋ ಯಜನ್ತೇ ಸರ್ವಕಾಮದಮ್ ||೩೨||**

೩೨. ಯಾವ ಅಧೋಕ್ಷಜನು ತಾನೊಬ್ಬನೇ ಬಹುರೂಪನಾಗಿರುವನೋ, ಸರ್ವಕಾಮಗಳನ್ನೂ ಕೊಡುವ ಯಾವನನ್ನು ಕ್ರಿಯಾವಂತರಾದ ಅನನ್ಯಭಕ್ತರು ಪೂಜಿಸುವರೋ, (ಆತನನ್ನು ಶರಣುಹೊಕ್ಕಿರುವೆನು.)

ಆತನು ಒಬ್ಬನೇ ಆಗಿದ್ದರೂ ಸೂರ್ಯಚಂದ್ರಾದಿದೇವತೆಗಳ ರೂಪದಿಂದಲೂ ತಾನೇ ಬಹುಭೇದದಿಂದ ತೋರಿಕೊಳ್ಳುತ್ತಿರುವನೆಂದರಿತು ತಾವು ಮಾಡುವ ಯಜ್ಞಗಳನ್ನು ಆತನಿಗೇ ಅರ್ಪಣೆಮಾಡಿ ಭಕ್ತರಾದವರು ತಮ್ಮ ಇಷ್ಟಾರ್ಥವನ್ನೆಲ್ಲ ಪಡೆದುಕೊಳ್ಳುತ್ತಾರೆ. ಅಭ್ಯುದಯಕ್ಕೂ ಮೋಕ್ಷಕ್ಕೂ ಆ ವಾಸುದೇವನೊಬ್ಬನೇ ಗತಿಯು.

**ಯಮಾಹುಃ ಜಗತಃ ಕೋಶಂ ಯಸ್ಮಿನ್ ಸನ್ನಿಹಿತಾಃ ಪ್ರಜಾಃ ।**
**ಯಸ್ಮಿಲ್ಲೋಕಾಃ ಸ್ಫುರನ್ತೀಮೇ ಜಲೇ ಶಕುನಯೋ ಯಥಾ ॥೩೩॥**

೩೩. ಯಾವಾತನನ್ನು ಜಗತ್ತಿನ ಕೋಶವೆಂದು ಕರೆಯುತ್ತಾರೋ ಯಾರಲ್ಲಿಯೇ ಜೀವರುಗಳು ಆಶ್ರಯಿಸಿಕೊಂಡಿರುವರೋ, ಯಾವಾತನಲ್ಲಿ ಈ ಲೋಕಗಳು ನೀರಿನಲ್ಲಿ ಕಾಣುವ ಹಕ್ಕಿಗಳಂತೆ ತೋರುತ್ತಿರುವವೋ (ಆತನನ್ನು ಶರಣು ಹೊಕ್ಕಿರುವೆನು).

ಒರೆಯು ಹೇಗೆ ಕತ್ತಿಯನ್ನು ತನ್ನೊಳಗೆ ಹುದುಗಿಸಿ ಇಟ್ಟುಕೊಂಡಿರುವದೋ ಅದರಂತೆ ಇಡಿಯ ಜಗತ್ತನ್ನು ಈ ಭಗವಂತನು ತನ್ನಲ್ಲಿ ಹುದುಗಿಸಿಟ್ಟುಕೊಂಡಿರುತ್ತಾನೆ. ಜಗತ್ತಿನಲ್ಲಿ ವ್ಯವಹರಿಸುವ ಜೀವರುಗಳಿಗೆಲ್ಲ ಈತನೇ ಆಶ್ರಯನು. ಆದರೆ ಈ ಜಗತ್ತಾಗಲಿ ಜೀವರಾಗಲಿ ಸ್ವತಂತ್ರವಾಗಿ ಆತನಿಗಿಂತ ವ್ಯತಿರಿಕ್ತರಾಗಿರುವರೆಂದು ಮಾತ್ರ ತಿಳಿಯಬಾರದು. ನೀರಿನಲ್ಲಿ ತೋರುವ ಹಕ್ಕಿಗಳ ಪ್ರತಿಬಿಂಬಗಳಂತೆ ಅವುಗಳ ಸ್ವರೂಪವೆಲ್ಲವೂ ಬರಿಯ ತೋರಿಕೆಯದಾಗಿರುತ್ತದೆ; ಪರಮಾತ್ಮನೇ ಅವುಗಳ ತಿರುಳಾಗಿರುತ್ತಾನೆ.

**ಋತಮೇಕಾಕ್ಷರಂ ಬ್ರಹ್ಮ ಯತ್ತತ್ಸದಸತೋಃ ಪರಮ್ ।**
**ಅನಾದಿಮಧ್ಯಪರ್ಯನ್ತಂ ನ ದೇವಾ ನರ್ಷಯೋ ವಿದುಃ ॥೩೪॥**

**ಯಂ ಸುರಾಸುರಗನ್ಧರ್ವಾಃ ಸಿದ್ಧಾ ಋಷಿಮಹೋರಗಾಃ ।**
**ಪ್ರಯತಾ ನಿತ್ಯಮರ್ಚನ್ತಿ ಪರಮಂ ದುಃಖಭೇಷಜಮ್ ॥೩೫॥**
**ಅನಾದಿನಿಧನಂ ದೇವಮಾತ್ಮಯೋನಿಂ ಸನಾತನಮ್ ।**
**ಅಪ್ರೇಕ್ಷ್ಯ[1]ಮನಭಿಜ್ಞೇಯಂ ಹರಿಂ ನಾರಾಯಣಂ ಪ್ರಭುಮ್ ॥೩೬॥**

೩೪-೩೬. ಧರ್ಮಸ್ವರೂಪವಾಗಿ ಏಕಾಕ್ಷರವಾದ - ಓಂಕಾರಗಮ್ಯವಾದ ಬ್ರಹ್ಮವಾಗಿ ಸತ್ತು, ಅಸತ್ತು - ಇವೆರಡನ್ನೂ ಮೀರಿರುವ ಮೊದಲು, ನಡುವೆ, ಕೊನೆ - ಯಾವದೂ ಇಲ್ಲದೆ, ದೇವತೆಗಳಿಂದಾಗಲಿ ಋಷಿಗಳಿಂದಾಗಲಿ ಅರಿಯಲಾಗದಿರುವವನು ಯಾರೋ (ಆತನನ್ನು) ಶರಣುಹೊಕ್ಕಿದ್ದೇನೆ. ಸುರರು, ಅಸುರರು, ಗಂಧರ್ವರು, ಸಿದ್ಧರು, ಋಷಿಗಳು ಮಹೋರಗರು

1. `ಅವಿತರ್ಕ್ಯಮ್' ಪಾ ॥

- ಇವರೆಲ್ಲರೂ ಶುಚಿರ್ಭೂತರಾಗಿ ದುಃಖಕ್ಕೆ ಪರಮಚಿಕಿತ್ಸಾರೂಪನಾಗಿರುವನೆಂದು ನಿತ್ಯವೂ ಯಾವಾತನನ್ನು ಅರ್ಚಿಸುತ್ತಿರುವರೋ ಆದ್ಯಂತರಹಿತನಾದ, ತನ್ನಿಂದ ತಾನೇ ಜನಿಸಿ ಸನಾತನನಾಗಿ ಯಾರಿಂದಲೂ ನೋಡುವದಕ್ಕಾಗದೆ, ತಿಳಿಯುವದಕ್ಕೂ ಆಗದೆ ಇರುವ ಆ ಹರಿಯನ್ನು, ನಾರಾಯಣನನ್ನು, ಪ್ರಭುವನ್ನು, ಶರಣುಹೊಕ್ಕಿರುವೆನು.

**ಯಂ ವೈ ವಿಶ್ವಸ್ಯ ಕರ್ತಾರಂ ಜಗತಸ್ತಸ್ಥುಷಾಂ ಪತಿಮ್ ।**
**ವದನ್ತಿ ಜಗತೋಽಧ್ಯಕ್ಷಮಕ್ಷರಂ ಪರಮಂ ಪದಮ್ ॥೩೭॥**

೩೭. ಯಾವಾತನನ್ನು ವಿಶ್ವದ ಕರ್ತನೆಂದೂ ಸ್ಥಾವರಜಂಗಮಗಳೊಡನೆಯನೆಂದೂ ಜಗತ್ತಿಗೆ ಅಧ್ಯಕ್ಷನೆಂದೂ ನಾಶವಾಗದ ಪರಮಪದವೆಂದೂ ಹೇಳುವರೋ ಆತನನ್ನು ಮೊರೆಹೊಕ್ಕಿರುವನೆನು.

ಪರಮಾತ್ಮನು ತನ್ನ ರೂಪದಿಂದ ಅಕ್ಷರನು ; ವೇದಗಳ ಸಾರವಾದ ಏಕಾಕ್ಷರಬ್ರಹ್ಮವೆಂದೆನಿಸಿರುವ ಓಂಕಾರದ ಸ್ವರೂಪವನ್ನು ತಿಳಿದುಕೊಳ್ಳುವದರಿಂದ ಅಥವಾ ಉಪಾಸನೆಮಾಡುವದರಿಂದ ಸಾಕ್ಷಾತ್ಕಾರವಾಗತಕ್ಕವನು. ತಾನು ಸನಾತನನೂ ಎಲ್ಲಕ್ಕೂ ಕಾರಣನೂ ಆಗಿರುವಾತನು, ಎಲ್ಲಕ್ಕೂ ಸಾಕ್ಷಿಯು.

**ಹಿರಣ್ಯವರ್ಣೋ ಯೋ ಗರ್ಭೋಽ[1]ದಿತೇರ್ದೈತ್ಯನಿಷೂದನಃ ।**
**ಏಕೋ ದ್ವಾದಶಧಾ ಜಜ್ಞೇ ತಸ್ಮೈ ಸೂರ್ಯಾತ್ಮನೇ ನಮಃ ॥೩೮॥**

೩೮. ಹಿರಣ್ಯವರ್ಣವಾದ ಯಾವ ಅದಿತಿಯ ಗರ್ಭವು ದೈತ್ಯರನ್ನು ಕೊಲ್ಲುವದಕ್ಕೆಂದು ಒಂದೇ ಹನ್ನೆರಡುಬಗೆಯಾಯಿತೋ ಆ ಸೂರ್ಯಾತ್ಮನಿಗೆ ನಮಸ್ಕಾರ.

ಇಲ್ಲಿಂದ ಮುಂದಕ್ಕೆ `ಒಬ್ಬನೇ ಅನೇಕರೂಪನಾಗಿರುತ್ತಾನೆಂದು' ೩೨ನೆಯ ಶ್ಲೋಕದಲ್ಲಿ ಹೇಳಿದ್ದರ ವಿವರವನ್ನು ಕೊಡಲಾಗುತ್ತದೆ.

**ಶುಕ್ಲೇ ದೇವಾನ್ ಪಿತ್ೄನ್ ಕೃಷ್ಣೇ ತರ್ಪಯತ್ಯಮೃತೇನ ಯಃ ।**
**ಯಶ್ಚ ರಾಜಾ ದ್ವಿಜಾತೀನಾಂ ತಸ್ಮೈ ಸೋಮಾತ್ಮನೇ ನಮಃ ॥೩೯॥**

೩೯. ಶುಕ್ಲಪಕ್ಷದಲ್ಲಿ ದೇವತೆಗಳಿಗೂ ಕೃಷ್ಣಪಕ್ಷದಲ್ಲಿ ಪಿತೃಗಳಿಗೂ ಯಾವನು ಅಮೃತದಿಂದ ತೃಪ್ತಿಯನ್ನುಂಟುಮಾಡುತ್ತಿರುವನೋ, ಯಾವನು ನಕ್ಷತ್ರಗಳಿಗೆ ರಾಜನಾಗಿರುವನೋ ಅಂಥ ಚಂದ್ರ ಸ್ವರೂಪನಿಗೆ ನಮಸ್ಕಾರ !

**ಮಹತಸ್ತಮಸಃ ಪಾರೇ ಪುರುಷಂ ಹ್ಯತಿತೇಜಸಮ್ ।**
**ಯಂ ಜ್ಞಾತ್ವಾ ಮೃತ್ಯುಮತ್ಯೇತಿ ತಸ್ಮೈ ಜ್ಞೇಯಾತ್ಮನೇ ನಮಃ ॥೪೦॥**

1. `ಹಿರಣ್ಯವರ್ಣಂ ಯಂ ಗರ್ಭಮದಿತೇರ್ದೈತ್ಯನಾಶನಮ್' ಪಾ॥

೪೦. ಮಹಾ ಅಜ್ಞಾನದ ದಡವಾಗಿರುವ ಅತಿಪ್ರಕಾಶನಾದ ಪುರುಷನೆಂದೆನಿಸಿಕೊಂಡಿರುವ ಯಾವಾತನನ್ನು ಅರಿತುಕೊಂಡರೆ ಮನುಷ್ಯನು ಮೃತ್ಯುವನ್ನು ದಾಟುತ್ತಾನೋ ಆ ಜ್ಞೇಯಾತ್ಮನಿಗೆ ನಮಸ್ಕಾರ.

ಇಲ್ಲಿ ಹೇಳಿರುವದು ಜ್ಞಾನದಿಂದ ಅರಿತುಕೊಳ್ಳಬೇಕಾಗಿರುವ ಪರಮಾರ್ಥತತ್ತ್ವವು. ಇದು ಉಪಾಸ್ಯರೂಪಕ್ಕಿಂತ ವಿಲಕ್ಷಣವಾದದ್ದು.

**ಯಂ ಬೃಹನ್ತಂ ಬೃಹತ್ಯುಕ್ಥೇ ಯಮಗ್ನೌ ಯಂ ಮಹಾಧ್ವರೇ ।**
**ಯಂ ವಿಪ್ರಸಙ್ಘಾ ಗಾಯನ್ತಿ ತಸ್ಮೈ ವೇದಾತ್ಮನೇ ನಮಃ ॥೪೧॥**

೪೧. ಬ್ರಹ್ಮಸ್ವರೂಪನಾದ ಯಾವಾತನನ್ನು ದೊಡ್ಡದಾದ ಉಕ್ಥದಲ್ಲಿಯೂ ಮಹಾಧ್ವರದ ಅಗ್ನಿಯಲ್ಲಿಯೂ (ಉಪಾಸನೆಮಾಡುವರೋ) ಯಾವಾತನನ್ನು ಬ್ರಾಹ್ಮಣರ ಗುಂಪುಗಳು ಹಾಡುತ್ತಿರುವವೋ ಅಂಥ ವೇದಾತ್ಮನಿಗೆ ನಮಸ್ಕಾರ!

ಉಕ್ಥವೆಂಬುದು ಮಹಾವ್ರತವೆಂಬ ಕರ್ಮದಲ್ಲಿ ಬರುವ ಒಂದು ದೊಡ್ಡ `ಶಸ್ತ್ರ' (ಸ್ತೋತ್ರ) ವಿಶೇಷವು; ಸಾಲಗ್ರಾಮದಲ್ಲಿ ವಿಷ್ಣುವನ್ನು ಚಿಂತಿಸುವಂತೆ ಆ ಉಕ್ಥವೆಂಬ ಪ್ರತೀಕದಲ್ಲಿ ಅಪರಬ್ರಹ್ಮವನ್ನು ಚಿಂತಿಸಬೇಕೆಂದು ಋಗ್ವೇದಿಗಳ ಐತರೇಯಾರಣ್ಯಕದಲ್ಲಿ ಹೇಳಿರುತ್ತದೆ. ಇದೇ ಬ್ರಹ್ಮವನ್ನು ಯಜ್ಞಕ್ಕಾಗಿ ಸಿದ್ಧಮಾಡಿದ ಅಗ್ನಿಯಲ್ಲಿ ಯಜುರ್ವೇದಿಗಳು ಚಿಂತಿಸುತ್ತಾರೆ. ಇದೇ ಬ್ರಹ್ಮವನ್ನು ಸಾಮದಲ್ಲಿ ಸಾಮವೇದಿಗಳು ಧ್ಯಾನಮಾಡುತ್ತಾರೆ. ಋಗ್ವೇದಯಜುರ್ವೇದ ಸಾಮವೇದಗಳೂ ಈ ಪರಮಾತ್ಮನ ಸ್ವರೂಪವೇ ಆಗಿರುವದರಿಂದ ಈ ಉಪಾಸನೆಗಳಿಂದ ಅವರುಗಳಿಗೆ ಆಯಾ ಫಲವು ದೊರಕುತ್ತದೆ.

**ಋಗ್ಯಜುಃಸಾಮಧಾಮಾನಂ ದಶಾರ್ಧಹವಿರಾತ್ಮಕಮ್ ।**
**ಯಂ ಸಪ್ತತನ್ತುಂ ತನ್ವನ್ತಿ ತಸ್ಮೈ ಯಜ್ಞಾತ್ಮನೇ ನಮಃ ॥೪೨॥**

೪೨. ಋಕ್ಕು, ಯಜುಸ್ಸು, ಸಾಮ - ಎಂಬ ಸ್ಥಾನಗಳುಳ್ಳದ್ದಾಗಿ ಐದು ಹವಿಸ್ಸುಗಳಿಂದ ಕೂಡಿದ ಯಾವ ಸಪ್ತತಂತುವನ್ನೆಸಗುವರೋ ಆ ಯಜ್ಞಸ್ವರೂಪನಿಗೆ ನಮಸ್ಕಾರ !

ಋಕ್ಕೇ ಮುಂತಾದ ಮಂತ್ರಗಳೇ ಯಜ್ಞಕ್ಕೆ ಆಶ್ರಯ; ಯಜ್ಞಕ್ಕೆ ಧಾನ, ಕರಂಭ, ಪರಿವಾಪ, ಪುರೋಡಾಶ, ಪಯಸ್ಸು - ಎಂಬ ಐದು ಬಗೆಯ ಹವಿಸ್ಸುಗಳು ಬೇಕು; ಗಾಯತ್ರಿಯೇ ಮುಂತಾದ ಏಳು ಛಂದಸ್ಸುಗಳ ಯೋಜನೆ ಇರಬೇಕು. ಇಂಥ ಯಜ್ಞವೂ ಪರಮಾತ್ಮನ ರೂಪವೇ ಆಗಿರುತ್ತದೆ.

**ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಞ್ಚಭಿರೇವ ಚ ।**
**ಹೂಯತೇ ಚ ಪುನರ್ದ್ವಾಭ್ಯಾಂ ತಸ್ಮೈ ಹೋಮಾತ್ಮನೇ ನಮಃ ॥೪೩॥**

೪೩. ನಾಲ್ಕು ನಾಲ್ಕು, ಎರಡು, ಐದು ಮತ್ತು ಎರಡು - ಇವುಗಳಿಂದ ಹೋಮಮಾಡಲ್ಪಡುವ ಹೋಮಾತ್ಮನಿಗೆ ನಮಸ್ಕಾರ!

ನಾಲ್ಕು ಎಂದರೆ `ಆಶ್ರಾವಯ' ಎಂಬಕ್ಷರಗಳು; ನಾಲ್ಕು ಎಂದರೆ `ಅಸ್ತು ಶ್ರೌಷಟ್' ಎಂಬಕ್ಷರಗಳು; ಎರಡು ಎಂದರೆ `ಯಜ' ಎಂಬಕ್ಷರಗಳು; ಐದು ಎಂದರೆ `ಯೇ ಯಜಾಮಹೇ' ಎಂಬ ಐದಕ್ಷರಗಳು; ಮತ್ತು ಎರಡು ಎಂದರೆ `ವಷಟ್' ಎಂಬ ಅಕ್ಷರಗಳು. ಈ ಹದಿನೇಳು ಅಕ್ಷರಗಳೂ ಹೋಮಕ್ಕೆ ವಿನಿಯೋಗವಾಗಿರುತ್ತವೆ. ಹೋಮವೂ ಪರಮಾತ್ಮನ ರೂಪವಿಶೇಷವೇ.

**ಯಃ ಸುಪರ್ಣೋ ಯಜುರ್ನಾಮ ಛನ್ದೋಗಾತ್ರಸ್ತ್ರಿವೃಚ್ಛಿರಾಃ ।**
**ರಥನ್ತರಂ ಬೃಹತ್ಸಾಮ ತಸ್ಮೈ ಸ್ತೋತ್ರಾತ್ಮನೇ ನಮಃ ॥೪೪॥**

೪೪. ಯಾವ ಸುಪರ್ಣನು ಗಾಯತ್ರಿಯೇ ಮುಂತಾದ ಛಂದಸ್ಸುಗಳೆಂಬ ಅವಯವಗಳಿಂದ ಕೂಡಿ, ಯಜ್ಞವೆಂಬ ಶಿರಸ್ಸುಳ್ಳವನಾಗಿ ರಥಂತರ ಅಥವಾ ಬೃಹತ್ತು- ಎಂಬ ಸಾಮದಿಂದ ಪ್ರೀತಿವಾಕ್ಯವನ್ನಾಡುತ್ತಿರುವನೋ ಆ ಸ್ತೋತ್ರರೂಪನಿಗೆ ನಮಸ್ಕಾರ!

**ಯಃ ಸಹಸ್ರಸಮೇ ಸತ್ರೇ ಜಜ್ಞೇ ವಿಶ್ವಸೃಜಾಮೃಷಿಃ ।**
**ಹಿರಣ್ಯಪಕ್ಷಃ ಶಕುನಿಸ್ತಸ್ಮೈ ತಾರ್ಕ್ಷ್ಯಾತ್ಮನೇ[1] ನಮಃ ॥೪೫॥**

೪೫. ಸಾವಿರ ವರ್ಷಗಳು ನಡೆಯುವ ಸತ್ರದಲ್ಲಿ ವಿಶ್ವಸೃಷ್ಟಿಮಾಡುವವರ ಋಷಿಯೂ ಹಿರಣ್ಯಪಕ್ಷಗಳುಳ್ಳವನೂ ಆದ ಯಾವ ಪಕ್ಷಿಯು ಉತ್ಪನ್ನವಾಯಿತೋ ಆ ಗರುಡನ ಸ್ವರೂಪನಿಗೆ ನಮಸ್ಕಾರ !

ಮೇಲಿನ ಎರಡು ವಾಕ್ಯಗಳಲ್ಲಿಯೂ ಶಸ್ತ್ರರೂಪನಾದ ಸುಪರ್ಣನನ್ನು ವರ್ಣಿಸಿರುತ್ತದೆ. ಈ ಬಗೆಯ ವರ್ಣನೆಯೊಂದನ್ನು ಐತರೇಯದ ಒಂದನೆಯ ಅಧ್ಯಾಯದ ಒಂದನೆಯ ಆರಣ್ಯಕದಲ್ಲಿ ಕಾಣಬಹುದು.

**ಪದಾಙ್ಗಂ ಸನ್ಧಿಪರ್ವಾಣಂ ಸ್ವರವ್ಯಞ್ಜನಭೂಷಣಮ್ ।**
**ಯಮಾಹುರಕ್ಷರಂ ದಿವ್ಯಂ ತಸ್ಮೈ ವಾಗಾತ್ಮನೇ ನಮಃ ॥೪೬॥**

೪೬. ಪದಗಳೇ ಅವಯವಗಳು, ಸಂಧಿಗಳೇ ಗೆಣ್ಣುಗಳು, ಸ್ವರವ್ಯಂಜನಗಳೇ ಒಡವೆಗಳು - ಹೀಗಿರುವದೆಂದು ಯಾವ ದಿವ್ಯ ಅಕ್ಷರನನ್ನು ಹೇಳುವರೋ ಅಂಥ ವಾಗ್ರೂಪನಿಗೆ ನಮಸ್ಕಾರ!

ಮಾತೆಂಬುದು ಪದ, ಸಂಧಿಗಳು - ಇವುಗಳಿಂದಾಗಿರುತ್ತವೆ. ಸ್ವರವ್ಯಂಜನಗಳ ಸಮೂಹದಿಂದ ಒಪ್ಪುತ್ತಿರುತ್ತದೆ. ಈ ವಾಕ್ಕಿನ ರೂಪದಿಂದ ತೋರಿಕೊಳ್ಳುವವನೂ ಆ ನಾಶರಹಿತನಾದ ಪರಮಾತ್ಮನೇ.

**ಯಜ್ಞಾಙ್ಗೋ ಯೋ ವರಾಹೋ ವೈ ಭೂತ್ವಾ ಗಾಮುಜ್ಜಹಾರ ಹ ।**
**ಲೋಕತ್ರಯಹಿತಾರ್ಥಾಯ ತಸ್ಮೈ ವೀರ್ಯಾತ್ಮನೇ ನಮಃ ॥೪೭॥**

೪೭. ಯಾವನು ಯಜ್ಞಾಂಗವಾದ ವರಾಹನಾಗಿ ಲೋಕತ್ರಯದ ಹಿತಕ್ಕಾಗಿ ಭೂಮಿಯನ್ನು ಉದ್ಧಾರಮಾಡಿದನೋ ಅಂಥ ವೀರ್ಯಸ್ವರೂಪನಿಗೆ ನಮಸ್ಕಾರ !

1. `ಹಂಸಾತ್ಮನೇ' ಪಾ ॥

ಧರ್ಮದಿಂದ ಜಗತ್ತೆಲ್ಲವೂ ವ್ಯವಸ್ಥಿತವಾಗಿರುತ್ತದೆ; ಧರ್ಮವಿಲ್ಲದಿದ್ದರೆ ಅದು ಮುಳುಗಿಹೋಗುತ್ತಿತ್ತು. ಧರ್ಮವನ್ನು ಉದ್ಧಾರಮಾಡುವದಕ್ಕಾಗಿ ವರಾಹಾವತಾರವನ್ನು ಮಾಡಿದವನೂ ಪರಮಾತ್ಮನೇ.

**ಯಃ ಶೇತೇ ಯೋಗಮಾಸ್ಥಾಯ ಪರ್ಯಙ್ಕೇ ನಾಗಭೂಷಿತೇ ।**
**ಫಣಾಸಹಸ್ರರಚಿತೇ ತಸ್ಮೈ ನಿದ್ರಾತ್ಮನೇ ನಮಃ ॥೪೮॥**

೪೮. ಯಾವಾತನು ಯೋಗವನ್ನು ಅವಲಂಬಿಸಿ ಸಾವಿರ ಹೆಡೆಗಳ ಶೇಷನಿಂದ ಅಲಂಕೃತವಾದ ಮಂಚದಲ್ಲಿ ಪವಡಿಸಿರುವನೋ ಅಂಥ ನಿದ್ರಾರೂಪನಿಗೆ ನಮಸ್ಕಾರ!

ಪರಮಾತ್ಮನು ಜಗತ್ತನ್ನೆಲ್ಲ ಪ್ರಲಯದಲ್ಲಿ ತನ್ನೊಳಗೆ ಅಡಗಿಸಿಕೊಂಡು ಅವ್ಯಕ್ತರೂಪದಿಂದಿರುವನಷ್ಟೆ. ಆಗಿನ ಸ್ಥಿತಿಯನ್ನು ಶೇಷಶಾಯಿಯೆಂದು ವರ್ಣಿಸುವದುಂಟು. ಸಾಮಾನ್ಯರ ದೃಷ್ಟಿಯಿಂದ ಆ ಸ್ಥಿತಿಯು ನಿದ್ರೆಯಂತೆ ತೋರಿದರೂ ನಿಜವಾಗಿ ಅದು ಮುಂದಿನ ಸೃಷ್ಟಿಯ ಕ್ರಮಕ್ಕೆಲ್ಲ ಬೀಜವಾಗಿರುವ ಮಹಾಸಮಾಧಿಯಾಗಿರುತ್ತದೆ. ನಾಗರಹಾವು ನಿದ್ರಿಸುತ್ತಿದ್ದರೂ ಚಟ್ಟನೆ ಎಚ್ಚತ್ತು ತನ್ನ ಹೆಡೆಯನ್ನು ಯಾವಾಗಲೆಂದರೆ ಆಗ ಬಿಚ್ಚಿಕೊಳ್ಳುವದಕ್ಕೆ ಸಿದ್ಧವಾಗಿರುವಂತೆ ಆ ಪರಮಾತ್ಮಸ್ವರೂಪವು ಪ್ರಪಂಚಸ್ವರೂಪಕ್ಕೆ ತಿರುಗುವದಕ್ಕೆ ಸಜ್ಜಾಗಿಯೇ ಇರುತ್ತದೆ.

**ಯಸ್ತನೋತಿ ಸತಾಂ ಸೇತುಮೃತೇನಾಮೃತಯೋನಿನಾ ।**
**ಧರ್ಮಾರ್ಥವ್ಯವಹಾರಾಙ್ಗೈಸ್ತಸ್ಮೈ ಸತ್ಯಾತ್ಮನೇ ನಮಃ ॥೪೯॥**

೪೯. ಯಾವಾತನು ಧರ್ಮಕ್ಕಾಗಿ ವ್ಯವಹಾರವನ್ನು ಮಾಡುವ ಇಂದ್ರಿಯಗಳಿಂದ ಸತ್ಪುರುಷರಿಗೆ ಅಮೃತಕ್ಕೆ ಕಾರಣವಾಗಿರುವ ಋತದಿಂದ ಸೇತುವನ್ನು ಕಟ್ಟುವನೋ ಆ ಸತ್ಯರೂಪನಿಗೆ ನಮಸ್ಕಾರ।

ಇಂದ್ರಿಯಜಯವನ್ನು ಅನುಗ್ರಹಿಸಿ ಸತ್ಯವನ್ನೇ ನುಡಿಯುವಂತೆಯೂ ಸತ್ಯದಿಂದ ಮೋಕ್ಷವನ್ನು ಪಡೆದುಕೊಳ್ಳುವಂತೆಯೂ ಅನುಗ್ರಹಿಸುವ ಪರಮಾರ್ಥಸತ್ಯರೂಪನೂ ಆತ್ಮನೇ.

**ಯಂ ಪೃಥಗ್ಧರ್ಮಚರಣಾಃ ಪೃಥಗ್ಧರ್ಮಫಲೈಷಿಣಃ ।**
**ಪೃಥಗ್ಧರ್ಮೈಃ ಸಮರ್ಚನ್ತಿ ತಸ್ಮೈ ಧರ್ಮಾತ್ಮನೇ ನಮಃ ॥೫೦॥**

೫೦. ಯಾವಾತನನ್ನು ಬೇರೆಬೇರೆಯ ಧರ್ಮಗಳನ್ನು ಆಚರಿಸಿ ಆಯಾ ಕರ್ಮಕ್ಕೆ ಫಲವನ್ನು ಕೋರುವವರು ಆಯಾ ಧರ್ಮಗಳಿಂದ ಪೂಜಿಸುತ್ತಿರುವರೋ ಆ ಧರ್ಮರೂಪನಿಗೆ ನಮಸ್ಕಾರ!

ಬೇರೆಬೇರೆಯ ವರ್ಣದವರಿಗೂ ಬೇರೆಬೇರೆಯ ಆಶ್ರಮದವರಿಗೂ ವರ್ಣಾಶ್ರಮರಹಿತರಿಗೂ ಬೇರೆ ಬೇರೆಯ ಧರ್ಮವೆಂಬ ಉಪಾಯವನ್ನು ಶಾಸ್ತ್ರದಲ್ಲಿ ತಿಳಿಸಿಕೊಟ್ಟಿರುತ್ತದೆ. ತಮ್ಮ ತಮ್ಮ ಧರ್ಮವನ್ನು ಆಚರಿಸುವವರಿಗೆ ಆಯಾ ಫಲವು

ಉಂಟಾಗುತ್ತದೆ. ಯಾವ ಫಲವನ್ನೂ ಕೋರದೆ ಕರ್ಮವನ್ನು ಭಗವಂತನಿಗೇ ಅರ್ಪಿಸುವ ಮುಮುಕ್ಷುಗಳಿಗೆ ಚಿತ್ತಶುದ್ಧಿರೂಪವಾದ ಫಲವೂ ಉಂಟಾಗುತ್ತದೆ. ಹೀಗೆ ಫಲವನ್ನು ಕೊಡುವ ಧರ್ಮದ ರೂಪದಿಂದ ಕಾಣಿಸಿಕೊಳ್ಳುತ್ತಿರುವವನೂ ಭಗವಂತನೇ.

ಯತಃ ಸರ್ವೇ ಪ್ರಸೂಯನ್ತೇ ಹ್ಯನಙ್ಗಾತ್ಮಾಙ್ಗದೇಹಿನಃ ।
ಉನ್ಮಾದಃ ಸರ್ವಭೂತಾನಾಂ ತಸ್ಮೈ ಕಾಮಾತ್ಮನೇ ನಮಃ ॥೫೧॥

೫೧. ಯಾವನಿಂದಲೇ ಕಾಮಾತ್ಮವಾದ ಅಂಗಗಳುಳ್ಳ ದೇಹಿಗಳೆಲ್ಲರೂ ಹುಟ್ಟುತ್ತಾರೋ ಸರ್ವಪ್ರಾಣಿಗಳಿಗೂ ಉನ್ಮಾದವನ್ನುಂಟುಮಾಡುವ ಆ ಕಾಮರೂಪನಿಗೆ ನಮಸ್ಕಾರ !

ಕಾಮದಿಂದ ಉನ್ಮತ್ತರಾಗಿ ಮಾಡಬಾರದ ಕೆಲಸವನ್ನು ಮಾಡುವವರೂ ಧರ್ಮಕ್ಕೆ ವಿರುದ್ಧವಲ್ಲದ ಕಾಮದಿಂದ ಧರ್ಮವನ್ನಾಚರಿಸಿ ಫಲವನ್ನು ಪಡೆಯುವವರಂತೆ ಆತನಿಂದಲೇ ಜನಿಸಿರುತ್ತಾರೆ. ಧರ್ಮವನ್ನು ಮಾಡಿದವರಿಗೆ ಮನಸ್ಸಿಗೆ ಹರ್ಷವನ್ನೂ ಸಮಾಧಾನವನ್ನೂ ಕೊಡುವ ಫಲವನ್ನು ಕೊಡುವಂತೆ ಕಾಮದರ್ಪಿತರಾಗಿ ಅಧರ್ಮವನ್ನು ಮಾಡುವವರಿಗೆ ದುಃಖವುಂಟಾಗುವಂತೆ ಮಾಡುವಾತನೂ ಆ ಪರಮಾತ್ಮನೇ.

ಯಂ ಚ ವ್ಯಕ್ತಸ್ಥಮವ್ಯಕ್ತಂ ವಿಚಿನ್ವನ್ತಿ ಮಹರ್ಷಯಃ ।
ಕ್ಷೇತ್ರೇ ಕ್ಷೇತ್ರಜ್ಞಮಾಸೀನಂ ತಸ್ಮೈ ಕ್ಷೇತ್ರಾತ್ಮನೇ ನಮಃ ॥೫೨॥

೫೨. ವ್ಯಕ್ತದಲ್ಲಿ ಅವ್ಯಕ್ತನಾಗಿರುವ, ಕ್ಷೇತ್ರದಲ್ಲಿ ಕ್ಷೇತ್ರಜ್ಞನಾಗಿರುವ ಯಾವನನ್ನು ಮಹರ್ಷಿಗಳು ಹುಡುಕುತ್ತಿರುವರೋ ಆ ಕ್ಷೇತ್ರರೂಪನಿಗೆ ನಮಸ್ಕಾರ!

ಕ್ಷೇತ್ರವೆಂದರೆ ಮಹಾಭೂತಗಳು, ಅಹಂಕಾರ, ಬುದ್ಧಿ, ಅವ್ಯಕ್ತ, ಇಂದ್ರಿಯಗಳು, ವಿಷಯ, ಇಚ್ಛಾದ್ವೇಷ, ಸುಖದುಃಖಾದಿಗಳು - ಇವೆಲ್ಲವನ್ನೂ ಅರಿಯಬೇಕು. ಇವೆಲ್ಲವೂ ವ್ಯಕ್ತರೂಪದಲ್ಲಿ ಕಾಣಿಸಲಿ, ಅವ್ಯಕ್ತರೂಪದಲ್ಲಿ ಕಾಣಿಸಲಿ, ಪರಮಾತ್ಮನ ದೃಷ್ಟಿಯಿಂದ ವ್ಯಕ್ತವೇ, ಎಂದರೆ ತಿಳಿಯುವದಕ್ಕೆ ಬರತಕ್ಕದ್ದೇ. ಆದರೆ ಇವೆಲ್ಲವನ್ನೂ ವ್ಯಾಪಿಸಿಕೊಂಡಿರುವವನಾಗಿ ಇವೆಲ್ಲಕ್ಕೂ ಇರವನ್ನೂ ತೋರಿಕೆಯನ್ನೂ ಕೊಟ್ಟಿರುವ ಪರಮಾತ್ಮನು ಇವುಗಳ ನಡುವೆಯೇ ಇರುತ್ತಿದ್ದರೂ ಸಾಮಾನ್ಯರಿಗೆ ಗೋಚರನಾಗದೆ ಇರುವನು. ಈತನ ಸಾಕ್ಷಾತ್ಕಾರಕ್ಕೆಂದೇ ಮಹರ್ಷಿಗಳು ಕೂಡ ತಮ್ಮ ಸರ್ವಪ್ರಯತ್ನವನ್ನೂ ವಿನಿಯೋಗಿಸುತ್ತಿರುತ್ತಾರೆ. ಆತನೇ ಅವ್ಯಕ್ತನು.

ಈ ಅವ್ಯಕ್ತನಾದ ಪರಮಾತ್ಮನೇ ನಮ್ಮ ಶರೀರವೆಂಬ ಕ್ಷೇತ್ರದಲ್ಲಿ ಕ್ಷೇತ್ರಜ್ಞನಾಗಿ ಜೀವರೂಪದಿಂದಲೂ ಕಾಣಿಸಿಕೊಳ್ಳುತ್ತಿರುತ್ತಾನೆ. ಇಷ್ಟೇ ಅಲ್ಲ. ಹೊರತೋರುವ ಕ್ಷೇತ್ರರೂಪದಿಂದಲೂ ಕಾಣಿಸುವವನು ಆತನೇ. ಕ್ಷೇತ್ರಕ್ಷೇತ್ರಜ್ಞರೆಂಬ ಆತನ ಹೊರತೋರುವ ಪ್ರಕೃತಿದ್ವಯದ ಮೂಲಕವಾಗಿ ಇವೆರಡಕ್ಕೂ ಅತೀತವಾದ ಆತನ ಸ್ವರೂಪವನ್ನು ಜ್ಞಾನಿಗಳು ಸಾಕ್ಷಾತ್ಕಾರಗೊಳಿಸಿಕೊಳ್ಳುತ್ತಾರೆ.

**ಯಂ ತ್ರಿಧಾತ್ಮಾನಮಾತ್ಮಸ್ಥಂ ವೃತಂ ಷೋಡಶಭಿರ್ಗುಣೈಃ |**
**ಪ್ರಾಹುಃ ಸಪ್ತದಶಂ ಸಾಂಖ್ಯಾಸ್ತಸ್ಮೈ ಸಾಂಖ್ಯಾತ್ಮನೇ ನಮಃ ||೫೩||**

೫೩. ಯಾವನು ಮೂರು ಬಗೆಯಿಂದ ತನ್ನ ಸ್ವರೂಪದಲ್ಲಿದ್ದುಕೊಂಡು ಹದಿನಾರು ಗುಣಗಳಿಂದ ಸುತ್ತುವರೆಯಲ್ಪಟ್ಟಿರುವ ಹದಿನೇಳನೆಯವನೆಂದು ಸಾಂಖ್ಯರು ಹೇಳುವರೋ ಅಂಥ ಸಾಂಖ್ಯಾತ್ಮನಿಗೆ ನಮಸ್ಕಾರ !

ಇಂದ್ರಿಯಗಳು ಹನ್ನೊಂದು, ಭೂತಗಳು ಐದು - ಹೀಗೆ ಹದಿನಾರು ಗುಣವಿಕಾರಗಳು ಆತ್ಮನನ್ನು ಬೇರೆಬೇರೆಯ ರೂಪಗಳಿಂದ ಮೂರು ಅವಸ್ಥೆಗಳಲ್ಲಿ ಯೂ ಆವರಿಸಿರುತ್ತಿದ್ದರೂ ನಿಜವಾಗಿ ಅವನು ಈ ಹದಿನಾರಕ್ಕಿಂತ ಬೇರೆಯಾಗಿ ಇವುಗಳ ಸಂಬಂಧವಿಲ್ಲದೆ ತಾನೇತಾನಾಗಿರುವ ಶುದ್ಧಾತ್ಮನಾಗಿರುತ್ತಾನೆ.

**ಯಂ ವಿನಿದ್ರಾ ಜಿತಶ್ವಾಸಾಃ ಸತ್ತ್ವಸ್ಥಾಃ ಸಂಯತೇನ್ದ್ರಿಯಾಃ[1] |**
**ಜ್ಯೋತಿಃ ಪಶ್ಯನ್ತಿ ಯುಞ್ಜಾನಾಸ್ತಸ್ಮೈ ಯೋಗಾತ್ಮನೇ ನಮಃ ||೫೪||**

೫೪. ನಿದ್ರೆಯನ್ನು ಗೆದ್ದುಕೊಂಡು ಪ್ರಾಣಾಯಾಮವನ್ನು ಮಾಡಿ ಸಾತ್ತ್ವಿಕರಾಗಿ ಇಂದ್ರಿಯಗಳನ್ನೆಲ್ಲ ಬಿಗಿಹಿಡಿದುಕೊಂಡಿರುವ ಯೋಗಿಗಳು ಯಾವಾತನನ್ನು ಜ್ಯೋತಿಯ ಸ್ವರೂಪದಿಂದ ನೋಡುವರೋ ಅಂಥ ಯೋಗಸ್ವರೂಪನಿಗೆ ನಮಸ್ಕಾರ !

ಪ್ರಕೃತಿಯಿಂದ ಪುರುಷನನ್ನು ವಿಂಗಡಿಸಿಕೊಳ್ಳುವದೇ ಸಾಂಖ್ಯದಲ್ಲಿ ಕರ್ತವ್ಯವು; ಅದಕ್ಕೆ ಅಲ್ಲಿ ವಿಚಾರವೇ ಸಾಧನವು. ಇಂದ್ರಿಯಗಳನ್ನು ಒಳಕ್ಕೆ ಸೆಳೆದುಕೊಂಡು ಮನೋವೃತ್ತಿಗಳನ್ನು ನಿಲ್ಲಿಸಿಕೊಂಡು ಆತ್ಮನನ್ನು ಕಾಣುವದೇ ಯೋಗದಲ್ಲಿ ಸಾಧನವು.

**ಅಪುಣ್ಯಪುಣ್ಯೋಪರಮೇ ಯಂ ಪುನರ್ಭವನಿರ್ಭಯಾಃ |**
**ಶಾನ್ತಾಃ ಸಂನ್ಯಾಸಿನೋ ಯಾನ್ತಿ ತಸ್ಮೈ ಮೋಕ್ಷಾತ್ಮನೇ ನಮಃ ||೫೫||**

೫೫. ಪುಣ್ಯಪಾಪಗಳೆಲ್ಲವೂ ಕಳೆಯಲು ಮತ್ತೆ ಹುಟ್ಟುವ ಅಂಜಿಕೆಯಿಲ್ಲದೆ ಶಾಂತರಾದ ಸಂನ್ಯಾಸಿಗಳು ಯಾವದನ್ನು ಪಡೆಯುವರೋ ಆ ಮೋಕ್ಷಸ್ವರೂಪನಿಗೆ ನಮಸ್ಕಾರ!

ಜ್ಞಾನದಿಂದ ಪುಣ್ಯಪಾಪಗಳೆರಡನ್ನೂ ಆತ್ಮನಾಗಿ ಅರಿತುಕೊಂಡು ಸರ್ವಕರ್ಮಸಂನ್ಯಾಸವನ್ನು ಮಾಡಿರುವ ಯತಿಗಳು ಸದ್ಯೋಮುಕ್ತಿಯನ್ನು ಪಡೆದುಕೊಳ್ಳುತ್ತಾರೆ.

**ಯೋऽಸೌ ಯುಗಸಹಸ್ರಾನ್ತೇ ಪ್ರದೀಪ್ತಾರ್ಚಿರ್ವಿಭಾವಸುಃ |**
**ಸಂಕ್ಷೋಭಯತಿ ಭೂತಾನಿ ತಸ್ಮೈ ಘೋರಾತ್ಮನೇ ನಮಃ ||೫೬||**

೫೬. ಸಾವಿರ ಯುಗಗಳಾದ ಬಳಿಕ, ಹತ್ತಿಕೊಂಡುರಿಯುವ ಕಿರಣಗಳಿಂದ ಪ್ರಾಣಿಗಳನ್ನೆಲ್ಲ ಯಾವಾತನು ತಳಮಳಗೊಳಿಸುವನೋ ಅಂಥ ಘೋರರೂಪನಿಗೆ ನಮಸ್ಕಾರ!

1. `ಶಾನ್ತಾ ದಾನ್ತಾ ಜಿತೇನ್ದ್ರಿಯಾಃ' ಪಾ ||

**ಸಂಭಕ್ಷ್ಯ ಸರ್ವಭೂತಾನಿ ಕೃತ್ವಾ ಚೈಕಾರ್ಣವಂ ಜಗತ್ ।**
**ಬಾಲಃ ಸ್ವಪಿತಿ ಯಶ್ಚೈಕಸ್ತಸ್ಮೈ ಮಾಯಾತ್ಮನೇ ನಮಃ ॥೫೭॥**

೫೭. ಸರ್ವಭೂತಗಳನ್ನೂ ನುಂಗಿ ಜಗತ್ತನ್ನೆಲ್ಲ ಒಂದೇ ಸಾಗರವಾಗಿ ಮಾಡಿಕೊಂಡು ಒಬ್ಬನೇ ಒಬ್ಬ ಬಾಲಕನಾಗಿ ಯಾವನು ಮಲಗಿರುತ್ತಾನೋ ಅಂಥ ಮಾಯಾತ್ಮನಿಗೆ ನಮಸ್ಕಾರ!

ಮೇಲಿನ ಎರಡು ಶ್ಲೋಕಗಳೂ ಪ್ರಲಯಸಮಯದ ವರ್ಣನೆಗಳು. ಒಂದೇ ಸಾಗರವೆಂದರೆ ಅವ್ಯಕ್ತರೂಪದ ಜಗತ್ತು.

**ಅಜಸ್ಯ[1] ನಾಭ್ಯಾಂ ಸಮ್ಭೂತಂ ಯಸ್ಮಿನ್ ವಿಶ್ವಂ ಪ್ರತಿಷ್ಠಿತಮ್ ।**
**ಪುಷ್ಕರೇ ಪುಷ್ಕರಾಕ್ಷಸ್ಯ ತಸ್ಮೈ ಪದ್ಮಾತ್ಮನೇ ನಮಃ ॥೫೮॥**

೫೮. ಜನ್ಮರಹಿತನಾದ ಯಾವನ ಹೊಕ್ಕುಳಲ್ಲಿ ಹುಟ್ಟಿರುವದಾಗಿ ಕಮಲನೇತ್ರನಾದ ಯಾವನ ನಾಭಿಕಮಲದಲ್ಲಿ ವಿಶ್ವವೇ ನೆಲೆನಿಂತಿರುವದೋ ಆ ಪದ್ಮಸ್ವರೂಪನಿಗೆ ನಮಸ್ಕಾರ!

**ಸಹಸ್ರಶಿರಸೇ ಚೈವ ಪುರುಷಾಯಾಮಿತಾತ್ಮನೇ ।**
**ಚತುಸ್ಸಮುದ್ರಪರ್ಯಙ್ಕೇ[2] ಯೋಗನಿದ್ರಾತ್ಮನೇ ನಮಃ ॥೫೯॥**

೫೯. ಸಾವಿರ ಹೆಡೆಗಳುಳ್ಳ ಅನಂತರೂಪಿಯಾದ ಪುರುಷನಿಗೆ, ನಾಲ್ಕು ಸಮುದ್ರಗಳೆಂಬ ಪರ್ಯಂಕದಲ್ಲಿರುವ ಯೋಗನಿದ್ರಾಸ್ವರೂಪನಿಗೆ ನಮಸ್ಕಾರ!

೪೮ನೆಯ ಶ್ಲೋಕದ ವಿವರವನ್ನು ನೋಡಿ. ಪ್ರಸುಪ್ತ (ನಿದ್ರಿಸಿರುವದು), ತನು (ಸೂಕ್ಷ್ಮವಾಗಿರುವದು), ವಿಚ್ಛಿನ್ನ (ಬಿಟ್ಟುಬಿಟ್ಟು ತಲೆದೋರುವದು), ಉದಾರ (ಹರಡಿಕೊಂಡು ಕಾಣಿಸಿಕೊಳ್ಳುವದು) -ಎಂಬ ನಾಲ್ಕು ಬಗೆಯ ಕಾಮಗಳೇ ಇಲ್ಲಿ ಸಮುದ್ರಗಳು. ಇವುಗಳನ್ನಳಿದು ಸಮಾಧಿಯಲ್ಲಿರುವವನೆಂದರ್ಥ.

**ಯಸ್ಯ ಕೇಶೇಷು ಜೀಮೂತಾಃ ನದ್ಯಃ ಸರ್ವಾಙ್ಗಸನ್ಧಿಷು ।**
**ಕುಕ್ಷೌ ಸಮುದ್ರಾಶ್ಚತ್ವಾರಸ್ತಸ್ಮೈ ತೋಯಾತ್ಮನೇ ನಮಃ ॥೬೦॥**

೬೦. ಯಾವಾತನ ತಲೆಗೂದಲುಗಳಲ್ಲಿ ಮೋಡಗಳಿರುವವೋ, ಸರ್ವಾವಯವಗಳ ಸಂಧಿಪ್ರದೇಶಗಳಲ್ಲಿ ನದಿಗಳಿರುವವೋ, ಉದರದಲ್ಲಿ ಸಮುದ್ರಗಳಿರುವವೋ, ಆ ಜಲಸ್ವರೂಪನಿಗೆ ನಮಸ್ಕಾರ!

**ಯಸ್ಮಾತ್ಸರ್ವಾಃ ಪ್ರಸೂಯನ್ತೇ ಸರ್ಗಪ್ರಲಯವಿಕ್ರಿಯಾಃ ।**
**ಯಸ್ಮಿಂಶ್ಚೈವ ಪ್ರಲೀಯನ್ತೇ ತಸ್ಮೈ ಹೇತ್ವಾತ್ಮನೇ ನಮಃ ॥೬೧॥**

1. `ತದ್ಯಸ್ಯ' ಪಾ ॥
2. `ಪರ್ಯಾಯೇ' ಪಾ॥

೬೧. ಸೃಷ್ಟಿಪ್ರಲಯರೂಪವಾದ ವಿಕಾರಗಳೆಲ್ಲ ಯಾವಾತನಿಂದಲೇ ಉಂಟಾಗಿ ಯಾವಾತನಲ್ಲಿಯೇ ಅಡಗಿಕೊಳ್ಳುವವೋ ಅಂಥ ಕಾರಣಸ್ವರೂಪನಿಗೆ ನಮಸ್ಕಾರ!

ಹುಟ್ಟುಹೊಂದುಗಳುಳ್ಳ ಅನಾತ್ಮವಸ್ತುಗಳೆಲ್ಲವೂ ಪರಮಾತ್ಮನಲ್ಲಿಯೇ ತೋರಿಕೊಂಡರೂ ಅವನಲ್ಲಿಯೇ ಅಡಗಿಕೊಂಡರೂ ಅವುಗಳಿಗೆ ಆಧಾರನಾಗಿ ಅವುಗಳ ತಿರುಳೇ ಆಗಿರುವ ಆತನಲ್ಲಿ ಯಾವ ವಿಕಾರಗಳೂ ಇರುವದಿಲ್ಲ.

**ಯೋ ನಿಷಣ್ಣೋ ಭವೇದ್ರಾತ್ರೌ ದಿವಾ ಭವತಿ ವಿಷ್ಠಿತಃ।**
**ಇಷ್ಟಾನಿಷ್ಟಸ್ಯ ಚ ದ್ರಷ್ಟಾ ತಸ್ಮೈ ದ್ರಷ್ಟಾತ್ಮನೇ ನಮಃ ॥೬೨॥**

೬೨. ಯಾವಾತನು ರಾತ್ರಿಯಲ್ಲಿ ಕುಳಿತುಕೊಳ್ಳುವನೋ ಹಗಲಿನಲ್ಲಿ ಬಗೆಬಗೆಯ ವಿಶೇಷಗಳಿಂದ ನಿಲ್ಲುವನೋ, ಬೇಕುಬೇಡೆಂಬುದೆರಡನ್ನೂ ನೋಡುತ್ತಿರುವ ಆ ಸಾಕ್ಷಿರೂಪನಿಗೆ ನಮಸ್ಕಾರ!

ಸಾಕ್ಷಿಯಾಗಿರುವ ಪರಮಾತ್ಮನಿಗೆ ಉಪಾಧಿಗಳ ತೋರಿಕೆ ಅಥವಾ ಅಡಗುವಿಕೆ -ಇವುಗಳಿಂದ ಯಾವ ಲೇಪವೂ ಇರುವದಿಲ್ಲ.

**ಅಕುಣ್ಠಂ ಸರ್ವಕಾರ್ಯೇಷು ಧರ್ಮಕಾರ್ಯಾರ್ಥಮುದ್ಯತಮ್।**
**ವೈಕುಣ್ಠಸ್ಯ ಚ ತದ್ರೂಪಂ ತಸ್ಮೈ ಕಾರ್ಯಾತ್ಮನೇ ನಮಃ ॥೬೩॥**

೬೩. ಯಾವ ಕಾರ್ಯಗಳಲ್ಲಿಯೂ ತಡೆಯಿಲ್ಲದೆ, ಧರ್ಮಕಾರ್ಯಕ್ಕೆ ಯಾವಾಗಲೂ ಸನ್ನದ್ಧನಾಗಿರುವ ವೈಕುಂಠನ ಆ ರೂಪವಿದೆಯಲ್ಲ, ಆ ಕಾರ್ಯರೂಪಕ್ಕೆ ನಮಸ್ಕಾರ!

**[1]ತ್ರಿಃಸಪ್ತಕೃತ್ವೋ ಯಃ ಕ್ಷತ್ರಂ ಧರ್ಮವ್ಯುತ್ಕ್ರಾನ್ತಗೌರವಮ್।**
**ಕ್ರುದ್ಧೋ ನಿಜಘ್ನೇ ಸಮರೇ ತಸ್ಮೈ ಕ್ರೌರ್ಯಾತ್ಮನೇ ನಮಃ ॥೬೪॥**

೬೪. ಧರ್ಮದ ಮರ್ಯಾದೆಯನ್ನು ದಾಟುವ ಕ್ಷತ್ರಿಯಜಾತಿಯವರನ್ನು ಕ್ರೋಧದಿಂದ ಇಪ್ಪತ್ತೊಂದು ಸಲ ಯಾವಾತನು ಯುದ್ಧದಲ್ಲಿ ಕೊಂದನೋ ಆ ಕ್ರೌರ್ಯರೂಪನಿಗೆ ನಮಸ್ಕಾರ!

**ವಿಭಜ್ಯ ಪಞ್ಚಧಾತ್ಮಾನಂ ವಾಯುರ್ಭೂತ್ವಾ ಶರೀರಗಃ।**
**ಯಶ್ಚೇಷ್ಟಯತಿ ಭೂತಾನಿ ತಸ್ಮೈ ವಾಯ್ವಾತ್ಮನೇ ನಮಃ ॥೬೫॥**

೬೫. ಯಾವಾತನು ತನ್ನನ್ನು ಐದು ಬಗೆಯಾಗಿ ವಿಂಗಡಿಸಿಕೊಂಡು ಶರೀರದಲ್ಲಿ ಪ್ರಾಣವಾಗಿ ಪ್ರಾಣಿಗಳ ವ್ಯಾಪಾರವನ್ನು ನಡೆಯಿಸುತ್ತಿರುವನೋ ಆ ವಾಯುಸ್ವರೂಪನಿಗೆ ನಮಸ್ಕಾರ !

**ಯುಗೇಷ್ವಾವರ್ತತೇ ಯೋಗೈರ್ಮಾಸರ್ತ್ವಯನಹಾಯನೈಃ।**
**ಸರ್ಗಪ್ರಲಯಯೋಃ ಕರ್ತಾ ತಸ್ಮೈ ಕಾಲಾತ್ಮನೇ ನಮಃ ॥೬೬॥**

1. ಈ ಶ್ಲೋಕವು ಕೆಲವು ಪಾಠಗಳಲ್ಲಿಲ್ಲ.

೬೬. ಯುಗಗಳಲ್ಲಿ ತಿಂಗಳು, ಋತು, ಅಯನ, ವರ್ಷ - ಎಂಬ ರೂಪಗಳಿಂದ ಯಾವನು ತನ್ನ ಯೋಗಶಕ್ತಿಗಳಿಂದ ಮತ್ತೆಮತ್ತೆ ತಿರುಗಿಬರುತ್ತಿರುವನೋ, ಸೃಷ್ಟಿಪ್ರಲಯಗಳನ್ನೂ ಮಾಡುತ್ತಿರುವ ಆ ಕಾಲಸ್ವರೂಪನಿಗೆ ನಮಸ್ಕಾರ!

**ಬ್ರಹ್ಮವಕ್ತ್ರಂ ಭುಜೌ ಕ್ಷತ್ರಂ ಕೃತ್ಸ್ನಮೂರೂದರಂ ವಿಶಃ ।**
**ಪಾದೌ ಯಸ್ಯಾಶ್ರಿತಾಃ ಶೂದ್ರಾಸ್ತಸ್ಮೈ ವರ್ಣಾತ್ಮನೇ ನಮಃ ॥೬೭॥**

೬೭. ಯಾವಾತನ ಮುಖವನ್ನು ಬ್ರಾಹ್ಮಣರೂ ಭುಜಗಳನ್ನು ಕ್ಷತ್ರಿಯರೂ ಊರುಪ್ರದೇಶವೆಲ್ಲವನ್ನೂ ವೈಶ್ಯರೂ ಪಾದಗಳನ್ನು ಶೂದ್ರರೂ ಆಶ್ರಯಿಸಿಕೊಂಡಿರುವರೋ ಅಂಥ ವರ್ಣಸ್ವರೂಪನಿಗೆ ನಮಸ್ಕಾರ!

**ಯಸ್ಯಾಗ್ನಿರಾಸ್ಯಂ ದ್ಯೌರ್ಮೂರ್ಧಾ ಖಂ ನಾಭಿಶ್ಚರಣೌ ಕ್ಷಿತಿಃ ।**
**ಸೂರ್ಯಶ್ಚಕ್ಷುರ್ದಿಶಃ ಶ್ರೋತ್ರೇ ತಸ್ಮೈ ಲೋಕಾತ್ಮನೇ ನಮಃ ॥೬೮॥**

೬೮. ಯಾವಾತನಿಗೆ ಅಗ್ನಿಯೇ ಮುಖವೋ, ಸ್ವರ್ಗಲೋಕವೇ ತಲೆಯ ಮೇಲ್ಗಡೆಯೋ ಆಕಾಶವೇ ಹೊಕ್ಕುಳೋ, ಭೂಮಿಯೇ ಪಾದಗಳೋ, ಸೂರ್ಯನೇ ಕಣ್ಣೋ, ದಿಕ್ಕುಗಳೇ ಕಿವಿಗಳೋ- ಅಂಥ ಲೋಕಸ್ವರೂಪನಿಗೆ ನಮಸ್ಕಾರ !

**ಪರಃ ಕಾಲಾತ್ ಪರೋ ಯಜ್ಞಾತ್ ಪರಾತ್ಪರತರಶ್ಚ ಯಃ ।**
**ಅನಾದಿರಾದಿರ್ವಿಶ್ವಸ್ಯ ತಸ್ಮೈ ವಿಶ್ವಾತ್ಮನೇ ನಮಃ ॥೬೯॥**

೬೯. ಕಾಲಕ್ಕೂ ಆಚೆನವನಾಗಿ ಯಜ್ಞಕ್ಕೂ ಆಚೆನವನಾಗಿ ಎಲ್ಲಕ್ಕೂ ಹೆಚ್ಚಿನದಾದ ಅಪರಬ್ರಹ್ಮಕ್ಕೂ ಯಾವನು ಆಚೆನವನೆಂದೆನಿಸಿರುವನೋ, ಯಾವನಿಗೆ ಆದಿಯಿಲ್ಲವೋ, ಯಾವನೇ ವಿಶ್ವಕ್ಕೆ ಆದಿಯೋ ಆ ವಿಶ್ವರೂಪಿಗೆ ನಮಸ್ಕಾರ!

ಪರಮಾತ್ಮನು ಕಾಲ, ಕರ್ಮ, ಕರ್ಮೋಪಾಸನೆಗಳ ಫಲವಾದ ಹಿರಣ್ಯಗರ್ಭ-ಈ ಮೂರನ್ನೂ ದಾಟಿರುತ್ತಾನೆ.

**ವಿಷಯೇ ವರ್ತಮಾನಾನಾಂ ಯಂ ತಂ ವೈಶೇಷಿಕೈರ್ಗುಣೈಃ ।**
**ಪ್ರಾಹುರ್ವಿಷಯಗೋಪ್ತಾರಂ ತಸ್ಮೈ ಗೋಪ್ತ್ರಾತ್ಮನೇ ನಮಃ ॥೭೦॥**

೭೦. ವಿಷಯದಲ್ಲಿರುವವರಿಗೆ ವಿಶೇಷಗುಣಗಳಿಂದ ವಿಷಯವನ್ನು ಕಾಪಾಡುವವನೆಂದು ಯಾರನ್ನು ಹೇಳುವರೋ ಅಂಥ ಕಾಪಾಡುವ ಸ್ವರೂಪದವನಿಗೆ ನಮಸ್ಕಾರ!

ವಿಷಯಗಳಲ್ಲಿ ಯಾರು ಮನಸ್ಸನ್ನು ಹಾಕುವರೋ ಅವರಿಗಾಗಿ ರಾಗಾದಿಗಳಿಂದ ಆಯಾ ವಿಷಯಗಳನ್ನೂ ವಾಸನಾರೂಪದಿಂದ ಮನಸ್ಸಿನಲ್ಲಿ ಕಾದಿಟ್ಟುಕೊಂಡಿರುವವನೂ ಪರಮಾತ್ಮನೇ.

**ಅನ್ನಪಾನೇನ್ಧನಮಯೋ ರಸಪ್ರಾಣವಿವರ್ಧನಃ ।**
**ಯೋ ಧಾರಯತಿ ಭೂತಾನಿ ತಸ್ಮೈ ಪ್ರಾಣಾತ್ಮನೇ ನಮಃ ॥೭೧॥**

೨೧. ಅನ್ನ, ಪಾನ - ಎಂಬ ಕಟ್ಟಿಗೆಯಿಂದ ರಸವನ್ನೂ ಪ್ರಾಣವನ್ನೂ ಬಲಪಡಿಸುವವನಾಗಿ ಯಾವಾತನು ಪ್ರಾಣಿಗಳನ್ನು ಪೋಷಿಸುವನೋ ಅಂಥ ಪ್ರಾಣಸ್ವರೂಪನಿಗೆ ನಮಸ್ಕಾರ!

**ಪ್ರಾಣಾನಾಂ ಧಾರಣಾರ್ಥಾಯ ಯೋऽನ್ನಂ ಭುಙ್ಕ್ತೇ ಚತುರ್ವಿಧಮ್**
**ಅನ್ತರ್ಭೂತಃ ಪಚತ್ಯಗ್ನಿಸ್ತಸ್ಮೈ ಪಾಕಾತ್ಮನೇ ನಮಃ ॥೨೨॥**

೨೨. ಯಾವ ಅಗ್ನಿಯು ಪ್ರಾಣಗಳನ್ನು ಧರಿಸಿರುವದಕ್ಕಾಗಿ ಬೇಕಾದ ನಾಲ್ಕು ಬಗೆಯ ಆಹಾರವನ್ನೂ ಭೋಜನಮಾಡುತ್ತಿರುವನೋ, ಒಳಗಡೆ ಇದ್ದುಕೊಂಡು ಎಲ್ಲವನ್ನೂ ಅರಗಿಸುತ್ತಿರುವನೋ ಆ ಪಾಕಸ್ವರೂಪನಿಗೆ ನಮಸ್ಕಾರ !

ಭಕ್ಷ್ಯ, ಭೋಜ್ಯ, ಲೇಹ್ಯ, ಚೋಹ್ಯ - ಎಂಬ ನಾಲ್ಕು ಬಗೆಯ ಆಹಾರವನ್ನೂ ತಿಂದು ಅರಗಿಸಿಕೊಳ್ಳುವ ವೈಶ್ವಾನರಾಗ್ನಿಯೂ ಪರಮಾತ್ಮನೇ.

**ಪಿಙ್ಗೇಕ್ಷಣಸಟಂ ಯಸ್ಯ ರೂಪಂ ದಂಷ್ಟ್ರಾನಖಾಯುಧಮ್।**
**ದಾನವೇನ್ದ್ರಾನ್ತಕರಣಂ ತಸ್ಮೈ ದೃಪ್ತಾತ್ಮನೇ ನಮಃ ॥೨೩॥**

೨೩. ಕೆಂಗಣ್ಣು ಕೆಂಜಡೆಗಳಿಂದ ಕೂಡಿ ಕೋರದಾಡೆ, ಕೂರುಗುರುಗಳಿಂದ ಕೂಡಿ ದಾನವೇಂದ್ರನಾದ (ಹಿರಣ್ಯಕಶಿಪು)ವನ್ನು ನಾಶಮಾಡುವ ರೂಪವು ಯಾರದೋ ಅಂಥ ದರ್ಪದ ಆಕಾರವುಳ್ಳಾತನಿಗೆ ನಮಸ್ಕಾರ!

**ಯಂ ನ ದೇವಾ ನ ಗನ್ಧರ್ವಾ ನ ದೈತ್ಯಾ ನ ಚ ದಾನವಾಃ।**
**ತತ್ತ್ವತೋ ಹಿ ವಿಜಾನನ್ತಿ ತಸ್ಮೈ ಸೂಕ್ಷ್ಮಾತ್ಮನೇ ನಮಃ ॥೨೪॥**

೨೪. ಯಾವಾತನನ್ನು ದೇವತೆಗಳಾಗಲಿ ಗಂಧರ್ವರಾಗಲಿ ದೈತ್ಯರಾಗಲಿ ದಾನವರಾಗಲಿ ಇದ್ದದ್ದು ಇದ್ದಂತೆ ತಿಳಿಯಲಾರರೋ ಆ ಸೂಕ್ಷ್ಮರೂಪನಿಗೆ ನಮಸ್ಕಾರ!

**ರಸಾತಲಗತಃ ಶ್ರೀಮಾನನನ್ತೋ ಭಗವಾನ್ ವಿಭುಃ।**
**ಜಗದ್ಧಾರಯತೇ ಕೃತ್ಸ್ನಂ ತಸ್ಮೈ ವೀರ್ಯಾತ್ಮನೇ ನಮಃ ॥೨೫॥**

೨೫. ರಸಾತಲವನ್ನು ಸೇರಿ ಶ್ರೀಯುಕ್ತನಾದ ವಿಭುವಾದ ಅನಂತ ಭಗವಂತನಾಗಿ ಜಗತ್ತೆಲ್ಲವನ್ನೂ ಯಾವನು ಎತ್ತಿಹಿಡಿದಿರುವನೋ ಆ ವೀರ್ಯರೂಪನಿಗೆ ನಮಸ್ಕಾರ!

**ಯೋ ಮೋಹಯತಿ ಭೂತಾನಿ ಸ್ನೇಹಪಾಶಾನುಬನ್ಧನೈಃ।**
**ಸರ್ಗಸ್ಯ ರಕ್ಷಣಾರ್ಥಾಯ ತಸ್ಮೈ ಮೋಹಾತ್ಮನೇ ನಮಃ ॥೨೬॥**

೨೬. ಯಾವಾತನು ಸೃಷ್ಟಿಯನ್ನು ಕಾಪಾಡಿಟ್ಟುಕೊಳ್ಳುವದಕ್ಕಾಗಿ ಪ್ರಾಣಿಗಳಿಗೆ ಪ್ರೀತಿಯ ಪಾಶದ ಬಿಗಿತಗಳಿಂದ ಮೋಹಗೊಳಿಸುವನೋ ಅಂತ ಮೋಹಸ್ವರೂಪನಿಗೆ ನಮಸ್ಕಾರ!

[*ಭೂತಲಾತಲಮಧ್ಯಸ್ಥೌ ಹತ್ವಾ ತು ಮಧುಕೈಟಭೌ ।
ಉದ್ಧೃತಾ ಯೇನ ವೈ ವೇದಾಸ್ತಸ್ಮೈ ಮತ್ಸ್ಯಾತ್ಮನೇ ನಮಃ ॥೧॥

೧. ಭೂಮಿಗೂ ಅತಲಕ್ಕೂ ನಡುವೆ ಮಧುಕೈಟಭರನ್ನು ಕೊಂದು ಯಾವನು ವೇದಗಳನ್ನು ಉದ್ಧರಿಸಿದನೋ ಆ ಮತ್ಸ್ಯರೂಪನಿಗೆ ನಮಸ್ಕಾರ !

ಸಸಾಗರವತಾಂ ಬಿಭ್ರತ್ಸಪ್ತದ್ವೀಪಾಂ ವಸುನ್ಧರಾಮ್।
ಯೋಧಾರಯತಿ ಪೃಷ್ಠೇನ ತಸ್ಮೈ ಕೂರ್ಮಾತ್ಮನೇ ನಮಃ ॥೨॥

೨. ಸಾಗರವನಗಳಿಂದೊಡಗೂಡಿದ ಏಳು ದ್ವೀಪಗಳ ಭೂಮಿಯನ್ನು ಯಾವನು ತನ್ನ ಬೆನ್ನಿನಮೇಲೆ ಹೊತ್ತುಕೊಂಡಿರುವನೋ ಆ ಕೂರ್ಮರೂಪನಿಗೆ ನಮಸ್ಕಾರ !

ಏಕಾರ್ಣವೇ ಹಿ ಮಗ್ನಾಂ ತಾಂ ವಾರಾಹಂ ರೂಪಮಾಸ್ಥಿತಃ ।
ಉದ್ದಧಾರ ಮಹೀಂ ಯೋಽಸೌ ತಸ್ಮೈ ಕ್ರೋಡಾತ್ಮನೇ ನಮಃ ॥೩॥

೩. ಎಲ್ಲವೂ ಒಂದೇ ಸಾಗರವಾಗಿರಲು ಅದರಲ್ಲಿ ಮುಳುಗಿದ್ದ ಭೂಮಿಯನ್ನು ವರಾಹರೂಪದಿಂದ ಯಾವನು ಎತ್ತಿದನೋ ಆ ವರಾಹರೂಪನಿಗೆ ನಮಸ್ಕಾರ !

ನಾರಸಿಂಹಂ ವಪುಃ ಕೃತ್ವಾ ಯಸ್ತ್ರೈಲೋಕ್ಯಭಯಂಕರಮ್ ।
ಹಿರಣ್ಯಕಶಿಪುಂ ಜಘ್ನೇ ತಸ್ಮೈ ಸಿಂಹಾತ್ಮನೇ ನಮಃ ॥೪॥

೪. ಮೂರು ಲೋಕಕ್ಕೂ ಅಂಜಿಕೆಯನ್ನುಂಟುಮಾಡುವ ನರಸಿಂಹರೂಪದ ಶರೀರವನ್ನು ಧರಿಸಿ ಯಾವಾತನು ಹಿರಣ್ಯಕಶಿಪುವನ್ನು ಕೊಂದನೋ ಆ ಸಿಂಹರೂಪನಿಗೆ ನಮಸ್ಕಾರ !

ವಾಮನಂ ರೂಪಮಾಸ್ಥಾಯ ಬಲಿಂ ಸಂಯಮ್ಯ ಮಾಯಯಾ ।
ಇಮೇ ಕ್ರಾನ್ತಾಸ್ತ್ರಯೋ ಲೋಕಾಸ್ತಸ್ಮೈ ಕ್ರಾನ್ತಾತ್ಮನೇ ನಮಃ ॥೫॥

೫. ವಾಮನರೂಪವನ್ನು ಧರಿಸಿ ಮಾಯೆಯಿಂದ ಬಲಿಯನ್ನು ನಿಗ್ರಹಿಸಿ ಮೂರು ಲೋಕವನ್ನೂ ಹೆಜ್ಜೆಯಿಂದ ಆಕ್ರಮಿಸಿದ ಪಾದಕ್ರಮರೂಪಿಗೆ ನಮಸ್ಕಾರ!

ಜಮದಗ್ನಿಸುತೋ ಭೂತ್ವಾ ರಾಮಃ ಪರಶುಧೃಗ್ ವಿಭುಃ ।
ಸಹಸ್ರಾರ್ಜುನಹನ್ನೈವ ತಸ್ಮೈ ಉಗ್ರಾತ್ಮನೇ ನಮಃ ॥೬॥

೬. ಜಮದಗ್ನಿಯ ಮಗನಾದ ರಾಮನಾಗಿ ಗಂಡುಗೊಡಲಿಯನ್ನು ಧರಿಸಿ ಯಾವ ವಿಭುವು ಸಹಸ್ರಾರ್ಜುನನನ್ನು ಕೊಂದನೋ ಆ ಉಗ್ರರೂಪನಿಗೆ ನಮಸ್ಕಾರ !

ರಾಮೋ ದಾಶರಥಿರ್ಭೂತ್ವಾ ಪೌಲಸ್ತ್ಯಕುಲನನ್ದನಮ್।
ಜಘಾನ ರಾವಣಂ ಸಙ್ಖ್ಯೇ ತಸ್ಮೈ ಕ್ಷತ್ರಾತ್ಮನೇ ನಮಃ ॥೭॥

* ಈ ಹತ್ತು ಶ್ಲೋಕಗಳು ಭಾರತದಲ್ಲಿ ಕಂಡುಬರುವದಿಲ್ಲ. ಕೆಲವು ಸ್ತೋತ್ರ ಸಂಗ್ರಹಗಳಲ್ಲಿ ಕಾಣಬರುತ್ತವೆ.

೭. ದಶರಥರಾಮನಾಗಿ ಪುಲಸ್ತ್ಯನ ಕುಲದಲ್ಲಿ ಹುಟ್ಟಿದ ರಾವಣನನ್ನು ಯಾವಾತನು ಯುದ್ಧದಲ್ಲಿ ಕೊಂದನೋ ಆ ಕ್ಷತ್ರರೂಪನಿಗೆ ನಮಸ್ಕಾರ!

**ವಸುದೇವಸುತಃ ಶ್ರೀಮಾನ್ ವಾಸುದೇವೋ ಜಗತ್ಪತಿಃ ।**
**ಜಹಾರ ವಸುಧಾಭಾರಂ ತಸ್ಮೈ ಕೃಷ್ಣಾತ್ಮನೇ ನಮಃ ॥೮॥**

೮. ವಸುದೇವನ ಮಗನಾದ ಕಾಂತಿಯುಕ್ತವಾಸುದೇವನಾಗಿ ಯಾವ ಜಗತ್ಪತಿಯು ಭೂಭಾರವನ್ನು ಪರಿಹರಿಸಿದನೋ ಆ ಕೃಷ್ಣರೂಪನಿಗೆ ನಮಸ್ಕಾರ!

**ಬುದ್ಧರೂಪಂ ಸಮಾಸ್ಥಾಯ ಸರ್ವರೂಪಪರಾಯಣಃ ।**
**ಮೋಹಯನ್ ಸರ್ವಭೂತಾನಿ ತಸ್ಮೈ ಮೋಹಾತ್ಮನೇ ನಮಃ ॥೯॥**

೯. ಸಕಲರೂಪಗಳಿಗೂ ಹೆಚ್ಚಿನ ಆಶ್ರಯನಾಗಿರುವ ಯಾವನು ಬುದ್ಧರೂಪವನ್ನು ಧರಿಸಿ ಸಮಸ್ತಜೀವರನ್ನೂ ಮೋಹಗೊಳಿಸಿದನೋ ಆ ಮೋಹಸ್ವರೂಪನಿಗೆ ನಮಸ್ಕಾರ!

**ಹನಿಷ್ಯತಿ ಕಲೇರನ್ತೇ ಮ್ಲೇಚ್ಛಾಂಸ್ತುರಗವಾಹನಃ ।**
**ಧರ್ಮಸಂಸ್ಥಾಪನಾರ್ಥಾಯ ತಸ್ಮೈ ಕಲ್ಕ್ಯಾತ್ಮನೇ ನಮಃ ॥೧೦॥**

೧೦. ಕಲಿಯುಗದ ಅಂತ್ಯದಲ್ಲಿ ಧರ್ಮವನ್ನು ಸ್ಥಾಪನೆಮಾಡುವದಕ್ಕಾಗಿ ತುರಗವನ್ನೇರಿ ಯಾವಾತನು ಮ್ಲೇಚ್ಛರನ್ನು ಕೊಲ್ಲುವನೋ ಆ ಕಲ್ಕಿರೂಪನಿಗೆ ನಮಸ್ಕಾರ!

**ಆತ್ಮಜ್ಞಾನಮಿದಂ ಜ್ಞಾನಂ ಜ್ಞಾತ್ವಾ ಪಞ್ಚಸ್ವವಸ್ಥಿತಮ್ ।**
**ಯಂ ಜ್ಞಾನೇನಾಭಿಗಚ್ಛನ್ತಿ ತಸ್ಮೈ ಜ್ಞಾನಾತ್ಮನೇ ನಮಃ ॥೭೭॥**

೭೭. ಐದು ವಿಷಯಗಳಲ್ಲಿ ಉಂಟಾಗುವ ಇದೆಂಬ ಅರಿವನ್ನು ಆತ್ಮಜ್ಞಾನವೇ ಎಂದರಿತುಕೊಂಡು ಯಾವಾತನನ್ನು ಜ್ಞಾನದಿಂದ ಪಡೆಯುವರೋ ಆ ಜ್ಞಾನಸ್ವರೂಪನಿಗೆ ನಮಸ್ಕಾರ!

ವಿಷಯಜ್ಞಾನವೆಂದು ನಾವು ಕರೆಯುವದೂ ನಿಜವಾಗಿ ಕೂಟಸ್ಥಜ್ಞಾನಸ್ವರೂಪವೇ.

**ಅಪ್ರಮೇಯಶರೀರಾಯ ಸರ್ವತೋ ಬುದ್ಧಿಚಕ್ಷುಷೇ ।**
**ಅನನ್ತ*ಪರಿಮೇಯಾಯ ತಸ್ಮೈ ದಿವ್ಯಾತ್ಮನೇ ನಮಃ ॥೭೮॥**

೭೮. ಪ್ರಮಾಣಗಳಿಂದ ಗೊತ್ತುಪಡಿಸುವಕ್ಕಾಗದ ಸ್ವರೂಪವುಳ್ಳವನೂ ಎಲ್ಲೆಲ್ಲಿಯೂ ಪಸರಿಸಿರುವ ಜ್ಞಾನದೃಷ್ಟಿಯುಳ್ಳಾತನೂ ಲೆಕ್ಕವಿಲ್ಲದಷ್ಟು ವಿಷಯಗಳಿಗೆ ಆಶ್ರಯನೂ ಆಗಿರುವ ದಿವ್ಯಸ್ವರೂಪನಿಗೆ ನಮಸ್ಕಾರ!

**ಜಟಿನೇ ದಣ್ಡಿನೇ ನಿತ್ಯಂ ಲಮ್ಬೋದರಶರೀರಿಣೇ ।**
**ಕಮಣ್ಡಲುನಿಷಙ್ಗಾಯ ತಸ್ಮೈ ಬ್ರಹ್ಮಾತ್ಮನೇ ನಮಃ ॥೭೯॥**

* ಅಪಾರ'ಪಾ ॥

೭೯. ಜಟೆಯುಳ್ಳವನೂ ದಂಡವುಳ್ಳವನೂ ದೊಡ್ಡ ಹೊಟ್ಟೆಯುಳ್ಳ ಶರೀರವುಳ್ಳವನೂ ಕಮಂಡಲುವೆಂಬ ಬತ್ತಳಿಕೆಯುಳ್ಳವನೂ ಆದ ಆ ಬ್ರಹ್ಮ ಸ್ವರೂಪನಿಗೆ ನಮಸ್ಕಾರ!

ಚತುರ್ಮುಖಬ್ರಹ್ಮನಿಗೆ ಕಮಂಡುಲುವೇ ಬತ್ತಳಿಕೆ; ಅದರ ನೀರೇ ಆತನಿಗೆ ಅಸುರರನ್ನು ಕೊಲ್ಲುವ ಬಾಣಗಳು.

**ಶೂಲಿನೇ ತ್ರಿದಶೇಶಾಯ ತ್ರ್ಯಮ್ಬಕಾಯ ಮಹಾತ್ಮನೇ।**
**ಭಸ್ಮದಿಗ್ಧೋರ್ಧ್ವಲಿಙ್ಗಾಯ ತಸ್ಮೈ ರುದ್ರಾತ್ಮನೇ ನಮಃ ॥೮೦॥**

೮೦. ತ್ರಿಶೂಲಧಾರಿಯೂ ದೇವತೆಗಳಿಗೊಡೆಯನೂ ಮುಕ್ಕಣ್ಣನೂ ಆದ ಮಹಾತ್ಮನಿಗೆ, ಶರೀರದ ಮೇಲ್ಗಡೆಯೆಲ್ಲ ಭಸ್ಮವನ್ನು ಬಳಿದುಕೊಂಡಿರುವ ಆ ರುದ್ರರೂಪನಿಗೆ ನಮಸ್ಕಾರ!

**ಚನ್ದ್ರಾರ್ಧಕೃತಶೀರ್ಷಾಯ ವ್ಯಾಲಯಜ್ಞೋಪವೀತಿನೇ।**
**ಪಿನಾಕಶೂಲಹಸ್ತಾಯ ತಸ್ಮಾ ಉಗ್ರಾತ್ಮನೇ ನಮಃ ॥೮೧॥**

೮೧. ಅರ್ಧಚಂದ್ರನನ್ನು ತಲೆಯಲ್ಲಿಟ್ಟುಕೊಂಡು ನಾಗವನ್ನೇ ಯಜ್ಞೋಪವೀತವಾಗಿ ಧರಿಸಿರುವ ಪಿನಾಕಪಾಣಿಗೆ, ಶೂಲಹಸ್ತನಿಗೆ, ಆ ಉಗ್ರರೂಪನಿಗೆ ನಮಸ್ಕಾರ!

ಬ್ರಹ್ಮವಿಷ್ಣುಶಿವರೆಂಬ ತ್ರಿಮೂರ್ತಿಗಳೂ ಒಬ್ಬ ಪರಮಾತ್ಮನ ಸ್ವರೂಪಗಳೇ ಹೊರತು ಬೇರೆಯಲ್ಲ.

**ಸರ್ವಭೂತಾತ್ಮಭೂತಾಯ[1] ಭೂತಾದಿನಿಧನಾಯ ಚ।**
**ಅಕ್ರೋಧದ್ರೋಹಮೋಹಾಯ ತಸ್ಮೈ ಶಾನ್ತಾತ್ಮನೇ ನಮಃ ॥೮೨॥**

೮೨. ಸಮಸ್ತಪ್ರಾಣಿಗಳಿಗೂ ಆತ್ಮನಾಗಿರುವ, ಭೂತಗಳಿಗೆಲ್ಲ ಆದಿಯೂ ಅಂತವೂ ಆಗಿರುವ ಕ್ರೋಧದ್ರೋಹಮೋಹಗಳಿಲ್ಲದ ಶಾಂತಸ್ವರೂಪನಿಗೆ ನಮಸ್ಕಾರ!

**ಯಸ್ಮಿನ್ ಸರ್ವಂ[2] ಯತಃ ಸರ್ವಂ ಯಃ ಸರ್ವಂ ಸರ್ವತಶ್ಚ ಯಃ।**
**ಯಶ್ಚ ಸರ್ವಮಯೋ ನಿತ್ಯಂ ತಸ್ಮೈ ಸರ್ವಾತ್ಮನೇ ನಮಃ ॥೮೩॥**

೮೩. ಯಾವಾತನಲ್ಲಿ ಎಲ್ಲವೂ ಇರುವದೋ ಯಾವಾತನಿಂದಲೇ ಎಲ್ಲವೂ ಆಗಿರುವದೋ, ಯಾವಾತನೇ ಎಲ್ಲವೂ ಆಗಿರುವನೋ, ಯಾವಾತನು ಎಲ್ಲೆಡೆಯಲ್ಲಿಯೂ ಇರುವನೋ, ಮತ್ತು ಯಾವಾತನು ಯಾವಾಗಲೂ ಸರ್ವದೇವಮಯನಾಗಿರುವನೋ ಆ ಸರ್ವಾತ್ಮನಿಗೆ ನಮಸ್ಕಾರ!

**ವಿಶ್ವಕರ್ಮನ್ ನಮಸ್ತೇಽಸ್ತು ವಿಶ್ವಾತ್ಮನ್ ವಿಶ್ವಸಂಭವ।**
**ಅಪವರ್ಗಸ್ಥಭೂತಾನಾಂ ಪಞ್ಚಾನಾಂ ಪರತಃ ಸ್ಥಿತ ॥೮೪॥**

1. `ಪಞ್ಚಭೂತಾತ್ಮಭೂತಾಯ' ಪಾ ॥
2. ಈ ಶ್ಲೋಕದಲ್ಲಿರುವ `ಸರ್ವಮ್' ಎಂಬುದರ ಬದಲು `ಸರ್ವೇ' ಎಂದು ಪಾಠಾಂತರ. `ನಿತ್ಯಮ್' ಎಂಬುದರ ಬದಲು `ದೇವಃ' ಎಂದು ಪಾ ॥

೮೪. ಎಲ್ಲವನ್ನೂ ಮಾಡುವಾತನೆ, ಸರ್ವಸ್ವರೂಪನೆ, ಸರ್ವಕ್ಕೂ ಕಾರಣನಾದವನೆ, ನಿತ್ಯಮುಕ್ತಸ್ವರೂಪನೆ, ಪಂಚಭೂತಗಳನ್ನೂ ಮೀರಿರುವಾತನೆ, ನಿನಗೆ ನಮಸ್ಕಾರವಿರಲಿ!

**ನಮಸ್ತೇ ತ್ರಿಷು ಲೋಕೇಷು ನಮಸ್ತೇ ಪರತಸ್ತ್ರಿಷು ।**
**ನಮಸ್ತೇ ದಿಕ್ಷು ಸರ್ವಾಸು* ತ್ವಂ ಹಿ ಸರ್ವಮಯೋ ನಿಧಿಃ ॥೮೫॥**

೮೫. ಮೂರು ಲೋಕಗಳಲ್ಲಿಯೂ ಇರುವ ನಿನಗೆ ನಮಸ್ಕಾರ! ಇನ್ನು ಮೇಲಿನ ಮೂರು ಲೋಕಗಳಲ್ಲಿಯೂ ಇರುವವನೆ, ನಿನಗೆ ನಮಸ್ಕಾರ! ಎಲ್ಲಾ ದಿಕ್ಕುಗಳಲ್ಲಿಯೂ ಇರುವಾತನೆ, ನಿನಗೆ ನಮಸ್ಕಾರ! ನೀನೇ ಸರ್ವಮಯವಾದ ನಿಧಿಯಾಗಿರುವೆ.

ಈ ಶ್ಲೋಕಕ್ಕೆ ಮೂರು ಲೋಕಗಳು ಎಂದರೆ ಮೂರವಸ್ಥೆಗಳು ಎಂದೂ ಆ ಮೇಲೆ ಮೂರು ಎಂದರೆ ಮೂರು ಕಾಲಗಳು ಎಂದೂ ಅರ್ಥಮಾಡಬಹುದು. ಆಗ ಸರ್ವದೇಶಕಾಲಮಯನಾಗಿರುವವನೂ ನೀನೇ, ಅವನ್ನು ಮಿರಿರುವವನೂ ನೀನೇ ಎಂಬುದು ವಾಕ್ಯದ ಅರ್ಥವಾಗುತ್ತದೆ.

**ನಮಸ್ತೇ ಭಗವನ್ ವಿಷ್ಣೋ ಲೋಕಾನಾಂ ಪ್ರಭವಾಪ್ಯಯ ।**
**ತ್ವಂ ಹಿ ಕರ್ತಾ ಹೃಷೀಕೇಶ ಸಂಹರ್ತಾ ಚಾಪರಾಜಿತಃ ॥೮೬॥**

೮೬. ಭಗವಂತನೆ, ವಿಷ್ಣುವೆ, ಲೋಕಗಳಿಗೆಲ್ಲ ಉತ್ಪತ್ತಿಪ್ರಲಯಕಾರಣನಾಗಿರುವವನೆ, ನಿನಗೆ ನಮಸ್ಕಾರ! ಹೃಷೀಕೇಶನೆ, ನೀನೇ ಸೃಷ್ಟಿಕರ್ತನು, ಪ್ರಲಯಕರ್ತನು, ಮತ್ತೊಬ್ಬರಿಂದ ಜಿತನಾಗದೆ ಇರುವಾತನು.

**ನ ಹಿ ಪಶ್ಯಾಮಿ ತೇ ಭಾವಂ ದಿವ್ಯಂ ಹಿ ತ್ರಿಷು ವರ್ತ್ಮಸು ।**
**ತ್ವಾಂ ತು ಪಶ್ಯಾಮಿ ತತ್ತ್ವೇನ ಯತ್ತೇ ರೂಪಂ ಸನಾತನಮ್ ॥೮೭॥**

೮೭. ನಿನ್ನ ದಿವ್ಯಸ್ವರೂಪವನ್ನು ಮೂರು ಕಾಲಗಳಲ್ಲಿಯೂ ಕಾಣೆನು. ಆದರೆ ಯಾವದು ನಿನ್ನ ಶಾಶ್ವತಸ್ವರೂಪವೋ ಆ ರೂಪದಿಂದ ನಿನ್ನನ್ನು ಕಾಣುತ್ತಿದೇನೆ.

ನಿನ್ನ ಸ್ವರೂಪಕ್ಕೆ ಮೂರು ಕಾಲಗಳಲ್ಲಿ ತೋರಿಬರುವ ಯಾವ ರೂಪವೂ ಸಮನಾಗಲಾರದು; ನಿನ್ನ ಪರಮಾರ್ಥರೂಪವು ಅವೆಲ್ಲವನ್ನೂ ಮೀರಿರುವದು ಎಂದಭಿಪ್ರಾಯ.

**ದಿವಂ ತೇ ಶಿರಸಾ ವ್ಯಾಪ್ತಂ ಪದ್ಭ್ಯಾಂ ದೇವೀ ವಸುನ್ಧರಾ ।**
**ವಿಕ್ರಮೇಣ ತ್ರಯೋ ಲೋಕಾಃ ಪುರುಷೋಽಸಿ ಸನಾತನಃ ॥೮೮॥**

೮೮. ಸ್ವರ್ಗವು ನಿನ್ನ ತಲೆಯಿಂದ ವ್ಯಾಪ್ತವಾಗಿದೆ; ಭೂದೇವಿಯು ಪಾದಗಳಿಂದ ವ್ಯಾಪ್ತಳಾಗಿರುವಳು; ಹೆಜ್ಜೆಗಳಿಂದ ಮೂರು ಲೋಕಗಳೂ ವ್ಯಾಪ್ತವಾಗಿರುವವು. ನೀನು ಸನಾತನಪುರುಷನು.

* `ತ್ರಿಷು ಸರ್ವೇಷು' ಪಾ॥

**ದಿಶೋ ಭುಜಾ ರವಿಶ್ಚಕ್ಷುರ್ವೀರ್ಯೇ ಶುಕ್ರಃ ಪ್ರತಿಷ್ಠಿತಃ।**
**ಸಪ್ತಮಾರ್ಗಾ ನಿರುದ್ಧಾಸ್ತೇ ವಾಯೋರಮಿತತೇಜಸಃ ॥೮೯॥**

೮೯. ದಿಕ್ಕುಗಳೇ ಭುಜಗಳು, ಸೂರ್ಯನೇ ಕಣ್ಣು; ನಿನ್ನ ವೀರ್ಯದಲ್ಲಿ ಶುಕ್ರನಿರುವನು. ಅತಿಪರಾಕ್ರಮಿಯಾದ ವಾಯುವಿನ ಆವಹಪ್ರವಹಾದಿ ಸಪ್ತಮಾರ್ಗಗಳೂ ನಿನ್ನಿಂದ ವ್ಯಾಪ್ತವಾಗಿವೆ.

**ಅತಸೀಪುಷ್ಪಸಙ್ಕಾಶಂ ಪೀತವಾಸಸಮಚ್ಯುತಮ್।**
**ಯೇ ನಮಸ್ಯನ್ತಿ ಗೋವಿನ್ದಂ ನ ತೇಷಾಂ ವಿದ್ಯತೇ ಭಯಮ್ ॥೯೦॥**

೯೦. ಕರಿ ಅಗಸೆಯ ಹೂವಿನಂತೆ ಮಿಂಚುತ್ತಿರುವ ಪೀತಾಂಬರಧಾರಿಯಾದ ಅಚ್ಯುತನಾದ ಗೋವಿಂದನಿಗೆ ಯಾರು ನಮಸ್ಕಾರಮಾಡುತ್ತಾರೋ ಅವರಿಗೆ ಯಾವ ಅಂಜಿಕೆಯೂ ಇಲ್ಲ.

**ಏಕೋऽಪಿ ಕೃಷ್ಣಸ್ಯ ಕೃತಃ ಪ್ರಣಾಮೋ**
**ದಶಾಶ್ವಮೇಧಾವಭೃಥೇನ ತುಲ್ಯಃ।**
**ದಶಾಶ್ವಮೇಧೀ ಪುನರೇತಿ ಜನ್ಮ**
**ಕೃಷ್ಣ ಪ್ರಣಾಮೀ ನ ಪುನರ್ಭವಾಯ ॥೯೧॥**

೯೧. ಕೃಷ್ಣನಿಗೆ ಮಾಡಿದ ಒಂದು ನಮಸ್ಕಾರವು ಕೂಡ ಹತ್ತು ಅಶ್ವಮೇಧಗಳನ್ನು ಮಾಡಿ ಮುಗಿಸಿದ್ದಕ್ಕೆ ಸಮಾನವಾಗಿರುತ್ತದೆ. ಆದರೆ ಒಂದು ವಿಶೇಷ: ಹತ್ತು ಅಶ್ವಮೇಧಗಳನ್ನು ಮಾಡಿದವನು ಮರಳಿ ಹುಟ್ಟುತ್ತಾನೆ; ಕೃಷ್ಣನನ್ನು ನಮಸ್ಕರಿಸಿದವನಿಗೆ ಮಾತ್ರ ಪುನರ್ಜನ್ಮವಿರುವದಿಲ್ಲ.

**ಕೃಷ್ಣವ್ರತಾಃ ಕೃಷ್ಣಮನುಸ್ಮರನ್ತೋ**
**ರಾತ್ರೌ ಚ ಕೃಷ್ಣಂ ಪುನರುತ್ಥಿತಾ ಯೇ।**
**ತೇ ಕೃಷ್ಣದೇಹಾಃ ಪ್ರವಿಶನ್ತಿ ಕೃಷ್ಣ-**
**ಮಾಜ್ಯಂ ಯಥಾ ಮನ್ತ್ರಹುತಂ ಹುತಾಶೇ ॥೯೨॥**

೯೨. ಯಾರು ಕೃಷ್ಣನಲ್ಲಿಯೇ ನಿಯಮದಿಂದ ಭಕ್ತಿಯುಳ್ಳವರಾಗಿ ಕೃಷ್ಣನನ್ನೇ ಅಡಿಗಡಿಗೂ ಸ್ಮರಿಸುತ್ತಾ ರಾತ್ರಿಯಲ್ಲಿಯೂ ಮತ್ತೆ ಎಚ್ಚತ್ತಮೇಲೂ ಕೃಷ್ಣನನ್ನೇ ಸ್ಮರಿಸುತ್ತಾ ಇರುವರೋ ಅವರು ಕೃಷ್ಣಸ್ವರೂಪವನ್ನೇ ಹೊಂದಿ, ಮಂತ್ರದಿಂದ ಹೋಮಮಾಡಿದ ತುಪ್ಪವು ಅಗ್ನಿಯಲ್ಲಿಯೇ ಸೇರಿಹೋಗುವಂತೆ, ಕೃಷ್ಣನನ್ನೇ ಸೇರಿಕೊಳ್ಳುವರು.

**ನಮೋ ನರಕಸನ್ತ್ರಾಸರಕ್ಷಾಮಣ್ಡಲಕಾರಿಣೇ।**
**ಸಂಸಾರನಿಮ್ನಗಾವರ್ತತರಿಕಾಷ್ಠಾಯ ವಿಷ್ಣವೇ ॥೯೩॥**

೯೩. ನರಕದ ಅಂಜಿಕೆಯಿಂದ ಕಾಪಾಡುವ ಮಂಡಲವೊಂದನ್ನು ಏರ್ಪಡಿಸುವವನೂ ಸಂಸಾರವೆಂಬ ನದಿಯ ಸುಳಿಯಿಂದ ದಾಟಿಸುವ ತೆಪ್ಪವಾಗಿರುವಾತನೂ ಆದ ವಿಷ್ಣುವಿಗೆ ನಮಸ್ಕಾರ!

**ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।**
**ಜಗದ್ಧಿತಾಯ ಕೃಷ್ಣಾಯ ಗೋವಿನ್ದಾಯ ನಮೋ ನಮಃ ॥೯೪॥**

೯೪. ಧಾರ್ಮಿಕಭಕ್ತರ ದೇವನೂ ಗೋಬ್ರಾಹ್ಮಣರಿಗೆ ಹಿತವನ್ನು ಮಾಡುವಾತನೂ ಜಗತ್ತಿಗೇ ಹಿತವನ್ನುಂಟುಮಾಡುವವನೂ ಆದ ಕೃಷ್ಣನಿಗೆ ನಮಸ್ಕಾರ! ಗೋವಿಂದನಿಗೆ ನಮಸ್ಕಾರ! ನಮಸ್ಕಾರ!

**ಪ್ರಾಣಕಾನ್ತಾರಪಾಥೇಯಂ ಸಂಸಾರೋಚ್ಛೇದಭೇಷಜಮ್ ।**
**ದುಃಖಶೋಕಪರಿತ್ರಾಣಂ ಹರಿರಿತ್ಯಕ್ಷರದ್ವಯಮ್ ॥೯೫॥**

೯೫. ಹರಿ ಎಂಬೀ ಎರಡಕ್ಷರವು ಪ್ರಾಣಗಳೆಂಬ ಕಾಡಿನಲ್ಲಿ ಬುತ್ತಿಯಾಗಿ, ಸಂಸಾರವೆಂಬ ರೋಗವನ್ನು ನಾಶಗೊಳಿಸಿರುವ ಔಷಧವಾಗಿ, ದುಃಖದಿಂದಲೂ ಶೋಕದಿಂದಲೂ ಕಾಪಾಡುವದಾಗಿರುವದು.

ಇಂದ್ರಿಯಗಳ ನಡುವೆ ಭೋಗಲಂಪಟನಾದ ಜೀವನು ಒಂದು ಕಗ್ಗಾಡಿನೊಳಗೆ ಹೊಕ್ಕವನಂತೆ ದಿಕ್ಕುಕಾಣದೆ ಬಳಲಿ ಬೆಂಡಾಗುತ್ತಿರುವನು. ಅವನು ಆಯಾಸಪಟ್ಟು ಕಂಗೆಟ್ಟಾಗ ಮತ್ತೆಮತ್ತೆ ಚೇತರಿಸಿಕೊಳ್ಳುವಂತೆ ಹುರುಪನ್ನು ಕೊಡಬಲ್ಲದ್ದು ಹರಿನಾಮವೊಂದೇ. ಅವನಿಗೆ ಬೇಕಾದದ್ದು ಸಿಕ್ಕದೆ, ಬೇಡವಾದದ್ದು ಗಂಟುಬಿದ್ದು ದುಃಖಶೋಕಗಳ ಉಪಟಳದಿಂದ ಅವನು ಸಂಕಟಪಡುತ್ತಿರುವಾಗ ಅವನಿಗೆ ನೆರವಾಗುವದೂ ಹರಿನಾಮವೇ. ಸಂಸಾರಬಂಧದಿಂದ ಬಿಡುಗಡೆಮಾಡಿ ಸ್ವಾಸ್ಥ್ಯವನ್ನು ಕೊಡುವದೂ ಹರಿನಾಮವೇ.

**ಯಥಾ ವಿಷ್ಣುಮಯಂ ಸತ್ಯಂ ಯಥಾ ವಿಷ್ಣುಮಯಂ ಜಗತ್ ।**
**ಯಥಾ ವಿಷ್ಣುಮಯಂ ಸರ್ವಂ ಪಾಪ್ಮಾ ಮೇ ನಶ್ಯತಾಂ ತಥಾ ॥೯೬॥**

೯೬. ಪರಮಾರ್ಥವು ವಿಷ್ಣುಸ್ವರೂಪವೇ ಆಗಿರುವದು ನಿಜವಾದರೆ, ಜಗತ್ತೆಲ್ಲವೂ ವಿಷ್ಣುಮಯವಾಗಿರುವದು ನಿಜವಾದರೆ ಸರ್ವವೂ ವಿಷ್ಣುಮಯವೇ ಆಗಿರುವದು ನಿಜವಾದರೆ, ನನ್ನ ಪಾಪವೆಲ್ಲವೂ ನಾಶವಾಗಲಿ.

`ನಿಜವಾದರೆ' ಎಂಬ ಮಾತು ಸಂಶಯವನ್ನೇನೂ ಹೇಳುವದಿಲ್ಲ; ಸರ್ವವೂ ವಿಷ್ಣುಮಯವೆಂಬ ಜ್ಞಾನದಿಂದ ಸಕಲಧರ್ಮಾಧರ್ಮಗಳ ಬಂಧವೂ ನಾಶವಾಗುವದೆಂದೇ ಶ್ಲೋಕದ ಅಭಿಪ್ರಾಯ.

**ತ್ವಾಂ ಪ್ರಪನ್ನಾಯ ಭಕ್ತಾಯ ಗತಿಮಿಷ್ಟಾಂ ಜಿಗೀಷವೇ ।**
**ಯಚ್ಛ್ರೇಯಃ ಪುಣ್ಡರೀಕಾಕ್ಷ ತದ್ಧ್ಯಾಯಸ್ವ ಸುರೋತ್ತಮ ॥೯೭॥**

೯೭. ಎಲೈ ಕಮಲನೇತ್ರವಾದ ದೇವೋತ್ತಮನೆ, ನಿನ್ನನ್ನು ಶರಣುಹೊಕ್ಕು ಇಷ್ಟವಾದ ಗತಿಯನ್ನು ಪಡೆದುಕೊಳ್ಳಬೇಕೆಂದು ಬಯಸುತ್ತಿರುವ ನನಗೆ ಶ್ರೇಯಸ್ಸಾದದ್ದು ಯಾವದೋ ಅದನ್ನು ನೀನೇ ಯೋಚಿಸು.

**ಇತಿ ವಿದ್ಯಾತಪೋಯೋನಿರಯೋನಿರ್ವಿಷ್ಣುರೀಡಿತಃ।**
**ವಾಗ್ಯಜ್ಞೇನಾರ್ಚಿತೋ ದೇವಃ ಪ್ರೀಯತಾಂ ಮೇ ಜನಾರ್ದನಃ ||೯೮||**

೯೮. ಈ ರೀತಿಯಲ್ಲಿ ವಿದ್ಯೆಗೂ ತಪಸ್ಸಿಗೂ ಕಾರಣನಾಗಿ ತನಗೊಂದು ಕಾರಣವೆಂಬುದಿಲ್ಲದೆ ಇರುವ ವಿಷ್ಣುವನ್ನು ಸ್ತೋತ್ರಮಾಡಿರುತ್ತೇನೆ. ಈ ವಾಗ್ಯಜ್ಞದಿಂದ ಅರ್ಚಿತನಾದ ದೇವನಾದ ಜನಾರ್ದನನು ನನ್ನಲ್ಲಿ ಪ್ರೀತನಾಗಲಿ!

ಪರಮಾತ್ಮನು ವಿದ್ಯೆಗೂ ತಪಸ್ಸಿಗೂ ವೀರ್ಯವನ್ನು ಕೊಡತಕ್ಕವನು; ಆತನಲ್ಲಿ ಸಕಲವಿದ್ಯೆಗಳೂ ತಪಸ್ಸೂ ನಿತ್ಯಸಿದ್ಧವಾಗಿರುತ್ತವೆ. ಆತನ ಸ್ವರೂಪವನ್ನು ನೆನೆಯುತ್ತಾ ಸ್ತೋತ್ರಮಾಡುವದು ಒಂದು ಬಗೆಯ ಯಜ್ಞವೇ ಆಗಿರುತ್ತದೆ. ಮತ್ತೊಂದು ಬಗೆಯಲ್ಲಿ ನೋಡಿದರೆ ವಿಹಿತಯಜ್ಞಕ್ಕಿಂತಲೂ ಜಪಯಜ್ಞವೇ ಮೇಲೆಂದು ಶಾಸ್ತ್ರದಲ್ಲಿ ಹೇಳಿರುವದರಿಂದ ಭಕ್ತಿಯಿಂದ ಮಾಡಿದ ಭಗವಂತನ ಸ್ತೋತ್ರಕ್ಕೆ ಬಹಳ ಹೆಚ್ಚಿನ ಬೆಲೆಯುಂಟು.

**ನಾರಾಯಣಃ ಪರಂ ಬ್ರಹ್ಮನಾರಾಯಣಪರಂ ತಪಃ।**
**ನಾರಾಯಣಃ ಪರೋ ದೇವಃ ಸರ್ವಂ ನಾರಾಯಣಃ ಸದಾ ||೯೯||**

೯೯. ನಾರಾಯಣನೇ ಪರಬ್ರಹ್ಮವು; ತಪಸ್ಸಿಗೆ ನಾರಾಯಣನೇ ಧ್ಯೇಯವು; ನಾರಾಯಣನೇ ಪರಮದೇವನು; ಎಲ್ಲವೂ ಯಾವಾಗಲೂ ನಾರಾಯಣನೇ ಆಗಿರುತ್ತದೆ.

## ಉಪಸಂಹಾರ

**ವೈಶಂಪಾಯನ ಉವಾಚ-**

**ಏತಾವದುಕ್ತ್ವಾ ವಚನಂ ಭೀಷ್ಮಸ್ತದ್ಗತಮಾನಸಃ।**
**ನಮ ಇತ್ಯೇವ ಕೃಷ್ಣಾಯ ಪ್ರಣಾಮಮಕರೋತ್ತದಾ ||೧೦೦||**

೧೦೦. ವೈಶಂಪಾಯನನಿಂತೆಂದನು: ಜನಮೇಜಯನೆ, ಭೀಷ್ಮನು ಆ ಕೃಷ್ಣನಲ್ಲಿಯೇ ಮನಸ್ಸಿಟ್ಟು ಇಷ್ಟುಮಾತ್ರ ಹೇಳಿದಬಳಿಕ 'ನಮಸ್ಕಾರ' ಎಂದು ಅವನಿಗೆ ನಮಸ್ಕಾರಮಾಡಿದನು.

**ಅಭಿಗಮ್ಯ ತು ಯೋಗೇನ ಭಕ್ತಿಂ ಭೀಷ್ಮಸ್ಯ ಮಾಧವಃ।**
**ತ್ರೈಲೋಕ್ಯದರ್ಶನಂ ಜ್ಞಾನಂ ದಿವ್ಯಂ ದತ್ತ್ವಾ ಯಯೌ ಹರಿಃ ||೧೦೧||**

೧೦೧. ಆಗ ಮಾಧವನಾದ ಹರಿಯು ಯೋಗದೃಷ್ಟಿಯಿಂದ ಭೀಷ್ಮನ ಭಕ್ತಿಯನ್ನರಿತುಕೊಂಡವನಾಗಿ ತನ್ನ ತ್ರೈಲೋಕ್ಯಮಯವಾದ ವಿಶ್ವರೂಪದ ದರ್ಶನವನ್ನೂ ದಿವ್ಯವಾದ ಜ್ಞಾನವನ್ನೂ ಕೊಟ್ಟು ಹೊರಟನು.

**ತಸ್ಮಿನ್ನುಪರತೇ ಶಬ್ದೇ ತತಸ್ತೇ ಬ್ರಹ್ಮವಾದಿನಃ।**
**ಭೀಷ್ಮಂ ವಾಗ್ಭಿರ್ಬಾಷ್ಪಕಣ್ಠಾಸ್ತಮಾನರ್ಚುರ್ಮಹಾಮತಿಮ್ ||೧೦೨||**

೧೦೨. ಆ ಸ್ತೋತ್ರದ ಸದ್ದು ನಿಲ್ಲಲು ಅಲ್ಲಿದ್ದ ಬ್ರಹ್ಮವಾದಿಗಳು ಮಹಾಮತಿಯಾದ ಭೀಷ್ಮನನ್ನು ಗದ್ಗದಕಂಠದಿಂದ ಕೊಂಡಾಡಿದರು.

**ತೇ ಸ್ತುವನ್ತಶ್ಚ ವಿಪ್ರಾಗ್ರ್ಯಾಃ ಕೇಶವಂ ಪುರುಷೋತ್ತಮಮ್ ।**
**ಭೀಷ್ಮಂ ಚ ಶನಕೈಃ ಸರ್ವೇ ಪ್ರಶಶಂಸುಃ ಪುನಃ ಪುನಃ ॥೧೦೩॥**

೧೦೩. ಆ ವಿಪ್ರಶ್ರೇಷ್ಠರೆಲ್ಲರೂ ಪುರುಷೋತ್ತಮನಾದ ಕೇಶವನನ್ನೂ ಭೀಷ್ಮನನ್ನೂ ಒಬ್ಬೊಬ್ಬರಾಗಿ ಹೊಗಳುತ್ತಾ ಮತ್ತೆ ಮತ್ತೆ ಕೊಂಡಾಡಿದರು.

**[*ಯಂ ಯೋಗಿನಃ ಪ್ರಾಣವಿಯೋಗಕಾಲೇ**
**ಯತ್ನೇನ ಚಿತ್ತೇ ವಿನಿವೇಶಯನ್ತಿ ।**
**ಸಾಕ್ಷಾತ್ ಪುರಸ್ತಾದ್ಧರಿಮೀಕ್ಷಮಾಣಃ**
**ಪ್ರಾಣಾನ್ ಜಹೌ ಪ್ರಾಪ್ತಕಾಲೋ ಹಿ ಭೀಷ್ಮಃ ॥೧॥**

೧. ಯೋಗಿಗಳು ಪ್ರಾಣವನ್ನು ಬಿಡುವ ಕಾಲದಲ್ಲಿ ಯಾವಾತನನ್ನು ಪ್ರಯತ್ನಪೂರ್ವಕವಾಗಿ ತಮ್ಮ ಚಿತ್ತದಲ್ಲಿ ಇಟ್ಟುಕೊಳ್ಳುವರೋ ಆ ಹರಿಯನ್ನು ಭೀಷ್ಮನು ಮರಣಕಾಲವು ಒದಗಲು ಸಾಕ್ಷಾತ್ತಾಗಿ ತನ್ನ ಎದುರಿಗೇ ನೋಡುತ್ತಾ ಪ್ರಾಣವನ್ನು ಬಿಟ್ಟನು.

**ಶುಕ್ಲಪಕ್ಷೇ ದಿವಾ ಭೂಮೌ ಗಙ್ಗಾಯಾಂ ಚೋತ್ತರಾಯಣೇ ।**
**ಧನ್ಯಾಸ್ತಾತ ಮರಿಷ್ಯನ್ತಿ ಹೃದಯಸ್ಥೇ ಜನಾರ್ದನೇ ॥೨॥**

೨. ಅಪ್ಪ, ಉತ್ತರಾಯಣ ಶುಕ್ಲಪಕ್ಷದಲ್ಲಿ, ಹಗಲುಹೊತ್ತಿನಲ್ಲಿ, ಭೂ ಲೋಕದಲ್ಲಿ, ಗಂಗೆಯ ದಡದಲ್ಲಿ, ಜನಾರ್ದನನನ್ನು ಹೃದಯದಲ್ಲಿ ಇಟ್ಟುಕೊಂಡು ಪ್ರಾಣವನ್ನು ಬಿಡುವವರೇ ಧನ್ಯರು.]

**ವಿದಿತ್ವಾ ಭಕ್ತಿಯೋಗಂ ತು ಭೀಷ್ಮಸ್ಯ ಪುರುಷೋತ್ತಮಃ ।**
**ಸಹಸೋತ್ಥಾಯ ಸಂಹೃಷ್ಟೋ ಯಾನಮೇವಾನ್ವಪದ್ಯತ ॥೧೦೪॥**

೧೦೪. ಆ ಪುರುಷೋತ್ತಮನು ಭೀಷ್ಮನ ಭಕ್ತಿಯೋಗವನ್ನರಿತು ಸಂತೋಷದಿಂದ ತಟ್ಟನೆ ಎದ್ದು ರಥವನ್ನೇರಿದನು.

**ಕೇಶವಃ ಸಾತ್ಯಕಿಶ್ಚಾಪಿ ರಥೇನೈಕೇನ ಜಗ್ಮತುಃ ।**
**ಅಪರೇಣ ಮಹಾತ್ಮಾನೌ ಯುಧಿಷ್ಠಿರಧನಞ್ಜಯೌ ॥೧೦೫॥**

೧೦೫. ಕೇಶವನೂ ಸಾತ್ಯಕಿಯೂ ಒಂದು ರಥದಲ್ಲಿ ಕುಳಿತುಕೊಂಡು ಹೋದರು; ಮಹಾತ್ಮರಾದ ಯುಧಿಷ್ಠಿರಾರ್ಜುನರಿಬ್ಬರೂ ಮತ್ತೊಂದರ ಮೇಲೆ ಹೋದರು.

* ಕಂಸದಲ್ಲಿರುವ ಎರಡು ಶ್ಲೋಕಗಳು ಸ್ತೋತ್ರಸಂಗ್ರಹದಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಭೀಮಸೇನೋ ಯಮೌ ಚೋಭೌ ರಥಮೇಕಂ ಸಮಾಶ್ರಿತಾಃ ।
ಕೃಪೋ ಯುಯುತ್ಸುಃ ಸೂತಶ್ಚ ಸಞ್ಜಯಶ್ಚಾಪರಂ ರಥಮ್ ॥೧೦೬॥

೧೦೬. ಭೀಮಸೇನನೂ ಅವಳಿಯಾದ ನಕುಲಸಹದೇವರಿಬ್ಬರೂ ಒಂದು ರಥವನ್ನು ಹತ್ತಿದರು. ಕೃಪನು, ಯುಯುತ್ಸು, ಸೂತನು ಮತ್ತು ಸಂಜಯನು - ಇವರು ಮತ್ತೊಂದು ರಥವನ್ನೇರಿದರು.

ತೇ ರಥೈರ್ನಗರಾಕಾರೈಃ ಪ್ರಯಾತಾಃ ಪುರುಷರ್ಷಭಾಃ ।
ನೇಮಿಘೋಷೇಣ ಮಹತಾ ಕಮ್ಪಯನ್ತೋ ವಸುನ್ಧರಾಮ್ ॥೧೦೭॥

೧೦೭. ಆ ಪುರುಷಶ್ರೇಷ್ಠರು ಆ ನಗರದಂತಿದ್ದ ರಥಗಳಲ್ಲಿ ಕುಳಿತು ಚಕ್ರದ ಶಬ್ದದ ದೊಡ್ಡ ಗದ್ದಲದಿಂದ ಭೂಮಿಯನ್ನೇ ನಡುಗಿಸುತ್ತಾ ಹೊರಟರು.

ತತೋ ಗಿರಃ ಪುರುಷವರಸ್ತವಾನ್ವಿತಾ
ದ್ವಿಜೇರಿತಾಃ ಪಥಿ ಸುಮನಾಃ ಸ ಶುಶ್ರುವೇ ।
ಕೃತಾಞ್ಜಲಿಂ ಪ್ರಣತಮಥಾಪರಂ ಜನಂ
ಸ ಕೇಶಿಹಾ ಮುದಿತಮನಾಭ್ಯನನ್ದತ ॥೧೦೮॥

೧೦೮. ಬಳಿಕ ಆ ಪುರುಷೋತ್ತಮನ ಸ್ತೋತ್ರದಿಂದ ಕೂಡಿದ ಬ್ರಾಹ್ಮಣರ ಮಾತುಗಳು ಆ ದೇವನಿಗೆ ದಾರಿಯಲ್ಲಿ ಕಿವಿಗೆ ಬೀಳುತ್ತಿದ್ದವು. ಮತ್ತೆ ಕೆಲವರು ಕೈಮುಗಿದುಕೊಂಡು ನಮಸ್ಕಾರಮಾಡುವದನ್ನು ಆ ಕೇಶಿನಿಷೂದನನು ಕಂಡು ಸಂತೋಷದಿಂದ ಅಭಿನಂದನೆಮಾಡುತ್ತಿದ್ದನು.

ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಮ್ ।
ಧರ್ಮಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವಪಾಪೈಃ ಪ್ರಮುಚ್ಯತೇ ॥೧॥

೧. ಆದ್ಯಂತರಹಿತನಾಗಿ, ಲೋಕಗಳೆಲ್ಲಕ್ಕೂ ಪರಮೇಶ್ವರನೆಂದೆನಿಸಿ ಧರ್ಮಕ್ಕೆ ಸಾಕ್ಷಿಯಾಗಿ ಫಲವನ್ನು ಕೊಡುವಾತನಾದ ವಿಷ್ಣುವನ್ನು ನಿತ್ಯವೂ ಸ್ತೋತ್ರಮಾಡುವಾತನು ಎಲ್ಲಾ ಪಾಪಗಳಿಂದಲೂ ಬಿಡುಗಡೆಹೊಂದುತ್ತಾನೆ.

ಇಮಂ ಸ್ತವಂ ಯಃ ಪಠತಿ ಶಾರ್ಙ್ಗಧನ್ವನಃ
ಶೃಣೋತಿ ವಾ ಭಕ್ತಿಸಮನ್ವಿತೋ ಜನಃ ।
ಸ ಚಕ್ರಧೃಕ್ಕೃತಿಹತಸರ್ವಕಲ್ಮಷೋ
ಜನಾರ್ದನಂ ಪ್ರವಿಶತಿ ದೇಹಸಙ್ಕ್ಷಯೇ ॥೨॥

೨. ಶಾರ್ಙ್ಗಧನುರ್ಧಾರಿಯಾದ ಶ್ರೀಕೃಷ್ಣನ ಈ ಸ್ತೋತ್ರವನ್ನು ಭಕ್ತಿಯಿಂದ ಯಾವನು ಹೇಳುತ್ತಾನೋ, ಅಥವಾ ಕೇಳುತ್ತಾನೋ, ಅವನು ಚಕ್ರಧಾರಿಯಾದ ವಿಷ್ಣುವಿನಿಂದ ಪಾಪಗಳನ್ನು ಪರಿಹರಿಸಿಕೊಂಡು ದೇಹವು ಗಳಿತವಾದಬಳಿಕ ಆ ಜನಾರ್ದನನನ್ನೇ ಸೇರುತ್ತಾನೆ.

**ಆಶನಿಶಿತಸುಧಾರಂ ಯಸ್ಯ ಚಕ್ರಂ ಸುಚಾರು**
**ಮಣಿಕನಕವಿಚಿತ್ರೇ ಕುಣ್ಡಲೇ ಯಸ್ಯ ಕರ್ಣೇ।**
**ಭ್ರಮರಶತಸಹಸ್ರೈಃ ಸೇವಿತಾ ಯಸ್ಯ ಮಾಲಾ**
**ಅಸುರಕುಲನಿಹನ್ತಾ ಪ್ರೀಯತಾಂ ವಾಸುದೇವಃ ॥೩॥**

೩. ಯಾವಾತನ ಕೈಯಲ್ಲಿ ವಜ್ರದಂತೆ ಹರಿತವಾದ ಅಲಗುಳ್ಳ ಮನೋಹರವಾದ ಚಕ್ರವಿರುವದೋ, ಯಾವಾತನ ಕಿವಿಗಳಲ್ಲಿ ರತ್ನದಿಂದ ಕೆತ್ತಿದ ಚಿನ್ನದ ಕುಂಡಲಗಳಿರುವವೋ, ಯಾವಾತನ ಕಂಠಮಾಲೆಯು ನೂರಾರು ತುಂಬಿಗಳಿಂದ ಸುತ್ತುವರೆಯಲ್ಪಟ್ಟಿರುವದೋ, ಅಸುರಕುಲನಾಶಕನಾದ ಆ ವಾಸುದೇವನು ಪ್ರೀತನಾಗಲಿ!

ಪರಮಭಾಗವತೋತ್ತಮರಾದ ಭೀಷ್ಮಾಚಾರ್ಯರು ಶ್ರೀಕೃಷ್ಣಭಗವಂತನನ್ನು ತಮ್ಮ ಮರಣಕಾಲದಲ್ಲಿಯೂ ಹೀಗೆ ಸ್ಮರಿಸಿ ಸ್ತೋತ್ರಮಾಡಿರುವದು ಅವರ ಜನ್ಮಜನ್ಮಾಂತರಗಳ ಕೃಷ್ಣಭಕ್ತಿಯ ಅಭ್ಯಾಸವನ್ನು ಎತ್ತಿ ತೋರಿಸುತ್ತದೆ. ಇಲ್ಲದಿದ್ದರೆ ಹೀಗೆ ಸ್ತುತಿಸುವದಾಗಲಾರದು. ಆದ್ದರಿಂದ ಮಾನವನು ಈಗಿನಿಂದಲೇ ಭಗವಂತನ ಸ್ತುತಿ, ಸ್ಮರಣಾದಿಗಳನ್ನು ಪ್ರಾರಂಭಿಸಬೇಕು. ಮೃತ್ಯುವು ಯಾವಾಗ ಸಂಭವಿಸುತ್ತದೆಂಬುದು ಯಾರಿಗೂ ತಿಳಿಯದು. ಆ ಕಾಲಕ್ಕೆ ಸ್ತೋತ್ರಮಾಡಿದರಾಯಿತೆಂಬ ಔದಾಸೀನ್ಯವು ಸರಿಯಲ್ಲ. ಮೊದಲಿನಿಂದಲೂ ಅಭ್ಯಾಸಮಾಡಿದರೆ ಮಾತ್ರ ಅಂತ್ಯಕಾಲದಲ್ಲೂ ಆ ಭಗವಂತನ ಸ್ಮೃತಿಯುಂಟಾಗಿ ಅದರ ಬಲದಿಂದ ಭಗವತ್ಪ್ರಾಪ್ತಿಯಾಗುವದು- ಎಂಬುದನ್ನು ಈ ಸಂದರ್ಭದಲ್ಲಿ ತಿಳಿಯಬೇಕಾಗಿದೆ.

**ಸ್ತವರಾಜಃ ಸಮಾಪ್ತೋಽಯಂ ವಿಷ್ಣೋರದ್ಭುತಕರ್ಮಣಃ।**
**ಗಾಙ್ಗೇಯೇನ ಪುರಾ ಗೀತೋ ಮಹಾಪಾತಕನಾಶನಃ ॥೪॥**

೪. ಗಂಗೆಯ ಮಗನಾದ ಭೀಷ್ಮನು ಪೂರ್ವದಲ್ಲಿ ಗಾನಮಾಡಿದ ಅದ್ಭುತ ಲೀಲೆಯ ವಿಷ್ಣುವಿನ, ಈ ಮಹಾಪಾಪಗಳನ್ನು ನಾಶಮಾಡುವ ಸ್ತವರಾಜವು ಮುಗಿಯಿತು.]*

**ಇತಿ ಶ್ರೀಮನ್ಮಹಾಭಾರತೇ ಶತಸಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ**
**ಶಾನ್ತಿಪರ್ವಣಿ ರಾಜಧರ್ಮೇ ಭೀಷ್ಮಸ್ತವರಾಜೋ ನಾಮ**
**ಸಪ್ತಚತ್ವಾರಿಂಶತ್ತಮೋಽಧ್ಯಾಯಃ**
**ಓಂ ತತ್ಸತ್**

*ಕಂಸದಲ್ಲಿರುವ ಭಾಗದ ನಾಲ್ಕು ಶ್ಲೋಕಗಳು ಸ್ತೋತ್ರಸಂಗ್ರಹಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

॥ಶ್ರೀ॥

# ಹರಿಶರಣಾಷ್ಟಕ

ಭಗವಂತನನ್ನು ಬಿಟ್ಟು ಹೊರಮುಖವಾಗಿಯೇ ಹರಿಯುತ್ತಿರುವ ಮನಸ್ಸಿನ ಪ್ರವಾಹವುಳ್ಳ ಜೀವರ ಮೇಲಣ ಕನಿಕರದಿಂದ, ಶ್ರೀ ಬ್ರಹ್ಮಾನಂದಪರಮಹಂಸ ಸ್ವಾಮಿಗಳವರು ಪರಮಾತ್ಮನನ್ನು ಶರಣುಹೊಗುವದೇ ಸಕಲಸತ್ಸಾಧನಗಳ ರಹಸ್ಯವೆಂಬುದನ್ನು ಬೋಧಿಸುವದಕ್ಕೆ 'ಹರಿಶರಣಾಷ್ಟಕ'ವೆಂಬ ಒಂದು ಚಿಕ್ಕ ಪ್ರಕರಣವನ್ನು ಅನುಗ್ರಹಿಸಿರುವರು. ಈ ಪ್ರಕರಣಕ್ಕೆ ಮಂಗಲರೂಪವಾಗಿಯೂ ಭಗವದ್ವಿಭೂತಿಯನ್ನು ವರ್ಣಿಸುವದಾಗಿಯೂ ಇರುವ ಮೊದಲನೆಯ ಶ್ಲೋಕವು ಯಾವದೆಂದರೆ :-

**ಧ್ಯೇಯಂ ವದನ್ತಿ ಶಿವಮೇವ ಹಿ ಕೇಚಿದನ್ಯೇ**
**ಶಕ್ತಿಂ ಗಣೇಶಮಪರೇ ತು ದಿವಾಕರಂ ವೈ ।**
**ರೂಪೈಸ್ತು ತೈರಪಿ ವಿಭಾಸಿ ಯತಸ್ತ್ವಮೇವ**
**ತಸ್ಮಾತ್ತ್ವಮೇವ ಶರಣಂ ಮಮ ಶಙ್ಖಪಾಣೇ ॥೧॥**

**ಅರ್ಥ** :- ಕೆಲವರು ಶಿವನನ್ನೇ ಧ್ಯಾನಿಸತಕ್ಕದ್ದೆನ್ನುವರು ; ಇನ್ನು ಕೆಲವರು ಶಕ್ತಿಯನ್ನು ಉಪಾಸನೆಮಾಡಬೇಕೆನ್ನುವರು ; ಮತ್ತೆ ಕೆಲವರು ಗಣೇಶನನ್ನು ಚಿಂತಿಸಬೇಕೆನ್ನುವರು ; ಮತ್ತೂ ಕೆಲವರು ಸೂರ್ಯನನ್ನು ಉಪಾಸನೆಮಾಡಬೇಕೆನ್ನುವರು. ಈ ಎಲ್ಲಾ ರೂಪಗಳಿಂದಲೂ ತೋರುವವನು ನೀನೇ ಆದ್ದರಿಂದ ಎಲೈ ಶಂಖಪಾಣಿಯಾದ ಹರಿಯೆ, ನೀನೇ ನನಗೆ ರಕ್ಷಕನು.

**ವಿಚಾರ** :- ಈ ಶ್ಲೋಕದಲ್ಲಿ ಭಕ್ತಿಯಲ್ಲಿರಬೇಕಾದ ಮನಃಸ್ಥಿತಿಯ ಪರಮರಹಸ್ಯವನ್ನು ಬೋಧಿಸಿರುತ್ತದೆ. ಭಕ್ತಿಯಲ್ಲಿ ಪರಭಕ್ತಿಯೆಂದೂ ಗೌಣಭಕ್ತಿಯೆಂದೂ ಎರಡು ವಿಧಗಳಿರುವವು. ಪರಮಾತ್ಮನ ಸ್ವರೂಪವನ್ನು ತಿಳಿದು ಆತನಲ್ಲಿ ಮಾಡುವ ಭಕ್ತಿಯು **ಪರಭಕ್ತಿ**ಯೆನಿಸುವದು. ಸರಿಯಾಗಿ ನೋಡಿದರೆ ಇದೇ ನಿಜವಾದ ಭಕ್ತಿ. **ಗೌಣಭಕ್ತಿ**ಯೆಂದರೆ ಈ ನಿಜವಾದ ಭಕ್ತಿಗೆ ಸೋಪಾನವಾದ ಸಾಧನಗಳನ್ನು ತಿಳಿಸುವ ಭಕ್ತಿ. ನಿಜವಾದ ಭಕ್ತಿಯ ಗುಣವು ಇದರಲ್ಲಿಯೂ ಇರುವದರಿಂದ ಇದನ್ನು ಗೌಣಭಕ್ತಿಯೆಂದು ಕರೆಯುವರು. ಗೌಣಭಕ್ತಿಯನ್ನು ಅನುಸರಿಸುವಾಗ ಜನರಿಗೆ ಹೆಚ್ಚಿನತರದ ನಿಜವಾದ ಭಕ್ತಿಯ ರಹಸ್ಯವು ಗೊತ್ತಿಲ್ಲದೆ ಇರುವದರಿಂದ ಅವರು ಅಡ್ಡಹಾದಿಯಲ್ಲಿ ಹೋಗುವ ಸಂಭವವಿರುವದು. ಅಂಥವರಿಗೆ ಎಚ್ಚರಿಕೆಕೊಡುವದೇ ಈ ಮೊದಲನೆಯ ಶ್ಲೋಕದ ಉದ್ದೇಶವು.

ಕೆಲವರು ಶಿವನನ್ನೇ ಧ್ಯಾನಿಸತಕ್ಕದ್ದೆನ್ನುವರು. ಇವರ ಅಭಿಪ್ರಾಯದಲ್ಲಿ ಶಿವನಿಗಿಂತ ಹೆಚ್ಚಾದ ಅಥವಾ ಶಿವನಿಗೆ ಸಮನಾದ ದೇವರೇ ಇಲ್ಲ. ಹರಿ ಮುಂತಾದವರೆಲ್ಲರೂ ಅವನ ಭಕ್ತರು. ಪರಮವೈರಾಗ್ಯದಿಂದ ಕೂಡಿದವನಾದ ಕಾರಣ ಶಿವನು ವಿಷ್ಣುವಿಗೆ ತನ್ನ ಸಕಲವಾದ ಐಶ್ವರ್ಯವನ್ನೂ ಕೊಟ್ಟು ತಾನು ಬೂದಿಯನ್ನೂ, ಚರ್ಮವನ್ನೂ, ಕಪಾಲವನ್ನೂ ಧರಿಸಿರುವನು.

ಸರ್ವರನ್ನೂ ಸಮವಾಗಿ ಕಾಣುವನಾಗಿ ಸರ್ವರಿಗೂ ಮೋಕ್ಷವೀಯುವ ಶಿವನಿಗಿಂತ ಹೆಚ್ಚಿನ ದೇವತೆ ಯಾವದೂ ಇಲ್ಲ. ಇವನು ದಯಾಮಯನು. ವಿಷವನ್ನು ಕೂಡ ಕುಡಿದು ಲೋಕಕ್ಕೊದಗಿದ ಕಷ್ಟವನ್ನು ನಿವಾರಣೆ ಮಾಡಿದವನು. ತನ್ನ ಹೆಂಡತಿಯಾದ ಗೌರಿ, ಮಗನಾದ ಗಣೇಶ್ವರ- ಇವರಿಂದ ಲೋಕಕ್ಕೆಲ್ಲ ಉಪಕಾರವನ್ನು ಮಾಡಿಸುತ್ತಿರುವನು. ಹೀಗೆಂಬುದು ಶೈವರ ಮತ.

ಇನ್ನು ಕೆಲವರು ಶಕ್ತಿಯ ಉಪಾಸಕರು. ಅವರು ಹೇಳುವದೇನೆಂದರೆ - ಶಕ್ತಿಯಿಲ್ಲದ ಶಿವನಿಂದಲೇನಾದೀತು? ಲೋಕದಲ್ಲಿ ಶಕ್ತಿಯಿಲ್ಲದ ಮನುಷ್ಯನು ಎಷ್ಟು ಅಮಂಗಲನಾಗಿರುವನು! ಆದ್ದರಿಂದ ಶಕ್ತಿಯಿಂದ ಕೂಡಿದ ಶಿವನೇ ಶಿವನು, ಇಲ್ಲದಿದ್ದರೆ ಅವನು ಶವವಾಗಿರುವನು. ದೇವಿಯು ಶಕ್ತಿಸ್ವರೂಪಳಾಗಿ ಇರುವದರಿಂದ 'ಸರ್ವಮಂಗಲೆ' ಎನಿಸಿರುವಳು. ಎಲ್ಲಾ ವಸ್ತುಗಳಲ್ಲಿಯೂ ಶಕ್ತಿಯು ವಿಶೇಷರೂಪದಿಂದ ಇದ್ದುಕೊಂಡಿರುವದರಿಂದ ಶಕ್ತಿಯೇ ಸರ್ವ ವ್ಯಾಪಕಳಾದ ದೇವತೆಯು. ಶಕ್ತಿಯು ಮಾಹೇಶ್ವರಿ, ವೈಷ್ಣವಿ, ಬ್ರಾಹ್ಮಿ - ಮುಂತಾದ ಅನೇಕ ಸಗುಣಾಕಾರಗಳನ್ನು ವಹಿಸಿ ಭಕ್ತರ ಉದ್ಧಾರವನ್ನೂ ದುಷ್ಟರ ನಿಗ್ರಹವನ್ನೂ ಮಾಡಿರುವಳು. ಲೋಕದಲ್ಲಿ ತಾಯಿಗೆ ಸಮನಾದ ಬಂಧುವಿಲ್ಲ, ಇದರಂತೆ ಶಕ್ತಿಗೆ ಸಮನಾದ ದೇವತೆಯಿರುವದಿಲ್ಲ. ಶಿವ, ವಿಷ್ಣು -ಮುಂತಾದವರೆಲ್ಲ ಈ ದೇವಿಯ ಉಪಾಸಕರು. ಹೀಗೆಂದು ಶಕ್ತ್ಯುಪಾಸಕರ ಮತವು.

ಮತ್ತೆ ಕೆಲವರು ಗಣೇಶನನ್ನು ಚಿಂತಿಸುತ್ತಿರಬೇಕೆನ್ನುವರು. ಗಣೇಶನು ಶಿವನಿಗೆ ಕೊಟ್ಟ ವರವನ್ನು ಪೂರ್ತಿಗೊಳಿಸುವದಕ್ಕಾಗಿ ಅವನ ಪುತ್ರನಾದನೇ ಹೊರತು ನಿಜವಾಗಿ ಇವನು ಯಾರ ಮಗನೂ ಅಲ್ಲ ; ಇವನು ಅನಾದ್ಯನಂತನು. ಶಿವ, ವಿಷ್ಣು, ಬ್ರಹ್ಮ - ಇವರೆಲ್ಲರೂ ತಮ್ಮ ತಮ್ಮ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವದಕ್ಕಾಗಿ ಗಣೇಶನನ್ನೇ ಪೂಜಿಸಿ ಕೃತಕೃತ್ಯರಾಗಿರುವರು. ಈಗಲೂ 'ಆದೌ ಪೂಜ್ಯೋ ಗಣಾಧಿಪಃ' (ಎಲ್ಲ ದೇವತೆಗಳಿಗಿಂತಲೂ ಮೊದಲು ಗಣೇಶನನ್ನು ಪೂಜಿಸಬೇಕು) -ಎಂಬ ವಾಕ್ಯವು ಎಲ್ಲರಿಗೂ ಸಮ್ಮತವಾಗಿರುವದು. ಆದ್ದರಿಂದ ಗಣೇಶನೇ ಸರ್ವೋತ್ತಮನಾದ ದೇವರು ಎಂದು ಗಾಣಾಪತ್ಯಮತವನ್ನು ವಹಿಸಿರುವವರ ಅಭಿಪ್ರಾಯವು.

ಮತ್ತೂ ಕೆಲವರು ಸೂರ್ಯನನ್ನು ಉಪಾಸನೆ ಮಾಡಬೇಕೆನ್ನುವರು. ಸೂರ್ಯನು ಜಗತ್ತಿಗೇ ಕಣ್ಣೆನಿಸಿರುವನು. ಶ್ರೀರಾಮಚಂದ್ರನು ಸೂರ್ಯನನ್ನು ಪೂಜಿಸಿದಮೇಲೆಯೇ ರಾವಣನನ್ನು ಗೆಲ್ಲುವದಕ್ಕಾಯಿತು. ಸೂರ್ಯನಿಲ್ಲದಿದ್ದರೆ ಜಗತ್ತೇ ಅಂಧಕಾರಮಯವಾಗಿರುವದು. ಸೂರ್ಯನು ಜಗತ್ತಿನ ವ್ಯಾಪಾರವೆಲ್ಲನಿಂತರೂ ತಾನುಮಾತ್ರ ಜನರಿಗಾಗಿ ಪ್ರಕಾಶಿಸುತ್ತಲೇ ಇರುವನು. ಜಗತ್ತೆಲ್ಲವೂ ಕಾಲಾಧೀನವಷ್ಟೆ; ಆ ಕಾಲವು ಸೂರ್ಯಾಧೀನವಾಗಿರುವದು. ಸೂರ್ಯನ ಅಧೀನವಾಗಿಯೇ ಜಗತ್ತಿನ ವ್ಯಾಪಾರವೆಲ್ಲವೂ ನಡೆಯುತ್ತಿರುವದರಿಂದ ಈತನಿಗೆ ಕರ್ಮಸಾಕ್ಷಿಯೆಂದು ಹೆಸರು. ವೇದದಲ್ಲಿ ಅತಿಮುಖ್ಯವಾಗಿರುವ ಗಾಯತ್ರಿಗೆ ಅಧಿದೇವತೆಯು ಸೂರ್ಯನು. ಸೂರ್ಯನಮಸ್ಕಾರದಿಂದ ಜನಗಳಿಗೆ ಕಾಮಿತಗಳೆಲ್ಲವೂ ಸಿದ್ಧಿಸುವವು. ಆದ್ದರಿಂದ ಸೂರ್ಯನೇ ದೇವೋತ್ತಮನೆಂದು ಸೂರ್ಯೋಪಾಸಕರ ಅಭಿಪ್ರಾಯ.

ಹೀಗೆಯೇ ಮಿಕ್ಕ ಆಯಾ ಉಪಾಸಕರು ತಮ್ಮತಮ್ಮ ಉಪಾಸ್ಯದೇವತೆಯು ಶ್ರೇಷ್ಠವಾದದ್ದೆಂದು ಹೇಳುತ್ತಿರುವರು. ಮಿಕ್ಕ ದೇವತೆಯು ನೀಚವೆಂದು ಅವರವರ ಅಭಿಪ್ರಾಯವಿರುವದು. ಭಕ್ತಿಗೆ ಏಕನಿಷ್ಠೆ ಇರಬೇಕಾದದ್ದು ಸರಿಯೆ; ಆದರೆ ಮತದ್ವೇಷವಿರುವದು ಎಂದಿಗೂ ಸರಿಯಾದದ್ದಲ್ಲ. ಪರಭಕ್ತಿಯ ಸ್ವರೂಪವನ್ನು ಅರಿಯದವರು ನಿಜವಾಗಿ ಅನೇಕ ದೇವರೇ ಇರುವರೆಂದೂ ಆ ದೇವರುಗಳಲ್ಲಿ ತಾನು ಉಪಾಸನೆಮಾಡುವ ದೇವನೇ ಸರ್ವಶ್ರೇಷ್ಠನೆಂದೂ ತಿಳಿಯುವರೇ ಹೊರತು ನಿಜವಾಗಿ ದೇವರು ಇಬ್ಬರು ಇರುವದು ಆಗಲಾರದೆಂಬ ತತ್ತ್ವವನ್ನು ಅರಿಯುವದಕ್ಕೆ ಮನಸ್ಸುಹಾಕುವದಿಲ್ಲ.

"ಇರುವದೊಂದೇ ತತ್ತ್ವವು, ವಿಪ್ರರು ಬಹುವಿಧವಾಗಿ ಅದನ್ನೇ ಕರೆಯುತ್ತಿರುವರು. ಇಂದ್ರ, ಮಿತ್ರ, ವರುಣ, ಅಗ್ನಿ, ಗರುತ್ಮಂತ, ಯಮ, ಮಾತರಿಶ್ವ - ಮುಂತಾಗಿ ಆ ದೇವನನ್ನೇ ಕರೆಯುವರು" ಎಂದು ವೇದವು ಸಾರುತ್ತಿರುವದು.

ಆದ್ದರಿಂದ ನಾವು ತಿಳಿಯಬೇಕಾದದ್ದೇನೆಂದರೆ, ಒಬ್ಬನೇ ಒಬ್ಬ ಪರಮಾತ್ಮನು ಶಿವ, ಶಕ್ತಿ, ಗಣೇಶ, ಸೂರ್ಯ, ವಿಷ್ಣು, ಬುದ್ಧ, ಸಿದ್ಧ, ಜಿನ- ಮೊದಲಾದ ರೂಪಗಳಿಂದ ಕಾಣಿಸಿಕೊಂಡು ಆಯಾ ಭಕ್ತರುಗಳಿಂದ ಸೇವಿತನಾಗಿ ಅವರವರ ಇಷ್ಟಾರ್ಥಗಳನ್ನು ಪರಿಪೂರ್ತಿಮಾಡುತ್ತಿರುವನು. ಆದ್ದರಿಂದ ನಾವು ಮತದ್ವೇಷವಿಲ್ಲದೆ ನಮನಮಗೆ ಇಷ್ಟವಾದ ಯಾವದಾದರೊಂದು ರೂಪವನ್ನು ಇಟ್ಟುಕೊಂಡು ಧ್ಯಾನಿಸಬೇಕು ; ಅಥವಾ ನಮಗೆ ರೂಪವೇ ಬೇಡವಾದರೆ ಪರಮಾತ್ಮನು ನೀರೂಪನೆಂದೇ ಧ್ಯಾನಿಸಬಹುದು. ಪರಮಾತ್ಮಪ್ರೇಮವೇ ನಮಗೆ ಸಂಸಾರತಾರಕವಾದೀತೇ ಹೊರತು ಮತದ್ವೇಷವು ಎಂದಿಗೂ ನಮ್ಮನ್ನು ಉದ್ಧಾರಮಾಡಲಾರದು.

ಈ ಪ್ರಕರಣದಲ್ಲಿ ಪರಮಾತ್ಮನನ್ನು 'ಶಙ್ಖಪಾಣೇ' ಎಂದು ಸಂಬೋಧಿಸಿರುತ್ತದೆ. ಇದರಲ್ಲಿ ಒಂದು ರಹಸ್ಯವುಂಟು. ಪರಮಾತ್ಮನು ಧ್ರುವನ ಕಂಠದ ಬಳಿಯಲ್ಲಿ ಈ ಶಂಖವನ್ನು ತಾಗಿಸಲು ಕೂಡಲೆ ಆ ಹುಡುಗನಿಗೆ ಜ್ಞಾನೋದಯವಾಗಿ ಅವನು ಪರಮಾತ್ಮನನ್ನು ವಿಧವಿಧವಾಗಿ ಸ್ತೋತ್ರಮಾಡಿದನೆಂದು ಭಾಗವತದಲ್ಲಿ ವರ್ಣಿತವಾಗಿರುವದು. ಆದ್ದರಿಂದ ವೇದಗಳನ್ನೆಲ್ಲ ಸ್ವಾಧೀನದಲ್ಲಿಟ್ಟುಕೊಂಡಿರುವ ಪರಮಾತ್ಮನೇ ನಮ್ಮ ಸ್ತೋತ್ರಕ್ಕೆ ವಿಷಯನೆಂದು ಗ್ರಂಥಕರ್ತೃಗಳ ಭಾವವಿರುವದು.

ಯಾವ ಪರಮಾತ್ಮನೊಬ್ಬನೇ ಶಿವ, ಶಕ್ತಿ, ಗಣಪತಿ, ಸೂರ್ಯ- ಎಂಬಿವೇ ಮೊದಲಾದ ವಿಭೂತಿಗಳ ರೂಪದಲ್ಲಿಯೂ ತೋರುತ್ತಿರುವನೋ ಅಂಥ ಪರಮಾತ್ಮನೇ ನಮಗೆ ಶರಣೆಂಬುದು ಮೇಲಿನ ಶ್ಲೋಕದ ಅಭಿಪ್ರಾಯವು.

**ನೋ ಸೋದರೋ ನ ಜನಕೋ ಜನನೀ ನ ಜಾಯಾ**
**ನೈವಾತ್ಮಜೋ ನ ಚ ಕುಲಂ ವಿಪುಲಂ ಬಲಂ ವಾ ।**
**ಸಂದೃಶ್ಯತೇ ಕಿಲ ನ ಕೋಽಪಿ ಸಹಾಯಕೋ ಮೇ**
**ತಸ್ಮಾತ್ತ್ವಮೇವ ಶರಣಂ ಮಮ ಶಙ್ಖಪಾಣೇ ॥೨॥**

ಅರ್ಥ :- ಅಣ್ಣತಮ್ಮಂದಿರಾಗಲಿ, ತಂದೆಯಾಗಲಿ, ತಾಯಿಯಾಗಲಿ, ಹೆಂಡತಿಯಾಗಲಿ, ಮಗನಾಗಲಿ, ಕುಲವಾಗಲಿ, ವಿಸ್ತಾರವಾದ ಸೈನ್ಯವಾಗಲಿ - ಇವುಗಳಲ್ಲಿ ಯಾವದೂ ನನಗೆ ಸಹಾಯವೆಂದು ತೋರಿಬರುವದಿಲ್ಲ. ಆದ್ದರಿಂದ ಎಲೈ ಶಂಖಪಾಣಿಯಾದ ಹರಿಯೆ, ನೀನೇ ನನಗೆ ರಕ್ಷಕನು.

ವಿಚಾರ :- ಭಗವದ್ಭಕ್ತಿಯಲ್ಲಿ ಏಕನಿಷ್ಠೆಯಿರಬೇಕು, ಆದರೆ ಮತದ್ವೇಷವಿರಬಾರದು - ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದ್ದಾಯಿತು. ಇಲ್ಲಿ ಪರಮಾತ್ಮನಲ್ಲಿ ಅನನ್ಯಭಕ್ತಿಯಿರಬೇಕು, ಮತ್ತೆ ಯಾವ ಲೌಕಿಕಾವಲಂಬನೆಯನ್ನೂ ಮುಖ್ಯವೆಂದು ಎಣಿಸಕೂಡದು - ಎಂಬುದನ್ನು ತಿಳಿಸುತ್ತಾರೆ.

ಲೋಕದಲ್ಲಿ ಜನರು ವಿಧವಿಧವಾದ ಆಲಂಬನೆಗಳನ್ನು ನಂಬಿ ಭಗವಂತನಿಂದ ವಿಮುಖರಾಗುವರು. ಕೆಲವರು ಅಣ್ಣತಮ್ಮಂದಿರು ನಮಗೆ ಸಹಾಯಕರಾಗುವರೆಂದು ತಿಳಿದಿರುವರು. ಇದು ಬರಿಯ ಭ್ರಮೆ. ಕೌರವನಿಗೆ ಅಷ್ಟೊಂದು ಜನ ತಮ್ಮಂದಿರಿದ್ದರು, ಅವರು ಎಷ್ಟು ಸಹಾಯಮಾಡಿದರು ? ಅವನಿಗೆ ದುರ್ಬೋಧನೆಯನ್ನು ಮಾಡುವದು ಮಾತ್ರ ಅವರಿಂದಾಯಿತು. ಪ್ರಹ್ಲಾದನು ಹುಟ್ಟುವಾಗಲೇ ಭಗವದ್ಭಕ್ತನಾಗಿ ಹುಟ್ಟಿದನು; ಹೀಗಿದ್ದರೂ ಅವನಿಗೆ ಅವನ ತಂದೆಯೇ ಭಕ್ತಿಗೆ ಅಡ್ಡಬಂದದ್ದು ನೋಡಿದರೆ, ತಂದೆಯೇ ನಮಗೆ ಹೆಚ್ಚಿನ ಆಲಂಬನೆಯೆಂಬುದನ್ನು ನೆಚ್ಚಬಹುದೆ ? ಸಾಕ್ಷಾತ್ತಾಗಿ ತನ್ನನ್ನು ಹಡೆದ ತಾಯಿ ಇದ್ದರೂ ತನ್ನ ಹಕ್ಕುದಾರಿಕೆಯಾದ ರಾಜಭೋಗಕ್ಕೆ ಧ್ರುವನಿಗೆ ಆಕೆಯಿಂದ ಯಾವ ಸಹಾಯವೂ ಆಗಲಿಲ್ಲ ; ಪರಮಾತ್ಮನೇ ಇಹಲೋಕದ ಮತ್ತು ಪರಲೋಕದ ಸುಖಕ್ಕೆ ಕಾರಣನಾದನು. ಹೀಗಿರುವಲ್ಲಿ ನಮಗೆ ತಾಯಿಯು ರಕ್ಷಕಳಾಗುವಳೆಂದು ಹೇಗೆ ನೆಚ್ಚುವದು ? ಮದುವೆಯಾಗಿ ತನ್ನನ್ನೇ ಹಿಂಬಾಲಿಸಿದ ಸೀತಾದೇವಿಯಿಂದ ಶ್ರೀರಾಮನೇ ವಿಧವಿಧವಾದ ಕಷ್ಟವನ್ನನುಭವಿಸಿದನೆಂದಮೇಲೆ, ಹೆಂಡತಿಯು ತನ್ನ ಸುಖಕ್ಕೆ ಆಗುವಳೆಂದು ಹೇಗೆ ನೆಚ್ಚಬೇಕು ? ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಾದರೂ ತನಗೆ ಕಷ್ಟಕಾಲಕ್ಕೆ ಆಗುವರೆನ್ನುವದಕ್ಕಿಲ್ಲ. ಏಕೆಂದರೆ ದೇವಕೀದೇವಿಗೆ ಶ್ರೀಕೃಷ್ಣನಿಗಿಂತ ಹಿಂದೆ ಹುಟ್ಟಿದ ಮಕ್ಕಳಂತೆ ಅವರು ಅಲ್ಪಾಯುಗಳಾದರೂ ಆಗಬಹುದು ; ಹುಟ್ಟಿದವರು ಯಯಾತಿಯ ಮಕ್ಕಳಂತೆ ಸ್ವಾರ್ಥಪರರಾಗಬಹುದು, ಅಥವಾ ಅಸಮಂಜನಂತೆ ಅವಿವೇಕಿಗಳಾಗಬಹುದು. ಆದ್ದರಿಂದ ಮಕ್ಕಳೂ ಸರಿಯಾದ ಆಶ್ರಯವಲ್ಲ. ಚತುರಂಗಸೈನ್ಯವನ್ನು ಹೆಚ್ಚಿಸಿಕೊಂಡು ಅದು ತನ್ನನ್ನು ಕಾಪಾಡುವದೆಂದು ಅನೇಕ ರಾಜರು ನೆನಸುವರು. ಆದರೆ ಚೆನ್ನಾಗಿ ಸಂಸ್ಕಾರವನ್ನು ಪಡೆದ ಶತ್ರುಸೈನ್ಯದ ಕೆಲವು ಜನವೇ ನಮ್ಮ ಎಷ್ಟೋ ಸೈನ್ಯವನ್ನು ನುಚ್ಚುನುರಿಮಾಡಿಬಿಡಬಹುದು. ಕೌರವನ ಬಳಿಯಲ್ಲಿ ಹನ್ನೊಂದಕ್ಷೋಹಿಣೀ ಸೈನ್ಯವಿದ್ದರೂ ಅವನಿಗೆ ಅಲ್ಪಸೈನ್ಯದಿಂದ ಕೂಡಿದ ಪಾಂಡವರಿಂದ ಅಪಜಯವಾಯಿತು. ಇದೂ ಅಲ್ಲದೆ ವಿನಾಶಕಾಲದಲ್ಲಿ ನಮ್ಮ ಸೈನಿಕರಿಗೆ ಕಾರಣಾಂತರದಿಂದ ಬಲವು ಕುಗ್ಗಬಹುದು. ರಾವಣನಿಗೆ ಇದ್ದ ಅಷ್ಟು ರಾಕ್ಷಸಬಲವೂ ಶ್ರೀರಾಮನಕಡೆಯ ಕಪಿಗಳಿಗೆ ಎದುರಾಗಲಾರದೆ ನಾಶವಾಯಿತು. ನಮ್ಮ ಸೈನ್ಯವು ಭೂಮಿಯಮೇಲೆ ಇರುವದಾದರೆ ಶತ್ರುಗಳ ಸೇನೆಯು ನೌಕಾಸೇನೆಯಾಗಿ ಪರಿಣಮಿಸಿ ನಮಗೆ ಅಪಜಯವಾಗಬಹುದು ; ನಾವು ನೌಕೆಯನ್ನಿಟ್ಟರೆ ಶತ್ರುಗಳು ವಿಮಾನಗಳಿಂದ

ಅಂತರಿಕ್ಷಮಾರ್ಗದಲ್ಲಿ ಬಂದು ನಮ್ಮನ್ನು ಗೆಲ್ಲಬಹುದು. ಇದೆಲ್ಲ ಹಾಗಿರಲಿ. ನಮ್ಮ ಆಯುಸ್ಸು ತೀರಿ ಯಮದೂತರು ಬರುವಾಗ ಯಾವ ಅಣ್ಣತಮ್ಮಂದಿರು, ಯಾವ ತಂದೆತಾಯಿಗಳು, ಯಾವ ಹೆಂಡತಿಮಕ್ಕಳು, ಯಾವ ಕುಲಬಲಗಳುತಾನೇ ನಮಗೆ ಸಹಾಯವಾದಾವು ? ಯಾರೂ ಆಗುವದಿಲ್ಲ. ಆದ್ದರಿಂದ ಇಂಥ ಆಲಂಬನೆಗಳಲ್ಲಿ ವಿಶೇಷವಾದ ಅಭಿಮಾನವನ್ನಿಡದೆ ಮುಖ್ಯವಾಗಿ ಪರಮಾತ್ಮನೊಬ್ಬನನ್ನೇ ಶರಣುಹೊಂದಬೇಕೆಂದು ತಾತ್ಪರ್ಯ.

**ನೋಪಾಸಿತಾ ಮದಮಪಾಸ್ಯ ಮುದಾ ಮಹಾನ್ತ-**
**ಸ್ತೀರ್ಥಾನಿ ಚಾಸ್ತಿಕಧಿಯಾ ನ ಹಿ ಸೇವಿತಾನಿ ।**
**ದೇವಾರ್ಚನಂ ಚ ವಿಧಿವನ್ನ ಕೃತಂ ಕದಾಪಿ**
**ತಸ್ಮಾತ್ತ್ವಮೇವ ಶರಣಂ ಮಮ ಶಙ್ಖಪಾಣೇ ॥೩॥**

ಅರ್ಥ : ಮದವನ್ನು ಬಿಟ್ಟುಕೊಟ್ಟು ದೊಡ್ಡವರನ್ನು ಸಂತೋಷದಿಂದ ಉಪಾಸನೆ ಮಾಡಲಿಲ್ಲ; ತೀರ್ಥಗಳನ್ನಾದರೂ ಆಸ್ತಿಕಬುದ್ಧಿಯಿಂದ ನಾನು ಸೇವಿಸಲಿಲ್ಲ ; ದೇವತಾರ್ಚನೆಯನ್ನೂ ವಿಧಿವತ್ತಾಗಿ ಮಾಡಲಿಲ್ಲ. ಆದ್ದರಿಂದ ಎಲೈ ಶಂಖಪಾಣಿಯಾದ ಹರಿಯೆ, ನೀನೇ ನನಗೆ ರಕ್ಷಕನು.

ವಿಚಾರ:- ಅಣ್ಣತಮ್ಮಂದಿರೇ ಮುಂತಾದವರಲ್ಲಿ ಹೆಚ್ಚಿನ ಅಭಿಮಾನವನ್ನಿಡುವದು ತಪ್ಪೆಂತಲೂ, ಪರಮೇಶ್ವರನನ್ನೇ ನಂಬಿ ನಡೆಯಬೇಕೆಂತಲೂ ಹಿಂದ ಹೇಳಿದ್ದಾಯಿತಷ್ಟೆ. ಪರಮೇಶ್ವರನ ಭಕ್ತಿಗೆ ಅಡ್ಡಿಯಾಗಿರುವ ಈ ಮಮಕಾರವನ್ನು ಹೋಗಲಾಡಿಸಿಕೊಳ್ಳುವ ಉಪಾಯವನ್ನು ಇಲ್ಲಿ ತಿಳಿಸುತ್ತಾರೆ.

ನನಗೆ ಬೇಕಾದ ಮನೆಮಠ, ನೆಂಟರಿಷ್ಟರು - ಮುಂತಾದವರು ಇದ್ದಾರೆಂದು ಹೆಮ್ಮೆಪಡುತ್ತಿರುವವನು ಯಾರಿಗೂ ಮಣಿಯುವದಿಲ್ಲ. ಇವನ ಕಣ್ಣಿಗೆ ದೊಡ್ಡವರೇ ಗೋಚರವಾಗುವದಿಲ್ಲ. ರಾಜಸೂಯಯಾಗದಲ್ಲಿ ಮುಖ್ಯಾರ್ಘ್ಯಕ್ಕೆ ಯಾರು ಪಾತ್ರರೆಂದು ವಿಚಾರಿಸಲಾಗಿ ದುರ್ಯೋಧನನಿಗೆ ಎಲ್ಲರಲ್ಲಿಯೂ ದೋಷವೇ ತೋರಿತೆಂತಲೂ, ಧರ್ಮರಾಯನಿಗೆ ಎಲ್ಲರಲ್ಲಿಯೂ ಗುಣವೇ ತೋರಿತೆಂತಲೂ, ಯಾರಿಗೆ ಅಗ್ರ ಪೂಜೆಯನ್ನು ಮಾಡಬೇಕೆಂಬುದು ಇಬ್ಬರಿಗೂ ತೋಚದೇ ಹೋಯಿತೆಂತಲೂ, ಹೇಳುವರು. ಧರ್ಮರಾಯನಿಗೆ ಅಷ್ಟೊಂದು ಜನ ಗುಣವಂತರು ಕಾಣುವದಕ್ಕೂ, ದುರ್ಯೋಧನನಿಗೆ ಅದೇ ಸಭೆಯಲ್ಲಿ ಒಬ್ಬರೂ ಗೋಚರವಾಗದಿದ್ದುದಕ್ಕೂ ಕಾರಣವೇನು ? ಕೌರವನಿಗೆ ಅಣ್ಣತಮ್ಮಂದಿರು, ತಂದೆತಾಯಿಗಳು, ಹೆಂಡಿರುಮಕ್ಕಳು, ಕುಲ, ಸೈನ್ಯ - ಮುಂತಾದ ಸಾಧನಸಂಪತ್ತು ತನಗೆ ಇರುವದೆಂಬ ಮದವಿತ್ತು. ಧರ್ಮರಾಯನು ಯಾವಾಗಲೂ ನಿರಭಿಮಾನಿಯಾಗಿ ದೊಡ್ಡವರನ್ನು ಸೇವಿಸುತ್ತಿದ್ದನು.

**'ಮಹತ್ಸಂಗಸ್ತು ದುರ್ಲಭೋಽಗಮ್ಯೋಽಮೋಘಶ್ಚ'** (ದೊಡ್ಡವರ ಸಂಗವು ಸಿಕ್ಕುವದು ಕಷ್ಟ, ಸಿಕ್ಕರೆ ಅದರ ಬೆಲೆಯನ್ನು ತಿಳಿಯುವದು ಕಷ್ಟ ; ಆದರೆ ಅದರ ಬೆಲೆಯು ಅಷ್ಟಿಷ್ಟೆಂದು

ಹೇಳಲಳವಲ್ಲ.) ಎಂದು ನಾರದಸೂತ್ರವಿರುವದು. ಭಕ್ತಿಯ ಪ್ರತಿಬಂಧಕದ ನಿವಾರಣೆಗೆ ಮಹತ್ಸಂಗವೇ ಮೊದಲನೆಯ ಉಪಾಯವು. ಅನೇಕರು ಮಹತ್ಸಂಗವನ್ನೂ ಮಾಡಿರಬಹುದು, ಆದರೆ ಸುಮ್ಮನೆ ದೊಡ್ಡವರ ಜತೆಯಲ್ಲಿ ಓಡಾಡಿದರಾಗಲಿಲ್ಲ, ತಾನೇ ದೊಡ್ಡವನೆಂಬ ಅಭಿಮಾನವನ್ನು ಬಿಟ್ಟು ಮಾಡಿದ ಸತ್ಸಂಗವೇ ಕಾರ್ಯಕಾರಿಯಾಗುವದು.

ಇಂಥ ಸಂಗವು ದೊರೆಯುವದಕ್ಕೆ ತೀರ್ಥಸೇವೆಯನ್ನು ಮಾಡಿರಬೇಕು. ಮಹಾತ್ಮರು ತೀರ್ಥಗಳಲ್ಲಿಯೂ ಕ್ಷೇತ್ರಗಳಲ್ಲಿಯೂ ವಾಸಮಾಡುತ್ತಿರುವರು. ಆದರೆ ನಿಂತಲ್ಲಿ ನಿಲ್ಲದೆ ಸುಮ್ಮನೆ ಪ್ರಪಂಚಪರ್ಯಟನೆ ಮಾಡುತ್ತಾ ಕಾಗೆ ಮುಳುಗಿದಂತೆ ನದಿಗಳಲ್ಲಿ ಮುಳುಗಿಬಂದರೆ ಮಹಾತ್ಮರ ಸಹವಾಸವು ದೊರೆಯಲಾರದು ; ಆಸ್ತಿಕ್ಯ ಬುದ್ಧಿಯಿಂದ ತೀರ್ಥಯಾತ್ರೆ ಮಾಡಬೇಕು. ಎಷ್ಟೋ ಜನರು ಮನೆಯಲ್ಲಿರುವ ಸಂಸಾರಯಾತನೆಗಳನ್ನು ತಡೆಯಲಾರದೆ ಕಾಶಿಗೆ ಹೊರಡುವರು, ಇನ್ನು ಕೆಲವರು ಜೀವನೋಪಾಯಗಳಿಲ್ಲದೆ ಯಾವದಾದರೊಂದು ತೀರ್ಥಕ್ಕೆ ಹೋಗಿ, ಅಲ್ಲಿಗೆ ಯಾತ್ರಿಕರನ್ನು ಕರೆತಂದು ಕಾಗೆಗಳ ಹಾಗೆ ಕಿತ್ತು ತಿನ್ನುವ ಪುರೋಹಿತರಾಗಿಯೋ ಅವರ ದಲ್ಲಾಳಿಗಳಾಗಿಯೋ ನೆಲಸುವರು. ಇಂಥವರು ಯಾರಿಗೂ ಮಹಾತ್ಮರ ಸಂಗವು ದೊರೆಯಲಾರದು. ಎಲ್ಲಿ ನೋಡಿದರೂ ದೇವಗಂಗೆಯೇ ತನಗೆ ಕಾಣುವ ಹಾಗೆ ಆಸ್ತಿಕ್ಯ ಬುದ್ಧಿಯನ್ನು ಸಂಪಾದಿಸಿಕೊಂಡು ತೀರ್ಥಯಾತ್ರೆ ಮಾಡುವವರು ಮಾತ್ರ ಸಾಧುಗಳನ್ನು ತೀರ್ಥಗಳಲ್ಲಿ ಕಾಣುವರು.

ಈ ಆಸ್ತಿಕ್ಯಬುದ್ಧಿಯು ಬರುವದಕ್ಕೆ ಏನು ಮಾಡಬೇಕು ? ಮೊದಲು ವಿಧಿವತ್ತಾಗಿ ದೇವತಾರ್ಚನೆಯನ್ನು ಮಾಡಿರಬೇಕು. ತಮ್ಮ ತಮ್ಮ ವರ್ಣಾಶ್ರಮಧರ್ಮಕ್ಕೆ ತಕ್ಕಂತೆ ವಿಗ್ರಹ, ಲಿಂಗ, ಸಾಲಿಗ್ರಾಮ - ಮುಂತಾದವುಗಳನ್ನು ಇಟ್ಟುಕೊಂಡು ಸಮಂತ್ರಕವಾಗಿಯೋ ಅಮಂತ್ರಕವಾಗಿಯೋ ಶ್ರದ್ಧೆಯಿಂದ ಅರ್ಚನೆ ಮಾಡಬೇಕು. ಅರ್ಚನೆಯು ಬಾಹ್ಯವೆಂದೂ ಅಂತರವೆಂದೂ ಎರಡು ಬಗೆ. ಹೊರಗೆ ಪ್ರತಿಮಾದಿಗಳನ್ನು ಇಟ್ಟುಕೊಂಡು ತನ್ನ ಕೈಲಾದ ಮಟ್ಟಿಗೆ ಹೂ, ಗಂಧ - ಮುಂತಾದವುಗಳನ್ನು ಒದಗಿಸಿಕೊಂಡು ಪೂಜಿಸುವದು ಬಾಹ್ಯಾರ್ಚನೆ. ಇದು ಚೆನ್ನಾಗಿ ಅಳವಟ್ಟಮೇಲೆ ಗುರುಗಳ ಉಪದೇಶದಿಂದ ಮನಸ್ಸಿನಲ್ಲಿಯೇ ಇಷ್ಟದೇವತೆಯನ್ನು ಆವಾಹನೆಮಾಡಿಕೊಂಡು ಪೂಜಿಸುವದು ಅಂತರವಾದ ಅರ್ಚನೆ. ಮನಸ್ಸು ಶುದ್ಧವಾದಹಾಗೆ ಈ ಅರ್ಚನೆಯೂ ಸೂಕ್ಷ್ಮತರವಾಗುತ್ತಾ ಹೋಗುವದು. ಇಂಥ ಅರ್ಚನೆಯಿಂದ ಆಸ್ತಿಕ್ಯ ಬುದ್ಧಿಯು ಒದಗಿರುವಂಥವರಿಗೆ ತೀರ್ಥಗಳಲ್ಲಿ ಆದರವು ಉಂಟಾಗುವದು ; ಅವರಿಗೆ ಮಹಾನುಭಾವರಾದ ಸಾಧುಗಳ ಸಂಗವೂ ದೊರೆಯುವದು. ವಿಗ್ರಹಗಳಲ್ಲಿಯೂ ತೀರ್ಥಗಳಲ್ಲಿಯೂ ಗುರುಗಳಲ್ಲಿಯೂ ಎಂಥ ಭಾವನೆಯಿರುವದೋ ಅಂಥ ಸಿದ್ಧಿಯಾಗುವದು - ಎಂದು ತಿಳಿದವರು ಹೇಳುವರು. ಆದ್ದರಿಂದ ಈ ಮೂರು ವಿಧವಾದ ಸಾಧನಗಳನ್ನೂ ಸಂಪಾದಿಸಿಕೊಳ್ಳಬೇಕೆಂಬುದು ಇಲ್ಲಿ ಆಶಯ.

**ದುರ್ವಾಸನಾ ಮಮ ಸದಾ ಪರಿಕರ್ಷಯನ್ತಿ**

**ಚಿತ್ತಂ ಶರೀರಮಪಿ ರೋಗಗಣಾ ದಹನ್ತಿ ।**

**ಮಜ್ಜೀವನಂ ಚ ಪರಹಸ್ತಗತಂ ಸದೈವ**

**ತಸ್ಮಾತ್ತ್ವಮೇವ ಶರಣಂ ಮಮ ಶಙ್ಖಪಾಣೇ ॥೪॥**

**ಅರ್ಥ** :- ನನ್ನ ಚಿತ್ತವನ್ನು ಯಾವಾಗಲೂ ಕೆಟ್ಟವಾಸನೆಗಳು ಎಳೆಯುತ್ತಿರುವವು. ಶರೀರವನ್ನು ರೋಗಗಳು ಗುಂಪುಗುಂಪಾಗಿ ಸುಡುತ್ತಿರುವವು. ನನ್ನ ಜೀವನವು ಯಾವಾಗಲೂ ಮತ್ತೊಬ್ಬರ ಕೈಯ್ಯಲ್ಲಿರುತ್ತಿರುವದು. ಆದುದರಿಂದ ಎಲೈ ಶಂಖಪಾಣಿಯಾದ ಹರಿಯೆ, ನನಗೆ ನೀನೇ ರಕ್ಷಕನು.

**ವಿಚಾರ** :- ಹಿಂದೆ ಹೇಳಿದಂತೆ ಸದ್ವಾಸನೆಗಳನ್ನು ಬೆಳೆಸಿಕೊಳ್ಳುವದಕ್ಕೆ ಅಡ್ಡವಾಗುವ ಪ್ರತಿಬಂಧಗಳು ಮೂರು ಬಗೆಯಾಗಿರುವವು : ಚಿತ್ತದಲ್ಲಿ ಕೆಟ್ಟ ವಾಸನೆಗಳಿರುವದು ; ದೇಹದಲ್ಲಿ ರೋಗಗಳಿರುವದು ; ಜೀವನವು ಮತ್ತೊಬ್ಬರ ಕೈಯಲ್ಲಿರುವದು. ಇವುಗಳನ್ನು ಮೊದಲು ಸರಿಪಡಿಸಿಕೊಳ್ಳಲು ಪ್ರಯತ್ನಮಾಡಬೇಕೆಂದು ಇಲ್ಲಿ ತಿಳಿಸುತ್ತಾರೆ.

ನಾವು ನಮ್ಮ ಮನಸ್ಸಿನಲ್ಲಿರುವ ಇಚ್ಛೆಯನ್ನನುಸರಿಸಿ ಕೆಲಸಮಾಡುತ್ತೇವೆ ; ಆ ಕೆಲಸದಂತೆ ಫಲವಾಗುತ್ತದೆ ; ಆ ಫಲದ ಭೋಗವಾದಮೇಲೆ ಅದೇ ಬಗೆಯ ಫಲವನ್ನನುಭವಿಸಬೇಕೆಂಬ ವಾಸನೆಯು ಮನಸ್ಸಿಗೆ ಅಂಟಿಕೊಳ್ಳುವದು. ಹೀಗೆ ವಾಸನೆ, ಇಚ್ಛೆ, ಕೃತಿ, ಫಲ, ಭೋಗ -ಇವುಗಳು ಚಕ್ರದಂತೆ ತಿರುತಿರುಗಿ ಬರುತ್ತಿರುವದರಿಂದ ಈ ಸಂಸಾರದ ರಾಟೆಗೆ ಜೀವರು ಸಿಕ್ಕಿ ತೊಳಲುತ್ತಿರುವರು. ಈ ರಾಟೆಗೆ ಬೇಸತ್ತು ಇದರಿಂದ ಪಾರಾಗಬೇಕೆನ್ನುವವರು ಮೊದಲು ವಾಸನೆಗಳನ್ನು ಸರಿಪಡಿಸಲು ಯತ್ನಿಸಬೇಕು. ತನ್ನಲ್ಲಿರುವ ದೇಹವಾಸನೆ, ಲೋಕವಾಸನೆ, ಶಾಸ್ತ್ರವಾಸನೆ - ಎಂಬ ಮೂರು ಬಗೆಯ ವಾಸನೆಗಳಲ್ಲಿಯೂ ಮಲಿನವಾಸನೆಯನ್ನು ಬೆಳೆಸದೆ ಶುದ್ಧವಾಸನೆಗೇ ಅವಕಾಶಕೊಡಬೇಕು. ದೇಹವು ಸಾತ್ತ್ವಿಕವಾದ ಆಹಾರದಿಂದ ಬೆಳೆಯುವಂತೆಯೂ ಉತ್ತಮವಾದ ಜನರ ಮೆಚ್ಚುಗೆಯು ತನಗೆ ಆಗುವಂತೆಯೂ ಸಚ್ಛಾಸ್ತ್ರಗಳಲ್ಲಿ ತನಗೆ ಆದರವು ಹೆಚ್ಚುವಂತೆಯೂ ಪ್ರಯತ್ನಮಾಡುತ್ತಿರಬೇಕು. ಹಾಗಿಲ್ಲದಿದ್ದರೆ ಕೆಟ್ಟವಾಸನೆಗಳು ಮನಸ್ಸನ್ನು ತಮ್ಮ ಕಡೆಗೆ ಜಗ್ಗಿ ಎಳೆದುಬಿಡುವವು.

ಮನಸ್ಸಿನ ಒಳ್ಳೆಯ ಸ್ಥಿತಿಗೆ ಶರೀರವು ಆರೋಗ್ಯವಾಗಿರುವದು ಬಹಳ ಅವಶ್ಯವು. ದೇಹವೇ ಧರ್ಮಕ್ಕೆ ಮೊದಲನೆಯ ಸಾಧನವೆಂದು ತಿಳಿದವರು ಹೇಳುವರು. ದೇಹಕ್ಕೂ ಮನಸ್ಸಿಗೂ ಇರುವ ನಿಕಟಸಂಬಂಧವು ಎಷ್ಟರಮಟ್ಟಿನದೆಂಬುದು ನಮಗೆ ರೋಗಗಳು ಬಂದಾಗ ಮಾತ್ರ ಗೊತ್ತಾಗುವದು. ಶರೀರದಲ್ಲಿ ರೋಗವಿರುವಾಗ ಯಾವ ವ್ಯವಹಾರವೂ ಬೇಡವಾಗುವದು. ಯಾವ ವಿನೋದವೂ ಬೇಡವಾಗುವದು. ಕೆಲವುವೇಳೆ ರೋಗಿಗಳು ಆತ್ಮಹತ್ಯೆಯನ್ನು ಕೂಡ ಮಾಡಿಕೊಳ್ಳಲೆಳೆಸುವರು. ಆದರೆ ಅವರು ಹಾಗೆ ಜನ್ಮವನ್ನು ನೀಗುವದು ವೈರಾಗ್ಯದಿಂದಲ್ಲ, 'ಈ ಜನ್ಮದಲ್ಲಿ ನಾನು ಪಡೆಯಬೇಕೆಂದಿದ್ದ ಸೌಕರ್ಯಗಳೂ ಸೌಖ್ಯಗಳೂ ನನಗೆ

ಒದಗಲಿಲ್ಲವಲ್ಲ'! ಎಂದು ಅವರು ಆತ್ಮಹತ್ಯೆಯನ್ನು ಮಾಡಿಕೊಳ್ಳುವರಾದ್ದರಿಂದ ಅವರಿಗೆ ದೇಹವಾಸನೆಯೂ ವಿಷಯಸುಖದ ವಾಸನೆಯೂ ಪ್ರಬಲವಾಗಿ ಆ ವಾಸನೆಯ ಪ್ರಭಾವದಿಂದ ಮತ್ತೊಂದು ಜನ್ಮವು ಸಿದ್ಧವಾಗಿ ಇಂಥ ಸುಖದುಃಖಗಳನ್ನೇ ಮತ್ತೆಮತ್ತೆ ಅನುಭವಿಸುವಂತೆ ಪ್ರವೃತ್ತಿಯಾಗುವದು. ಆದ್ದರಿಂದ ದೇಹವು ಆರೋಗ್ಯವಾಗಿದ್ದು ಧರ್ಮಸಾಧನೆಗೆ ಅನುಕೂಲವಾಗುವಂತೆ ಅವಶ್ಯವಾಗಿ ಪ್ರಯತ್ನಮಾಡಬೇಕು.

ದೇಹವು ಹೀಗೆ ಆರೋಗ್ಯವಾಗಿರುವದಕ್ಕೆ ಬೇಕಾದಷ್ಟು ವಿಷಯಸಾಮಗ್ರಿ ಇರಬೇಕೆಂದು ನೆನೆಸಿ ಜನರು ಇವುಗಳ ಸಂಪಾದನೆಗೆಂದು ಕಂಡಕಂಡವರ ಕಾಲು ಕಟ್ಟುವರು. ದಾಸ್ಯವೃತ್ತಿಯಿಂದ ಜೀವನಮಾಡುವವನಿಗೆ ದೇಹವು ಸರಿಯಾಗಿರುವದೆಂದರೇನು ? ಇವನ ಚಿತ್ತವೃತ್ತಿಗೆ ಸ್ವಾತಂತ್ರ್ಯವೆಲ್ಲಿಂದ ಬಂತು ? ಬಾಲವನ್ನು ಅಲ್ಲಾಡಿಸುತ್ತಾ ಯಜಮಾನನ ಮುಖವನ್ನೇ ನೋಡಿಕೊಂಡು ಹೊಟ್ಟೆಹೊರೆದುಕೊಳ್ಳುವ ನಾಯಿಯಂತೆ ಮತ್ತೊಬ್ಬರ ಅಧೀನದಲ್ಲಿ ತನ್ನ ಜೀವನವನ್ನು ನಡೆಸಿಕೊಳ್ಳುವಾತನಿಗೆ ಕೇವಲ ಪಶುಸಮಾನವಾದ ವೃತ್ತಿಯೊಂದೇ ಸಿದ್ಧವಾಗುವದು. ಪರವಶವಾದದ್ದೆಲ್ಲ ದುಃಖವು, ತನ್ನ ಸ್ವಾತಂತ್ರ್ಯಕ್ಕೆ ಕಾರಣವಾಗಿರುವದೆಲ್ಲ ಸುಖವು. ಆದ್ದರಿಂದ ಗೆಡ್ಡೆಗೆಣಸುಗಳನ್ನು ತಿಂದು ಜೀವಿಸಿದರೂ ಚಿಂತೆಯಿಲ್ಲ, ಸ್ವತಂತ್ರಜೀವನವನ್ನು ಮಾಡಿಕೊಳ್ಳಬೇಕು. ಇದರಿಂದ ದೇಹಾರೋಗ್ಯವನ್ನು ಕಾಪಾಡಿಕೊಂಡು ಸದ್ವಾಸನೆಯನ್ನೇ ಬೆಳಸಿಕೊಳ್ಳುತ್ತಿರಬೇಕು. ಇದೇ ಸದ್ಗತಿಗೆ ಸಾಧನವೆಂದು ತಾತ್ಪರ್ಯವು.

**ಪೂರ್ವಂ ಕೃತಾನಿ ದುರಿತಾನಿ ಮಯಾ ತು ಯಾನಿ**
**ಸ್ಮೃತ್ವಾಽಖಿಲಾನಿ ಹೃದಯಂ ಪರಿಕಮ್ಪತೇ ಮೇ ।**
**ಖ್ಯಾತಾ ಚ ತೇ ಪತಿತಪಾವನತಾ ತು ಯಸ್ಮಾತ್**
**ತಸ್ಮಾತ್ತ್ವಮೇವ ಶರಣಂ ಮಮ ಶಙ್ಖಪಾಣೇ ॥೫॥**

ಅರ್ಥ:- ನಾನು ಹಿಂದೆ ಮಾಡಿರುವ ಪಾಪಗಳನ್ನು ನೆನೆಸಿಕೊಂಡರೆ ನನ್ನ ಎದೆ ನಡಗುವದು. ಆದರೆ ನೀನು ಪತಿತಪಾವನನೆಂದು ಪ್ರಸಿದ್ಧನಾಗಿರುವದರಿಂದ ಎಲೈ ಶಂಖಪಾಣಿಯಾದ ಹರಿಯೆ, ನೀನೇ ನನಗೆ ಶರಣನು.

**ವಿಚಾರ :-** ಪ್ರಾರಬ್ಧಕರ್ಮವನ್ನು ಯಾರಿಗೂ ಮೀರಲಳವಲ್ಲವೆಂದೂ ಅನೇಕಜನ್ಮಗಳಿಂದ ರಾಶಿಹಾಕಿರುವ ಪಾಪಗಳನ್ನು ಈಗ ಒಂದು ಪ್ರಯತ್ನದಿಂದ ಕಳೆದುಕೊಳ್ಳುವದು ಆಗಲಾರದೆಂದೂ ಕೆಲವರು ಎಣಿಸುವರು. ಆದರೆ ಇದು ಸರಿಯಲ್ಲ. ಹಿಂದಿನ ಎಷ್ಟೇ ಪಾಪಗಳಿದ್ದರೂ ಭಗವದ್ಭಕ್ತಿಯಿಂದ ಅವೆಲ್ಲ ಭಸ್ಮವಾಗಿಬಿಡುವವು - ಎಂದು ಇಲ್ಲಿ ಹೇಳಿರುತ್ತದೆ.

**ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।**
**ಸಾಧುರೇವ ಸ ಮನ್ತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥**

ಎಷ್ಟೇ ಕೆಟ್ಟ ಆಚರಣೆಯವನಾಗಲಿ, ಅನನ್ಯಭಕ್ತಿಯಿಂದ ನನ್ನನ್ನು ಭಜಿಸಿದರಾಯಿತು, ಅವನನ್ನು ಸಾಧುವೆಂದೇ ತಿಳಿಯಬೇಕು ; ಏಕೆಂದರೆ ಅವನು ಉತ್ತಮಕಾರ್ಯವನ್ನು ಮಾಡಲು ನಿಶ್ಚಯಮಾಡಿರುವನು ಎಂದು ಭಗವಂತನೇ ಅಪ್ಪಣೆಕೊಟ್ಟಿರುತ್ತಾನೆ.

"ಹೀಗೆ ನಿಶ್ಚಯಮಾಡುವದಾದರೂ ಪ್ರಾರಬ್ಧಾಧೀನವಲ್ಲವೆ? ನಮ್ಮ ಸ್ವಾತಂತ್ರ್ಯವೆಲ್ಲಿಬಂತು?" ಎಂದು ಕೆಲವರು ಕೇಳುವರು. ಮತ್ತೆ ಕೆಲವರು ಎಲ್ಲಕ್ಕೂ ಪರಮೇಶ್ವರನ ಪ್ರೇರಣೆಯೇ ಕಾರಣವು. ಆದ್ದರಿಂದ ಸರಿಯಾದ ಭಕ್ತಿಯನ್ನು ಮಾಡುವದಕ್ಕೂ ಆತನೇ ಕಾರಣ. ನಾವು ಸ್ವತಂತ್ರವಾಗಿ ಪ್ರಯತ್ನಮಾಡುವದೆಲ್ಲಿಬಂತು? ಎನ್ನುವರು. ಇವೆರಡು ಪಕ್ಷವೂ ಸರಿಯಲ್ಲ. ಪ್ರಾರಬ್ಧವೆಂದರೆ ನಾವು ಹಿಂದೆ ಮಾಡಿದ ಕರ್ಮದಲ್ಲಿ ಈಗ ಫಲವನ್ನು ಕೊಟ್ಟಿರುವ ಭಾಗವು. ಇದಕ್ಕೆ ಫಲವನ್ನು ಕೊಡುವಷ್ಟು ಶಕ್ತಿಯಿದೆಯೇ ಹೊರತು ಹೊಸ ಕರ್ಮವನ್ನು ಮಾಡದಂತೆಯೂ ಅಡ್ಡಿಮಾಡುವಷ್ಟು ಶಕ್ತಿಯಿಲ್ಲ. ಒಂದು ಬಲವಾದ ಬಾಣವನ್ನು ಬಿಟ್ಟವನು ಸುಮ್ಮನೆ ಕುಳಿತಿದ್ದರೆ ಆ ಬಾಣವು ತನ್ನ ಗುರಿಯನ್ನು ಹೊಡೆದೇಬಿಡುವದು ; ಆದರೆ ತನ್ನ ಕೈಚಳಕದಿಂದ ಅದಕ್ಕಿಂತಲೂ ಇನ್ನೂ ವೇಗವಾದ ಬಾಣವನ್ನು ಬಿಟ್ಟು ಅದನ್ನು ಮಧ್ಯಮಾರ್ಗದಲ್ಲಿಯೇ ತುಂಡು ಮಾಡಿಯೂಬಿಡಬಹುದು. ಹೀಗೆಯೇ ಪ್ರಾರಬ್ಧಕರ್ಮವನ್ನು ಈ ಜನ್ಮದ ಪ್ರಬಲವಾದ ಸಾಧನಗಳಿಂದ ಗೆಲ್ಲುವದೂ ಅಸಾಧ್ಯವಲ್ಲ. ಇನ್ನು ಎರಡನೆಯ ಪಕ್ಷವನ್ನು ವಿಚಾರಮಾಡೋಣ. ಪರಮೇಶ್ವರನು ಸರ್ವಾಂತರ್ಯಾಮಿಯೆಂಬುದೂ ಆದ್ದರಿಂದ ನಮ್ಮ ಕರ್ಮಗಳಿಗೆಲ್ಲ ಆತನೇ ಪ್ರೇರಕನೆಂಬುದೂ ಸರಿಯೆ ; ಆದರೆ ನಾನು ಮಾಡುತ್ತೇನೆ ಎಂಬ ಅಹಂಕಾರವನ್ನಿಟ್ಟುಕೊಂಡಿರುವ ಜೀವನಿಗೆ ಬೇರೆ ಕರ್ತೃತ್ವವು ಇರುವದು. ಈಶ್ವರನು ಮಾಡಿಸುವನು, ಜೀವನು ಮಾಡುವವನು. ಶಿಷ್ಯನು ಕಲಿತರೆ ಗುರುವು ಕಲಿಸುತ್ತಾನೆಂಬುದು. ಹೇಗೋ ಹಾಗೆ ಪ್ರೇರಣೆಯಲ್ಲಿ ಮಾತ್ರ ಭಗವಂತನ ವ್ಯಾಪಾರವೇ ಹೊರತು ಕಾರ್ಯಗಳಿಗೂ ಅವನು ಹೊಣೆಗಾರನಲ್ಲ. ಆದ್ದರಿಂದಲೇ ಪುಣ್ಯಪಾಪಗಳಿಗೆ ಜೀವನೇ ಹೊಣೆಯಾಗಿರುವನು. ನಾವು ಕಾರ್ಯಗಳಿಗೆ ಗೊತ್ತುಗಾರರೆಂಬ ಬುದ್ಧಿಯನ್ನು ಒಳಗೆ ಇಟ್ಟುಕೊಂಡು ಇರುವವರೆಗೆ ಪ್ರಯತ್ನವು ನಮ್ಮಕಡೆಗೆ ಇರುವದು, ಇದನ್ನು ನೆರವೇರಿಸುವದು ಭಗವಂತನಕಡೆಗೆ ಇರುವದು. "ನಾವು ಮಾಡುವದಿಲ್ಲ, ಪರಮಾತ್ಮನೇ ಎಲ್ಲವನ್ನೂ ಮಾಡಿಸುವನು, ಎಲ್ಲಕ್ಕೂ ಕರ್ತನು" ಎಂಬ ಬುದ್ಧಿಯಿಂದ ಸಕಲವಿಧವಾಗಿಯೂ ಎಂದಿಗೂ ಆ ದೇವನಲ್ಲಿಯೇ ಭರನ್ಯಾಸವನ್ನು ಯಾವಾಗ ಮಾಡುವೆವೋ ಆಗ ನಮ್ಮ ಅಹಂಕಾರವೆಲ್ಲವೂ ಹೋಗಿಬಿಡುವದು. ಅಹಂಕಾರವು ಹೋದಾಗ ಭಗವಂತನು ನಮ್ಮ ಎಲ್ಲಾ ಭಾರವನ್ನೂ ವಹಿಸಿ ನಮ್ಮ ಕಾರ್ಯಗಳನ್ನೂ ತಾನೇ ಮಾಡಿಸಿಕೊಡುವನೆಂಬುದರಲ್ಲೇನು ವಿಶೇಷ?

**ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।**
**ಹತ್ವಾಪಿ ಸ ಇಮಾನ್ ಲೋಕಾನ್ ನ ಹನ್ತಿ ನ ನಿಬಧ್ಯತೇ ॥**

(ಯಾವನಿಗೆ ಅಹಂಕಾರದಿಂದ ಕೂಡಿದ ಮನಸ್ಸಿಲ್ಲವೋ ಯಾವನ ಬುದ್ಧಿಯಲ್ಲಿ ಕರ್ಮದ ಲೇಪವೇ ಇಲ್ಲವೋ ಆತನು ಈ ಲೋಕಗಳನ್ನೇ ಕೊಂದರೂ ಕೊಂದಂತೆ ಅಲ್ಲ, ಅವನಿಗೆ ಬಂಧವೂ ಇಲ್ಲ.) ನಿಜವಾಗಿ ಅಹಂಕಾರವನ್ನು ಬಿಟ್ಟ ಭಕ್ತರಿಗೂ ಭಗವಂತನಿಗೂ ಭೇದವೇ ಇರುವದಿಲ್ಲ.

ಕೆಲವರು ನಾವು ಯಾವ ಪಾಪವನ್ನೂ ಮಾಡಿಯೇ ಇಲ್ಲ. ನಾವೇಕೆ ಭಗವಂತನನ್ನು ಶರಣುಹೊಗಬೇಕು ? ಎಂದು ಯೋಚಿಸಬಹುದು. ಆದರೆ ಸ್ವಲ್ಪ ಯೋಚಿಸಿದಮಾತ್ರಕ್ಕೇ ಇದು ಎಷ್ಟರಮಟ್ಟಿಗೆ ಸರಿಯೆಂಬುದು ಗೊತ್ತಾಗುವದು. ಎಂಥ ಮಹಾತ್ಮರಲ್ಲಾದರೂ ಸೂಕ್ಷ್ಮವಾದ ಅಪರಾಧಗಳಿರುವವು ; ಅವಿವೇಕದಿಂದಲೂ ಹೆಮ್ಮೆಯಿಂದಲೂ ಮೆರೆಯುವ ನಮ್ಮಂಥವರ ಪಾಡೇನು ? ನಿಜವಾಗಿ ನೋಡಿದರೆ ಈ ಲೋಕದಲ್ಲಿ ಜನ್ಮವನ್ನು ತೆಗೆದುಕೊಡಿರುವದೇ ಪಾಪಕ್ಕೆ ಗುರುತಾಗಿರುವದು. ಪುಣ್ಯದಿಂದ ದೇವಜನ್ಮವು ಬರುವದೆಂತಲೂ ಪಾಪದಿಂದ ಸ್ಥಾವರಜನ್ಮವು ಬರುವದೆಂತಲೂ ಪುಣ್ಯಪಾಪಗಳ ಮಿಶ್ರಣದಿಂದಲೇ ಮನುಷ್ಯಜನ್ಮವು ಬರುವದೆಂತಲೂ ಸ್ಮೃತಿಗಳು ಸಾರುತ್ತಿರುವವು. ಆದ್ದರಿಂದ ನಾವು ಪಾಪವನ್ನೇ ಮಾಡಿಲ್ಲವೆಂದು ಯಾರೂ ತಿಳಿಯಬಾರದು.

ಆದರೆ 'ಹೇಗೂ ಪಾಪವನ್ನು ಮಾಡಿಬಿಟ್ಟೆವಲ್ಲ, ಇನ್ನು ನಾವು ಹೇಗಿದ್ದರೇನು?' ಎಂದು ನಿರಾಶರಾಗಿ ಸ್ವೇಚ್ಛಾಪ್ರವೃತ್ತಿಗೆ ಬೀಳಬಾರದು. ನಾವು ಎಷ್ಟು ಪಾಪಮಾಡಿದರೇನು? ಪತಿತರನ್ನು ಉದ್ಧಾರಮಾಡುವವನೆಂಬುದು ಭಗವಂತನ ಬಿರುದು. ಅಜಮಿಳನು ತನ್ನ ಬ್ರಾಹ್ಮಣಜಾತಿಯ ಕರ್ಮಗಳನ್ನೆಲ್ಲ ತೊರೆದು ಶೂದ್ರಸ್ತ್ರೀಯನ್ನು ಹೊಂದಿ, ನಿಷಿದ್ಧಕರ್ಮಗಳನ್ನು ಮಾಡಿದರೂ ವ್ಯಾಜಾಂತರದಿಂದ ಮಗನನ್ನು ಸ್ಮರಿಸಿಕೊಂಡಮಾತ್ರದಿಂದ ನಾರಾಯಣನಾಮೋಚ್ಚಾರಣೆಯನ್ನು ಮಾಡಿದವನೆಂದು ಕರುಣದಿಂದ ಆತನಿಗೆ ಯಮದೂತರ ಬಾಧೆಯನ್ನು ತಪ್ಪಿಸಿ ವಿಷ್ಣುದೂತರು ದರ್ಶನವನ್ನು ಕೊಟ್ಟು ಭಗವದ್ಭಕ್ತಿಯ ಸೌಲಭ್ಯವನ್ನೂ ಅದರಿಂದಾಗುವ ಮಹತ್ಫಲವನ್ನೂ ಮನಗಾಣಿಸಿ ಉದ್ಧಾರಮಾಡಲಿಲ್ಲವೆ ? ಹೀಗೆಯೇ ಎಷ್ಟೋಜನ ನೀಚರು ತಾವು ಹಿಂದೆ ಮಾಡಿದ ಪಾಪಗಳನ್ನು ನೆನೆಸಿಕೊಂಡು ಪಶ್ಚಾತ್ತಾಪದಿಂದ ಭಗವಂತನನ್ನು ಶರಣುಹೊಕ್ಕು ಉದ್ಧಾರವಾದದ್ದಲ್ಲದೆ, ಮುಂದೆ ತಾವೇ ಇತರರಿಗೆ ಉತ್ತಮವಾದ ಮಾರ್ಗವನ್ನು ತಿಳಿಸಿಕೊಡುವ ವಾಲ್ಮೀಕರಂಥ ಋಷಿಗಳಾದರೆಂದು ಪುರಾಣೇತಿಹಾಸಗಳು ಹೇಳುತ್ತಿರುವವು. ನಾವು ಎಷ್ಟು ಪಾಪವನ್ನು ಇದುವರೆಗೂ ಆಚರಿಸಿದ್ದರೂ ಚಿಂತೆಯಿಲ್ಲ. ಪರಮಾತ್ಮನು ಪತಿತಪಾವನನೆಂಬ ವಿಷಯವನ್ನು ಮರೆಯದೆ ಆತನಕಡೆಗೆ ಮನಸ್ಸುಹಾಕುವದೇ ನಮ್ಮ ಕರ್ತವ್ಯವೆಂಬುದೇ ಇಲ್ಲಿ ಅಭಿಪ್ರೇತವಾದ ಅರ್ಥವು.

**ದುಃಖಂ ಜರಾಜನನಜಂ ವಿವಿಧಾಶ್ಚ ರೋಗಾಃ**
**ಕಾಕಶ್ವಸೂಕರಜನಿರ್ನಿರಯೇ ಚ ಪಾತಃ ।**
**ತೇ ವಿಸ್ಮೃತೇಃ ಫಲಮಿದಂ ವಿದಿತಂ ಹಿ ಲೋಕೇ**
**ತಸ್ಮಾತ್ತ್ವಮೇವ ಶರಣಂ ಮಮ ಶಙ್ಖಪಾಣೇ ॥೬॥**

ಅರ್ಥ :- ಮುಪ್ಪು, ಜನ್ಮ - ಇವುಗಳಿಂದ ಆಗುವ ದುಃಖವು, ಬಗೆಬಗೆಯಾದ ರೋಗಗಳು, ಕಾಗೆನಾಯಿಹಂದಿಗಳಂಥ ಜನ್ಮಗಳು, ನರಕದಲ್ಲಿ ಬೀಳುವದು - ಇವುಗಳೆಲ್ಲ ನಿನ್ನನ್ನು ಮರೆತದ್ದರ ಫಲವೆಂದು ಲೋಕದಲ್ಲಿ ಪ್ರಸಿದ್ಧವಾಗಿರುವದು. ಆದ್ದರಿಂದ ಎಲೈ ಶಂಖಪಾಣಿಯಾದ ಹರಿಯೆ, ನೀನೇ ನನಗೆ ರಕ್ಷಕನು.

ವಿಚಾರ :- ಹಿಂದಿನ ಶ್ಲೋಕದಲ್ಲಿ ಹೇಳಿದಂತೆ ಹಿಂದಿನ ಜನ್ಮದಲ್ಲಿಯೂ ಈ ಜನ್ಮದಲ್ಲಿಯೂ ನಾವು ಮಾಡಿರುವ ಪಾಪಗಳುಂಟೆಂಬುದನ್ನು ಅವುಗಳ ಫಲದಿಂದಲೇ ಇಲ್ಲಿ ಸೂಚಿಸಿ ಅವಕ್ಕೆ ಪರಿಹಾರವನ್ನೂ ತಿಳಿಸುತ್ತಾರೆ :

ನಾವು ಹುಟ್ಟುವಾಗಲೇ ಗರ್ಭವಾಸದ ದುಃಖವನ್ನನುಭವಿಸಿ ಬಂದಿರುವೆವು ; ಬಂದಮೇಲೆ ನಾನಾವಿಧವಾದ ದುಃಖಗಳು ಕಾಣಿಸಿಕೊಳ್ಳುವವು. ರೋಗಗಳಂತೂ ಶರೀರಕ್ಕೆ ತಪ್ಪಿದ್ದೇ ಇಲ್ಲ ;ಎಷ್ಟು ಆರೋಗ್ಯಶಾಸ್ತ್ರಗಳನ್ನು ಓದಿದರೂ ವೈದ್ಯರುಗಳ ಸಂಖ್ಯೆಯು ಎಷ್ಟು ಹೆಚ್ಚಿದರೂ ಚಿಕಿತ್ಸಾಲಯಗಳು ಎಷ್ಟು ಹೆಚ್ಚಾದರೂ ಜನಸಾಮಾನ್ಯಕ್ಕೆ ಇರುವ ರೋಗಗಳ ಸಂಖ್ಯೆಯು ಕಡಿಮೆಯಾಗುವದಕ್ಕೆ ಬದಲು ಹೊಸಹೊಸದಾಗಿ ಬರುವ ರೋಗಗಳಿಂದ ಈ ಸಂಖ್ಯೆಯು ಹೆಚ್ಚುತ್ತಲೇ ಇರುವದು. ಇವಕ್ಕೆಲ್ಲ ಪಾಪವಲ್ಲದಿದ್ದರೆ ಮತ್ತೇನು ಕಾರಣ ? ಅನಾರೋಗ್ಯವೆಂಬುದು ಪ್ರತ್ಯಕ್ಷವಾಗಿ ನಾವು ಅನುಭವಿಸುತ್ತಿರುವ ಪಾಪದ ಫಲವು. ಲೋಕದಲ್ಲಿ ಜನಗಳು ಉತ್ತಮಮಾರ್ಗವನ್ನನುಸರಿಸಿದಹಾಗೆಲ್ಲ ವಿಷಯಸಾಮಗ್ರಿಗಳು ಇರಲಿ, ಇಲ್ಲದಿರಲಿ ಅವರಿಗೆ ಆಗುವ ಸುಖವು ಹೆಚ್ಚುತ್ತಾಹೋಗುವದೆಂಬುದು ಅನುಭವದಲ್ಲಿ ಕಂಡುಬರುತ್ತದೆ. ಮನುಷ್ಯರಲ್ಲಿ ದುಃಖತಾರತಮ್ಯವಿರುವದಷ್ಟೆ ; ಪ್ರಾಣಿಗಳ ಜನ್ಮವನ್ನು ನೋಡಿದರೆ ಅವುಗಳಿಗೆ ದುಃಖವೇ ತವರುಮನೆಯಾಗಿರುವಂತೆ ತೋರುವದು. ಇವು ಆಹಾರ, ನಿದ್ರೆ - ಮುಂತಾದವುಗಳಲ್ಲಿ ಆಯಾ ಕಾಲಕ್ಕೆ ಒದಗಿದ್ದನ್ನು ಅನುಭವಿಸುತ್ತಾಹೋಗುತ್ತಿರುವವು. ಅವುಗಳಿಗೆ ಉಂಟಾಗುವ ರೋಗಾದಿಗಳನ್ನೂ ದುಃಖಸಾಮಾನ್ಯವನ್ನೂ ಪರಿಹರಿಸಿಕೊಳ್ಳುವದಕ್ಕೆ ತಕ್ಕಷ್ಟು ಕೂಡ ಅವುಗಳಿಗೆ ಬುದ್ಧಿಯಿರುವದಿಲ್ಲ. ಕಾಗೆ, ನಾಯಿ, ಹಂದಿ - ಇಂಥ ನೀಚ ಪ್ರಾಣಿಗಳ ಜನ್ಮವಂತೂ ಹೇಳತೀರದ ಅಸಹ್ಯವಾದ ದುಃಖಕ್ಕೆ ನೆಲೆಮನೆಯಾಗಿರುವದು. ಈ ಪ್ರಾಣಿಗಳಿಗೆ ತಮ್ಮ ಜನ್ಮವು ಜುಗುಪ್ಸಿತವಾದದ್ದೆಂತಕೂಡ ತಿಳಿಯುವಂತಿಲ್ಲ. ಮವಿಷ್ಯನಿಗಿರುವಂತೆ ಭೂತಕಾಲದ ನೆನಪಾಗಲಿ, ಭವಿಷ್ಯತ್ಕಾಲದ ನಿರೀಕ್ಷಣೆಯಾಗಲಿ ಇರುವದಿಲ್ಲವಾದ್ದರಿಂದ ಅಷ್ಟುಮಟ್ಟಿಗಾದರೂ ಅವಕ್ಕೆ ದುಃಖವು ಕಡಿಮೆಯಾಯಿತೆಂದು ಕೆಲವರು ಭಾವಿಸಬಹುದು. ಆದರೆ ಹಿಂದಿನ ಸುಖವನ್ನು ನೆನಸಿಕೊಳ್ಳುವ ಭಾಗ್ಯವೂ ಮುಂದೆ ಆಗಬಹುದೆಂಬ ಸುಖವನ್ನು ಕಲ್ಪಿಸಿಕೊಂಡು ಪಡಬಹುದಾದ ಆನಂದವೂ ಇವುಗಳ ಪಾಲಿಗೆ ಇಲ್ಲವಾಗಿದೆ. ಇಂಥ ನೀಚಜನ್ಮವೂ ಪಾಪದ ಫಲವೇ ಆಗಿರಬೇಕೆಂಬುದು ಸ್ವಲ್ಪಮಟ್ಟಿಗೆ ಯೋಚಿಸುವಾತನಿಗೂ ಗೊತ್ತಾಗುವದು. ಈ ಪ್ರಾಣಿಗಳು ಅಧರ್ಮದ ಫಲವನ್ನೇ ಪಡೆಯುತ್ತಿರುವವೆಂದು ಶಾಸ್ತ್ರವೂ ಹೇಳುತ್ತಿರುವದು. ಇದೂ ಅಲ್ಲದೇ ಪಾಪಿಗಳು ಸ್ಥಾವರಜನ್ಮರೂಪವಾದ ನರಕವನ್ನು ಪಡೆಯುವರೆಂತಲೂ ರೌರವಾದಿನರಕಗಳಲ್ಲಿ ಬಗೆಬಗೆಯ ದುಃಖಗಳನ್ನು ಅನುಭವಿಸುವರೆಂತಲೂ ಪುರಾಣಾದಿಗಳಲ್ಲಿ ವರ್ಣಿತವಾಗಿರುವದು.

ಇವಕ್ಕೆಲ್ಲ ಪರಿಹಾರವೇನು? ಇವಕ್ಕೆ ಕಾರಣವನ್ನು ತಿಳಿದುಕೊಂಡರೆ ಪರಿಹಾರವು ಗೊತ್ತಾಗುವದು. ಪರಮಾತ್ಮನನ್ನು ಮರೆಯುವದೇ ಸರ್ವವಿಧವಾದ ಅನರ್ಥಕ್ಕೂ ಕಾರಣವು.

**ಯನ್ಮುಹೂರ್ತಂ ಕ್ಷಣಂ ವಾಪಿ ವಾಸುದೇವೋ ನ ಚಿನ್ತ್ಯತೇ ।**
**ಸಾ ಹಾನಿಸ್ತನ್ಮಹಚ್ಛಿದ್ರಂ ಸಾ ಭ್ರಾನ್ತಿಃ ಸಾ ಚ ವಿಕ್ರಿಯಾ ॥**

**(ಒಂದು ಮುಹೂರ್ತ ಅಥವಾ ಕೊನೆಗೆ ಒಂದು ಕ್ಷಣದವರೆಗಾದರೂ ವಾಸುದೇವನಾದ ಪರಮಾತ್ಮನನ್ನು ಧ್ಯಾನಿಸದೇಬಿಟ್ಟೆವೆಂದರೆ, ಅದೇ ನಮಗೆ ಹಾನಿಯು; ನಮ್ಮ ಮೇಲೆ ವಿಷಯಗಳು ಕೈಮಾಡುವದಕ್ಕೆ ಒಳ್ಳೇ ರಂಧ್ರವು ಸಿಕ್ಕಂತಾಯಿತು ; ಅದಕ್ಕೇ ಭ್ರಾಂತಿಯೆಂದು ಹೆಸರು; ನಮ್ಮ ಚಿತ್ತದಲ್ಲಿ ಆಗುವ ಎಲ್ಲಾ ವಿಕಾರಕ್ಕೂ ಅದೇ ಕಾರಣವು)** ಎಂದು ಪುರಾಣವಚನವಿರುವದು. ಆದ್ದರಿಂದ ಹಗ್ಗದ ತತ್ತ್ವವನ್ನು ಅರಿಯದೇ ಹಾವೆಂದು ಹಾರಿಬೀಳುವ ಮೂಢರಂತೆಯೂ ಕಪ್ಪೆಯಚಿಪ್ಪನ್ನು ಕಂಡು ಬೆಳ್ಳಿಯೆಂದು ಬಯಲಾಸೆಯಿಂದ ಶ್ರಮಪಡುವ ಹುಚ್ಚರಂತೆಯೂ ನಾವು ಪರಮಾತ್ಮನಿಗೆ ಪರಾಙ್ಮುಖರಾಗಿರುವದೇ ಎಲ್ಲಾ ದುಃಖಗಳಿಗೂ ಕಾರಣವೆಂದು ಸಿದ್ಧವಾಯಿತು. ಇದನ್ನು ತಿಳಿದು ಹಿಂದಕ್ಕೆ ತಪ್ಪು, ಮುಂದಕ್ಕೆ ಬುದ್ಧಿ - ಎಂಬಂತೆ ಮುಂದೆಯಾದರೂ ಪಾಪಕ್ಕೆ ಅಂಜಿ ಭಕ್ತಿಮಾರ್ಗದಲ್ಲಿ ಹೆಜ್ಜೆಯಿಡಬೇಕೆಂಬುದೇ ಒಟ್ಟರ್ಥ.

**ನೀಚೋಽಪಿ ಪಾಪವಲಿತೋಽಪಿ ವಿನಿನ್ದಿತೋಽಪಿ**
**ಬ್ರೂಯಾತ್ತವಾಹಮಿತಿ ಯಸ್ತು ಕಿಲೈಕವಾರಮ್ ।**
**ತಂ ಯಚ್ಛಸೀಶ ನಿಜಲೋಕಮಿತಿ ವ್ರತಂ ತೇ**
**ತಸ್ಮಾತ್ತ್ವಮೇವ ಶರಣಂ ಮಮ ಶಙ್ಖಪಾಣೇ ॥೭॥**

**ಅರ್ಥ:-** ನೀಚನಾಗಿರಲಿ, ಪಾಪದಿಂದ ಕೂಡಿರಲಿ, ಎಲ್ಲರಿಂದ ನಿಂದಿಸಲ್ಪಡುವವನಾಗಲಿ, 'ನಾನು ನಿನ್ನವನು' ಎಂದು ಒಂದು ಸಲ ಯಾವನು ಹೇಳಿಕೊಳ್ಳುವನೋ, ಆತನಿಗೆ ಆ ನಿನ್ನ ಲೋಕವನ್ನೇ ಕೊಡುವೆನೆಂಬುದೇ ನಿನ್ನ ವ್ರತವಲ್ಲವೆ ? ಆದ್ದರಿಂದ ಎಲೈ ಶಂಖಪಾಣಿಯಾದ ಹರಿಯೇ, ನೀನೇ ನನಗೆ ರಕ್ಷಕನು.

**ವಿಚಾರ :-** ಪರಮಾತ್ಮವಿಮುಖರಾಗಿರುವದು ಹೇಗೆ ಸಂಸಾರದಲ್ಲಿ ನರಳುವದಕ್ಕೆ ಕಾರಣವಾಗಿರುವದೋ ಹಾಗೆ ಪರಮಾತ್ಮನ ಕಡೆಗೆ ಮನಸ್ಸು ತಿರುಗಿಸಿದೆವೆಂದರೆ ಕೂಡಲೆ ಪರಮಾತ್ಮನ ಕರುಣೆಗೆ ಪಾತ್ರರಾಗುವೆವೆಂದೂ ಇಲ್ಲಿ ತಿಳಿಸುತ್ತಾರೆ.

ಸೂರ್ಯನಕಡೆಗೆ ಬೆನ್ನುಮಾಡಿಕೊಂಡು ಹಗಲುಹೊತ್ತಿನಲ್ಲಿಯೇ ತಮಗೆ ಸೂರ್ಯನು ಕಾಣುವದಿಲ್ಲವೆನ್ನುವ ಎಗ್ಗರಂತೆ ಮೂಢರು ಪರಮಾತ್ಮನಕಡೆಗೆ ಮನಸ್ಸನ್ನು ತಿರುಗಿಸದೆ 'ಪರಮಾತ್ಮನೆಂದರೆಲ್ಲಿರುವನು ? ಇದ್ದರೆ ನಮ್ಮೆದುರಿಗೇತಕ್ಕೆ ಬಂದು ಕಾಣುವದಿಲ್ಲ ? 'ಎಂದು ವಿತಂಡಾವಾದಕ್ಕಾರಂಭಿಸುವರು. ಆದರೂ ಸೂರ್ಯನು ಯಾವಾಗಲೂ ಪ್ರಕಾಶಿಸುತ್ತಲೇ ಇರುವಂತೆ ಪರಮಾತ್ಮನ ಕರುಣೆಯು ಇವರ ಕಡೆಗೂ ಬೀಳುತ್ತಲೇ ಇರುವದು. ಪರಮಾತ್ಮನು

ಕೊಟ್ಟಿರುವ ಇಂದ್ರಿಯಗಳ ಬಲದಿಂದಲೇ ಇವರು ವಿಷಯಗಳನ್ನು ಕಂಡು ಪರಮಾತ್ಮನನ್ನು ಇಲ್ಲವೆನ್ನುತ್ತಿರುವರು. ನಿಜವಾಗಿ ಇಂದ್ರಿಯಗಳು ವಿಷಯವನ್ನು ಕಂಡು ಕೊಂಡಾವೇ ಹೊರತು ಎಲ್ಲಕ್ಕೂ ಸಾಕ್ಷಿಯಾಗಿರುವ ಅಂತರ್ಯಾಮಿಯಾದ ದೇವನನ್ನು ಕಾಣಲಾರವು. ಇದರಿಂದಲೇ ಶ್ರುತಿಗಳು ಇವನನ್ನು ನೋಡೋಣವೆಂದರೆ ಈತನಿಗೆ ರೂಪವಿರುವದಿಲ್ಲ ; ಯಾರಿಂದಲೂ ಈತನನ್ನು ಕಣ್ಣಿನಿಂದ ನೋಡುವದಾಗದು. ಹೃದಯದಲ್ಲಿ ತನ್ನ ಸ್ವಾಧೀನಕ್ಕೆ ತೆಗೆದುಕೊಂಡ ಸಂಸ್ಕೃತವಾದ ಮನಸ್ಸಿಗೆ ಈ ಭಗವಂತನು ಗೋಚರನಾಗುವನು. ಹೀಗೆ ಯಾರು ಅರಿಯುವರೋ ಅವರಿಗೆ ಮರಣವೇ ಇಲ್ಲ ಎಂದು ಸಾರುತ್ತಿರುವವು.

ಯಾರು ಈ ಡಂಗುರಕ್ಕೆ ಕಿವಿಗೊಟ್ಟು ಮನಸ್ಸಿನ ಮುಂಜೋಲನ್ನು ಜಗ್ಗಿ ತಮ್ಮೊಳಗೇ ಪರೀಕ್ಷಿಸುವ ಹೆಚ್ಚಿನ ಅಧ್ಯಾತ್ಮಯೋಗವನ್ನು ಅವಲಂಬಿಸುವರೋ ಅವರಿಗೇ ಪರಮಾತ್ಮನು ಸಿಕ್ಕುವನು. 'ನಾನು ನಿನ್ನವನು !' ಎಂದು ನಿಜವಾಗಿ ಕರಗಿದ ಹೃದಯದಿಂದ ಒಂದುಸಲ ಕೂಗಿಕೊಂಡರೆ ಸಾಕು, ಕರುವನ್ನು ಹುಡುಕಿಕೊಂಡು ಬರುವ ಹಸುವಿನಂತೆ ಆ ಪರಮಾತ್ಮನು ಅಲ್ಲೇ ಮೈದೋರುವನು. ಅಂಥ ಭಕ್ತರಿಗೆ ಯಾವ ಜ್ಞಾನದಿಂದ ತನ್ನನ್ನು ಕಾಣಬಹುದೋ ಅಂಥ ಜ್ಞಾನವನ್ನೂ ಕರುಣಿಸುವನು.

**ವೇದೇಷು ಧರ್ಮವಚನೇಷು ತಥಾಗಮೇಷು**
**ರಾಮಾಯಣೇಽಪಿ ಚ ಪುರಾಣಕದಮ್ಬಕೇ ವಾ ।**
**ಸರ್ವತ್ರ ಸರ್ವವಿಧಿನಾ ಗದಿತಸ್ತ್ವಮೇವ**
**ತಸ್ಮಾತ್ತ್ವಮೇವ ಶರಣಂ ಮಮ ಶಙ್ಖಪಾಣೇ** ||೮||

ಅರ್ಥ :- ವೇದಗಳಲ್ಲಿಯೂ ಧರ್ಮಶಾಸ್ತ್ರಗಳಲ್ಲಿಯೂ, ಆಗಮಗಳಲ್ಲಿಯೂ ರಾಮಾಯಣದಲ್ಲಿಯೂ, ಪುರಾಣಸಮೂಹದಲ್ಲಿಯೂ, ಎಲ್ಲೆಲ್ಲಿಯೂ ಎಲ್ಲಾ ರೀತಿಯಿಂದಲೂ ವರ್ಣಿಸಲ್ಪಟ್ಟಿರುವನು ನೀನೇ. ಆದ್ದರಿಂದ ಎಲೈ ಶಂಖಪಾಣಿಯಾದ ಹರಿಯೆ, ನೀನೇ ನನಗೆ ರಕ್ಷಕನು.

ವಿಚಾರ :- ಸಚ್ಛಾಸ್ತ್ರಗಳ ಶ್ರವಣಮಾಡಿ ಭಗವದ್ಭಕ್ತಿಯನ್ನು ತಿಳಿದುಕೊಳ್ಳಬೇಕೆಂದು ಈ ಪ್ರಕರಣವನ್ನು ಉಪಸಂಹಾರಮಾಡುವ ನೆಪದಿಂದ ಸೂಚಿಸುತ್ತಾರೆ.

ವೇದಗಳಲ್ಲಿ [illegible] ಮೂರು ಭಾಗಗಳಿವೆ. ಮೊದಲನೆಯ ಕಾಂಡದಲ್ಲಿ ಕರ್ಮವನ್ನು ಹೇಳಿದೆಯಾದರೂ ಆದರ ಫಲವು ಪರಮೇಶ್ವರನ ಅನುಗ್ರಹದಿಂದಲೇ ದೊರಕುವದು. ಇಲ್ಲಿ ಮಾಡಿರುವ ಇಲ್ಲಿಯೇ ನಾಶವಾಗುವ ಕರ್ಮವೆಂಬುದು ಕಾಲಾಂತರದಲ್ಲಿ ಸ್ವರ್ಗಾದಿದೇಶಾಂತರದಲ್ಲಿ ಫಲವನ್ನು ಕೊಡುವದಕ್ಕೆ ಹೇಗೆ ಸಮರ್ಥವಾದೀತು? ಉಪಾಸನಾಕಾಂಡದಲ್ಲಿಯಂತೂ ಭಗವಂತನನ್ನು ಉಪಾಸನೆಮಾಡುವ ಮಾರ್ಗವನ್ನೇ ವಿಸ್ತಾರವಾಗಿ ಹೇಳಿರುತ್ತದೆ. ಬೇರೆಬೇರೆಯ ಉಪಾಸನೆಗಳಲ್ಲಿ ಪರಮಾತ್ಮನ ಗುಣಗಳನ್ನು ಬೇರೆಬೇರೆಯಾಗಿ ಹೇಳಿರುವದು ನಿಜ ; ಉಪಾಸನೆಗಳಿಗೆ ಬೇರೆಬೇರೆಯ

ಫಲವೆಂಬುದೂ ನಿಜ; ಆದರೆ ಎಲ್ಲ ಉಪಾಸಕರಿಗೂ ಉಪಾಸ್ಯಮೂರ್ತಿಯಾದವನು ಭಗವಂತನೇ. ಜ್ಞಾನಕಾಂಡದಲ್ಲಿಯಂತೂ ಪರಮಾತ್ಮನ ಸ್ವರೂಪವನ್ನೇ ಸಾಕ್ಷಾತ್ತಾಗಿ ತಿಳಿಸಿರುತ್ತದೆ. ಹೀಗೆ ವೇದಗಳಲ್ಲಿ ಎಲ್ಲೆಲ್ಲಿಯೂ ಭಗವಂತನನ್ನೇ ವರ್ಣಿಸಿರುತ್ತದೆ. ವೇದದಲ್ಲಿ ಇಂದ್ರ, ಮಿತ್ರ, ವರುಣ-ಮುಂತಾದ ಹೆಸರಿನ ದೇವತೆಗಳನ್ನು ಅನೇಕವಿಧವಾಗಿ ವರ್ಣಿಸಿದೆಯಲ್ಲ ? ಎಂದು ಭ್ರಾಂತಿಪಡಬಾರದು. ಅವುಗಳಿಗೆಲ್ಲ 'ಏಕಂ ಸದ್ವಿಪ್ರಾ ಬಹುಧಾ ವದನ್ತಿ' (ಒಂದು ತತ್ತ್ವವನ್ನೇ ಬಲ್ಲವರು ಅನೇಕವಿಧವಾಗಿ ಹೇಳುವರು) ಎಂಬ ಶ್ರುತಿಯೇ ಏಕವಾಕ್ಯತೆಯನ್ನುಂಟುಮಾಡುತ್ತದೆ.

ಇದರಂತೆಯೇ ಆಪಸ್ತಂಬಾದಿಧರ್ಮಶಾಸ್ತ್ರಗಳಲ್ಲಿ ನಿತ್ಯನೈಮಿತ್ತಿಕಾದಿಕರ್ಮಗಳನ್ನು ಹೇಳಿರುವದು ನಿಜವಾದರೂ ಆ ಶಾಸ್ತ್ರಗಳಿಗ ಪರಮಾತ್ಮನಲ್ಲಿಯೇ ತಾತ್ಪರ್ಯವಿರುವದು. ಆದ್ದರಿಂದಲೇ ಆತ್ಮಲಾಭಕ್ಕಿಂತ ಹೆಚ್ಚಿನ ಲಾಭವಿಲ್ಲ ಎಂದು ಈ ಧರ್ಮಸೂತ್ರಕಾರರು ಹೇಳಿರುವರು.

ಆಗಮಗಳಲ್ಲಿಯೂ ಪರಮಾತ್ಮನನ್ನೇ ಹೊಗಳಿರುತ್ತದೆ. ಶೈವ, ವೈಷ್ಣವ - ಮುಂತಾದ ಆಗಮಗಳು ಅನೇಕವಿದ್ದರೂ, ಬೇರೆಬೇರೆಯ ಹೆಸರುಗಳಿಂದ ಪರಮಾತ್ಮನ ಆರಾಧನೆಯನ್ನೇ ಅವು ಹೇಳುವವು.

**ಸರ್ವೇಷು ಚ ನೃಪಶ್ರೇಷ್ಠ ಜ್ಞಾನೇಷ್ವೇತೇಷು ದೃಶ್ಯತೇ ।**
**ಯಥಾಗಮಂ ಯಥಾನ್ಯಾಯಂ ನಿಷ್ಠಾ ನಾರಾಯಣಃ ಪ್ರಭುಃ ॥**

(ಎಲೈ ರಾಜವರ್ಯನೆ, ಈ ಎಲ್ಲಾ ಜ್ಞಾನಗಳಲ್ಲಿಯೂ ಆಯಾ ಆಗಮಕ್ಕೆ ತಕ್ಕಂತೆ ಯುಕ್ತಿಯುಕ್ತವಾಗಿ ನೋಡುವಲ್ಲಿ ಪ್ರಭುವಾದ ನಾರಾಯಣನೇ ತಾತ್ಪರ್ಯನಾಗಿರುವನೆಂದು ಕಂಡುಬರುವದು) ಎಂದು ಭಾರತದಲ್ಲಿಯೇ ಹೇಳಿರುತ್ತದೆ. ರಾಮಾಯಣದಲ್ಲಿಯಂತೂ ಶ್ರೀಮಹಾವಿಷ್ಣುವು ಸಕಲಗುಣೋಪೇತನಾದ ಶ್ರೀರಾಮಚಂದ್ರಮೂರ್ತಿಯಾಗಿ ಅವತರಿಸಿ ರಾವಣಾದಿಗಳನ್ನು ಸಂಹರಿಸಿ ವಿಶ್ವಾಮಿತ್ರಾದಿ ಋಷಿಗಳ ತಪಸ್ಸಿಗೆ ನಿರ್ವಿಘ್ನತೆಯನ್ನುಂಟುಮಾಡಿದನೆಂದು ಸ್ಪಷ್ಟವಾಗಿ ಹೇಳಿರುತ್ತದೆ. ಪುರಾಣಗಳಲ್ಲಿಯೂ ಇದರಂತೆಯೇ ಅರಿಯಬೇಕು. ಹದಿನೆಂಟುಪುರಾಣಗಳಲ್ಲಿಯೂ ಶಿವ, ಬ್ರಹ್ಮ, ವಿಷ್ಣು - ಮುಂತಾದ ಹೆಸರುಗಳಿಂದ ಪ್ರತಿಪಾದ್ಯನಾದ ಭಗವಂತನು ಒಬ್ಬನೇ ಎಂಬುದನ್ನು-

**ವಿಷ್ಣುರುದ್ರಾನ್ತರಂ ಬ್ರೂಯಾದ್ಯಃ ಶ್ರೀಗೌರ್ಯೋರ್ನ್ತರಂ ತಥಾ ।**
**ತದ್ಭ್ರಾನ್ತಿಕಸ್ಯ ಮೂರ್ಖಸ್ಯ ವಾಕ್ಯಂ ಶಾಸ್ತ್ರವಿಗರ್ಹಿತಮ್ ॥**

(ವಿಷ್ಣುರುದ್ರರು ಬೇರೆಬೇರೆಯೆಂದೂ ಶ್ರೀಗೌರಿಯರು ಬೇರೆಬೇರೆಯೆಂದೂ ಯಾವನು ಹೇಳುವನೋ ಅದು ಭ್ರಾಂತಿಹೊಂದಿದ ಮೂರ್ಖನ ವಚನವು. ಇದು ಎಲ್ಲಾ ಶಾಸ್ತ್ರಗಳಿಂದಲೂ ನಿಂದಿತವಾಗಿರುವದು) ಎಂಬ ಸ್ಕಾಂದಪುರಾಣವಾಕ್ಯದಿಂದ ತಿಳಿಯಬಹುದು. ಆದ್ದರಿಂದ ಎಲ್ಲಾ

ಶಾಸ್ತ್ರಗಳಲ್ಲಿಯೂ ಶ್ರೀಹರಿಯೇ ವೇದ್ಯನಾಗಿರುವನು. ಅಂಥ ಶಾಸ್ತ್ರಗಳನ್ನು ಶ್ರವಣಮಾಡಿ ಶ್ರೀಹರಿಯನ್ನು ಶರಣು ಹೊಂದಬೇಕು. ಶಾಸ್ತ್ರಗಳ ತಾತ್ಪರ್ಯವು ತನಗೊಬ್ಬನಿಗೇ ನಿಶ್ಚಯವಾಗುವ ಸಂಭವವಿಲ್ಲ ; ಸರ್ವಾರ್ಥಗಳನ್ನೂ ಅನುಭವಕ್ಕೆ ತಂದುಕೊಡುವ ಸದ್ಗುರುವಿನ ಪಾದವನ್ನು ಹಿಡಿದು ಸಕಲಶಾಸ್ತ್ರರಹಸ್ಯವಾದ ಶ್ರೀಹರಿಭಕ್ತಿಯನ್ನು ಸಂಪಾದಿಸಬೇಕು. ಕರ್ಮಗಳಿಗೆಲ್ಲ ಭಕ್ತಿಯೇ ರಹಸ್ಯವು; ಜ್ಞಾನಕ್ಕೆಲ್ಲ ಭಕ್ತಿಯೇ ರಹಸ್ಯವು; ಯೋಗಗಳಿಗೆಲ್ಲ ಭಕ್ತಿಯೇ ರಹಸ್ಯವು; ಭಕ್ತಿಗಂತೂ ಭಕ್ತಿಯೇ ರಹಸ್ಯವು. ಇಂಥ ಹರಿಭಕ್ತಿಯನ್ನು ಸಂಪಾದಿಸಿಕೊಂಡು ತನ್ನಿಷ್ಟವೆಂಬ ಆನಂದವನ್ನು ಕಂಡುಕೊಳ್ಳುವದೇ ಪರಮಪುರುಷಾರ್ಥವೆಂಬುದು ಈ ಪ್ರಕರಣದ ಮುಖ್ಯತಾತ್ಪರ್ಯವು.

||ಓಮ್||

# ಆದಿತ್ಯಹೃದಯಸ್ತೋತ್ರಮ್[1]

(ಶ್ರೀಮದ್ವಾಲ್ಮೀಕಿರಾಮಾಯಣ - ಯುದ್ಧಕಾಂಡ - ೧೦೭ನೆಯ ಸರ್ಗ[2])

## ಅವತರಣಿಕೆ

**ತತೋ ಯುದ್ಧಪರಿಶ್ರಾನ್ತಂ ಸಮರೇ ಚಿನ್ತಯಾ ಸ್ಥಿತಮ್ ।**
**ರಾವಣಂ ಚಾಗ್ರತೋ ದೃಷ್ಟ್ವಾ ಯುದ್ಧಾಯ ಸಮುಪಸ್ಥಿತಮ್ ॥೧॥**

**ದೈವತೈಶ್ಚ ಸಮಾಗಮ್ಯ ದ್ರಷ್ಟುಮಭ್ಯಾಗತೋ ರಣಮ್ ।**
**ಉಪಾಗಮ್ಯಾಬ್ರವೀದ್ ರಾಮಮಗಸ್ತ್ಯೋ ಭಗವಾನೃಷಿಃ ॥೨॥**

೧-೨ ಅನಂತರ[3] (ರಾವಣನನ್ನು ಹೇಗೆ ಕೊಲ್ಲಲಿ ! ಎಂಬ) ಚಿಂತೆಯಿಂದ ನಿಂತಿದ್ದ (ರಾಮನನ್ನು, ಮತ್ತು) ಯುದ್ಧದಲ್ಲಿ ಬಳಲಿ ಹಿಂತಿರುಗಿದ್ದು ಪುನಃ ಯುದ್ಧಕ್ಕೆ ಎದುರಿಗೆ ಬಂದು ನಿಂತಿದ್ದ ರಾವಣನನ್ನು ನೋಡಿದ ಪೂಜ್ಯನಾದ ಅಗಸ್ತ್ಯಮಹರ್ಷಿಯು ದೇವತೆಗಳೊಡಗೂಡಿ ಯುದ್ಧವನ್ನು ನೋಡಲು ಬಂದಿದ್ದವನು ರಾಮನನ್ನು ಸಮೀಪಿಸಿ ಹೀಗೆಂದನು.

**ರಾಮ ರಾಮ ಮಹಾಬಾಹೋ ಶೃಣು ಗುಹ್ಯಂ ಸನಾತನಮ್ ।**
**ಯೇನ ಸರ್ವಾನರೀನ್ ವತ್ಸ ಸಮರೇ ವಿಜಯಿಷ್ಯಸಿ ॥೩॥**

೩. ಎಲೈ ಮಹಾಬಾಹುವಾದ ರಾಮನೆ, ಸನಾತನವಾದ ರಹಸ್ಯ (ವೊಂದನ್ನು ಹೇಳುವೆನು) ಕೇಳು. ಎಲೈ ವತ್ಸನೆ, (ಯಾವ ಈ ರಹಸ್ಯಶ್ರವಣದಿಂದ) ಎಲ್ಲಾ ಶತ್ರುಗಳನ್ನೂ ಯುದ್ಧದಲ್ಲಿ ಗೆಲ್ಲುವೆ.

1. ಆದಿತ್ಯಹೃದಯಸ್ತೋತ್ರವು ಶ್ರೀರಾಮಾಯಣಾಂತರ್ಗತವಾಗಿದ್ದು ಆಸ್ತಿಕರಿಗೆಲ್ಲ ಪರಮಪೂಜ್ಯವೂ ಪಠನೀಯವೂ ಆಗಿದೆ. ಸೂರ್ಯನಮಸ್ಕಾರಾದಿಗಳನ್ನು ಮಾಡುವವರು ಹಾಗೂ ಆದಿತ್ಯಭಕ್ತರೆಲ್ಲ ಇದನ್ನು ಅವಶ್ಯವಾಗಿ ಪಾರಾಯಣಮಾಡುತ್ತಾರೆ. ಆದ್ದರಿಂದ ಭಕ್ತರುಗಳ ಉಪಯೋಗಕ್ಕಾಗಿ ಈ ಸ್ತೋತ್ರವನ್ನು ಅನುವಾದಸಮೇತ ಕೊಟ್ಟಿದೆ. ಇಲ್ಲಿ ನಾವು ಗೋವಿಂದರಾಜೀಯ, ಮಹೇಶ್ವರೀಯವ್ಯಾಖ್ಯಾನಗಳ ಸಹಿತವಾದ ಮದ್ರಾಸಿನ ವಾವಿಳ್ಳರಾಮಸ್ವಾಮಿಶಾಸ್ತ್ರಿಗಳಿಂದ ಪ್ರಕಾಶಿತವಾಗಿರುವ ತೆಲುಗುಲಿಪಿಯ ರಾಮಾಯಣವನ್ನು ಅನುಸರಿಸಿ ಮೂಲವನ್ನು ಕೊಟ್ಟಿರುತ್ತೇವೆ.
2. ಗೀತಾಪ್ರೆಸ್‌ನಲ್ಲಿ ಪ್ರಕಾಶಿತವಾಗಿರುವ ರಾಮಾಯಣಗ್ರಂಥದಂತೆ ಇದು ೧೦೫ನೆಯ ಸರ್ಗ.
3. ರಾವಣನು ರಾಮಬಾಣಗಳಿಂದ ಪೀಡಿತನಾಗಿ ಹಿಮ್ಮೆಟ್ಟಿದಾಗ ಅವನ ಸಾರಥಿಯು ರಥವನ್ನು ಹಿಂತಿರುಗಿಸಿದನು. ಆಗ ರಾವಣನು ಕೋಪಾವಿಷ್ಟನಾಗಿ ಸಾರಥಿಯನ್ನು ಗದರಿಸಿದನು. ಅನಂತರ ಸಾರಥಿಯು ತನ್ನ ಪರಿಸ್ಥಿತಿಯನ್ನು ರಾವಣನಿಗೆ ತಿಳಿಸಿ ಮತ್ತೆ ರಾವಣನ ರಥವನ್ನು ರಾಮನಿಗೆ ಇದಿರಾಗಿ ತಂದು ನಿಲ್ಲಿಸಿದನು. ಆಗ ರಾಮನಿಗೆ ರಾವಣನನ್ನು ವಧೆಮಾಡುವ ಉಪಾಯವನ್ನು ಅರಿಯಬೇಕಾದ ಸಮಯವು ಒದಗಿತು. ಆ ಸಂದರ್ಭದಲ್ಲಿ ಅಗಸ್ತ್ಯರು ರಾಮನಿಗೆ ಈ ಸ್ತೋತ್ರವನ್ನು ಉಪದೇಶಿಸಿದರು - ಎಂಬ ಕಥಾಸಂದರ್ಭವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

# ನಾಮನಿರ್ವಚನ, ಮಹಿಮೆ

**ಆದಿತ್ಯಹೃದಯಂ ಪುಣ್ಯಂ ಸರ್ವಶತ್ರುವಿನಾಶನಮ್ ।**
**ಜಯಾವಹಂ ಜಪೇನ್ನಿತ್ಯಮಕ್ಷಯ್ಯಂ ಪರಮಂ ಶಿವಮ್ ॥೪॥**

೪. ಆದಿತ್ಯಹೃದಯವೆಂಬ[1] ಪುಣ್ಯಕರವಾದ, ಎಲ್ಲಾ ಶತ್ರುಗಳನ್ನೂ ನಾಶಗೊಳಿಸುವ, ಅಕ್ಷಯವಾದ (ಫಲವನ್ನು ಕೊಡುವ) ಪರಮಪಾವನವಾದ (ಈ ಸ್ತೋತ್ರವು) ಜಯವನ್ನುಂಟುಮಾಡುವದಾಗಿರುವದು. ಆದ್ದರಿಂದ (ಜಯಾರ್ಥಿಗಳು) ಇದನ್ನು ಜಪಿಸಬೇಕು.

**ಸರ್ವಮಙ್ಗಲಮಙ್ಗಲ್ಯಂ[2] ಸರ್ವಪಾಪಪ್ರಣಾಶನಮ್ ।**
**ಚಿನ್ತಾಶೋಕಪ್ರಶಮನಂ ಆಯುರ್ವರ್ಧನಮುತ್ತಮಮ್ ॥೫॥**

೫. ಎಲ್ಲಾ ಮಂಗಳಗಳಿಗೂ ಮಂಗಳಕರವಾದ, ಎಲ್ಲಾ ಪಾಪಗಳನ್ನೂ ನಾಶಗೊಳಿಸುವ[3] ಚಿಂತೆ, ಶೋಕ, (ದುಃಖ)ಗಳನ್ನು ಪರಿಹರಿಸುವ,[4] ಆಯುಷ್ಯಾಭಿವೃದ್ಧಿಕರವಾದ ಉತ್ತಮವಾದ (ಫಲವುಳ್ಳದ್ದು ಈ ಸ್ತೋತ್ರವು.)

**ರಶ್ಮಿಮನ್ತಂ ಸಮುದ್ಯನ್ತಂ ದೇವಾಸುರನಮಸ್ಕೃತಮ್ ।**
**ಪೂಜಯಸ್ವ ವಿವಸ್ವನ್ತಂ ಭಾಸ್ಕರಂ ಭುವನೇಶ್ವರಮ್ ॥೬॥**

೬. (ಹೊಂಬಣ್ಣದ) ಪ್ರಶಸ್ತವಾದ ಕಿರಣಗಳುಳ್ಳ, ಚೆನ್ನಾಗಿ ಉದಯಿಸಿರುವ[5] ದೇವತೆಗಳಿಂದಲೂ ರಾಕ್ಷಸರಿಂದಲೂ ನಮಸ್ಕರಿಲ್ಪಡುವನಾದ, ನಿರತಿಶಯ ಪ್ರಕಾಶರೂಪನಾದ ಕಿರಣಗಳೆಂಬ ಕರ (ಕೈ)ಗಳುಳ್ಳ ಜಗದೊಡೆಯನಾದ (ಸೂರ್ಯನನ್ನು) ಪೂಜಿಸುವನಾಗು. ನಿರತಿಶಯಪ್ರಕಾಶರೂಪನಾದ[6] ಕಿರಣಗಳೆಂಬ ಕರ (ಕೈ) ಗಳುಳ್ಳ ಜಗದೊಡೆಯಾನಾದ (ಸೂರ್ಯನನ್ನು) ಪೂಜಿಸುವನಾಗು.

1. 'ಆದಿತ್ಯಸ್ಯ ಹೃದಯಮ್ ಆದಿತ್ಯಹೃದಯಮ್' ಎಂಬ ಸಮಾಸದಂತೆ ಸೂರ್ಯದೇವನ ಮನಃ ಪ್ರಸಾದಕರವಾದದ್ದು ಈ ಸ್ತೋತ್ರವು - ಎಂದು ವ್ಯಾಖ್ಯಾನ.
2. ಮಾಂಗಲ್ಯಂ ಎಂದು ಪಾ ||.
3. ಹಿಂದಿನ ಎಲ್ಲಾ ಸಂಚಿತಪಾಪಗಳನ್ನೂ ಕಳೆಯುವ - ಎಂದರ್ಥ.
4. ಆಧಿವ್ಯಾಧಿಗಳೆಂಬ ಮಾನಸಿಕ, ಶಾರೀರದುಃಖಗಳನ್ನು ಹೋಗಲಾಡಿಸುವ - ಎಂದರ್ಥ.
5. 'ಸಮುದ್ಯನ್ತಮ್' ಎಂಬುದಕ್ಕೆ ಉದಯಿಸುತ್ತಿರುವ ಎಂದರ್ಥ ಮಾಡಿದರೆ ಆಗಿನ್ನೂ ಪ್ರಾತಃಕಾಲವೆಂಬ ಅರ್ಥವಾಗುತ್ತದೆ. ಆದರೆ ಅಗಸ್ತ್ಯರು ಬಂದಾಗ ಅಪರಾಹ್ನ ಕಾಲವಾಗಿತ್ತು - ಎಂದು ಆ ಸಂದರ್ಭದ ಲಕ್ಷ್ಮಣನ ವಾಕ್ಯದಿಂದ ಗೊತ್ತಾಗುತ್ತದೆ. ಆದ್ದರಿಂದ ಸಮುದ್ಯನ್ತಮ್ ಎಂಬುದನ್ನು ಚೆನ್ನಾಗಿ ಉದಯಿಸಿರುವ ಎಂಬರ್ಥದಲ್ಲಿ ಪ್ರಯೋಗಿಸಿದೆ - ಎಂದು ವ್ಯಾಖ್ಯಾನ.
6. ವಿವಸ್ವನ್ತಮ್ ಎಂಬುದರ ಅರ್ಥವಿದು. ಉಳಿದ ತೇಜಸ್ಸುಗಳೆಲ್ಲವನ್ನೂ ತನ್ನ ಬೆಳಕಿನಿಂದ ವಿವಸ್ತೇ (ಆಚ್ಛಾದಯತಿ) ಮುಚ್ಚುತ್ತಾನೆ - ಎಂಬರ್ಥದಲ್ಲಿ ಈ ನಾಮವು- ಎಂದು ವ್ಯಾಖ್ಯಾನ.

# ಆದಿತ್ಯಸ್ತುತಿ

**ಸರ್ವದೇವಾತ್ಮಕೋ ಹ್ಯೇಷಃ ತೇಜಸ್ವೀ ರಶ್ಮಿಭಾವನಃ ।**
**ಏಷ ದೇವಾಸುರಗಣಾನ್ ಲೋಕಾನ್ ಪಾತಿ ಗಭಸ್ತಿಭಿಃ ॥೭॥**

೭. ಈತನು ಸರ್ವದೇವಾತ್ಮಕನು. ತೇಜಸ್ವಿಯು. ರಶ್ಮಿಗಳಿಂದ (ಎಲ್ಲವನ್ನೂ ಕಾಪಾಡುವವನು. ಇವನು ದೇವತೆಗಳು, ಅಸುರರೇ ಮುಂತಾದ ಗುಂಪುಗಳಾದ ಜನರೆಲ್ಲರನ್ನೂ ಕಿರಣಗಳಿಂದ[1] ಕಾಪಾಡುತ್ತಾನೆ.

**ಏಷ ಬ್ರಹ್ಮಾ ಚ ವಿಷ್ಣುಶ್ಚ ಶಿವಃ ಸ್ಕನ್ದಃ ಪ್ರಜಾಪತಿಃ ।**
**ಮಹೇನ್ದ್ರೋ ಧನದಃ ಕಾಲೋ ಯಮಃ ಸೋಮೋ ಹ್ಯಪಾಂ ಪತಿಃ ॥**

೮. ಇವನೇ ಬ್ರಹ್ಮನು, ವಿಷ್ಣುವು, ಶಿವನು, ಸುಬ್ರಹ್ಮಣ್ಯನು, ಪ್ರಜಾಪತಿಯು, ದೇವೇಂದ್ರನು, ಕುಬೇರನು, ಕಾಲನು, ಯಮನು, ಚಂದ್ರನು, ವರುಣನು - (ಎಲ್ಲವೂ ಇವನೇ ಆಗಿದ್ದಾನೆ).

**ಪಿತರೋ ವಸವಃ ಸಾಧ್ಯಾ ಅಶ್ವಿನೌ ಮರುತೋ ಮನುಃ ।**
**ವಾಯುರ್ವಹ್ನಿಃ ಪ್ರಜಾ ಪ್ರಾಣ ಋತುಕರ್ತಾ ಪ್ರಭಾಕರಃ ॥೯॥**

೯. (ಇವನೇ) ಪಿತೃದೇವತೆಗಳ (ರೂಪನು). ವಸುಗಳು, ಸಾಧ್ಯರು, ಅಶ್ವಿನೀದೇವತೆಗಳು, ಮರುದ್ದೇವತೆಗಳು, ಮನುವು - ಎಲ್ಲರೂ (ಇವನೇ). ವಾಯುವು, ಅಗ್ನಿಯು, ಪ್ರಾಣಿಗಳು, ಮುಖ್ಯಪ್ರಾಣನು, ಋತುಗಳನ್ನುಂಟುಮಾಡುವವನು, ಪ್ರಭಾಕರನು - ಎಲ್ಲವೂ ಇವನೇ.

**ಆದಿತ್ಯಃ ಸವಿತಾ ಸೂರ್ಯಃ ಖಗಃ ಪೂಷಾ ಗಭಸ್ತಿಮಾನ್ ।**
**ಸುವರ್ಣಸದೃಶೋ ಭಾನುಃ ಸ್ವರ್ಣರೇತಾ ದಿವಾಕರಃ ॥೧೦॥**

೧೦. (ನೀನು)[2] (ಎಲ್ಲವನ್ನೂ ತೆಗೆದುಕೊಳ್ಳುವದರಿಂದ) ಆದಿತ್ಯನು. (ಸರ್ವವನ್ನೂ ಉಂಟುಮಾಡುವದರಿಂದ) ಸವಿತಾ (ಎನಿಸಿರುತ್ತೀಯೆ). (ಪ್ರೇರಣೆ ಮಾಡುವದರಿಂದ) ಸೂರ್ಯನು. (ಆಕಾಶದಲ್ಲಿ ಸಂಚರಿಸುವದರಿಂದ) ಖಗನು. (ಪೋಷಿಸುತ್ತಾನಾದ್ದರಿಂದ) ಪೂಷನು. (ಕಿರಣಗಳುಳ್ಳವನಾದ್ದರಿಂದ) ಗಭಸ್ತಿಮಾನ್ (ಎನಿಸುವನು.). ಚಿನ್ನದಂತೆ ಹೊಂಬಣ್ಣನಾಗಿರುವವನು. (ಪ್ರಕಾಶರೂಪನಾದ್ದರಿಂದ) ಭಾನುವು. ಚಿನ್ನವನ್ನೇ ವೀರ್ಯನಾಗಿ ಉಳ್ಳವನು. ಹಗಲನ್ನು ಉಂಟುಮಾಡುವವನು.

**ಹರಿದಶ್ವಃ ಸಹಸ್ರಾರ್ಚಿಃ ಸಪ್ತಸಪ್ತಿರ್ಮರೀಚಿಮಾನ್ ।**
**ತಿಮಿರೋನ್ಮಥನಃ ಶಂಭುಸ್ತ್ವಷ್ಟಾ ಮಾರ್ತಾಣ್ಡ ಅಂಶುಮಾನ್ ॥೧೧॥**

1. ಸೂರ್ಯನು ಪ್ರಕಾಶಿಸುವದರಿಂದಲೇ ಮಳೆಯು ಬರುತ್ತದೆ. ಮಳೆಯಿಂದ ಅನ್ನ, ಅನ್ನದಿಂದ ಪ್ರಾಣಿಗಳು - ಹೀಗೆ ಎಲ್ಲರನ್ನೂ ಇವನು ಕಾಪಾಡುತ್ತಾನೆ.
2. ಇಲ್ಲಿಂದ ಆದಿತ್ಯಹೃದಯಸ್ತೋತ್ರದ ಮುಖ್ಯಸ್ತುತಿಭಾಗವೆಂದೂ `ತ್ವಂ' ಪದವನ್ನು ಸೇರಿಸಿಕೊಂಡು ನೀನು ಆದಿತ್ಯನು, ನೀನು ಸವಿತೃವು - ಎಂದು ಅರ್ಥಮಾಡಬೇಕೆಂದೂ ವ್ಯಾಖ್ಯಾನ.

೧೧. ಹಸಿರುಬಣ್ಣದ ಕುದುರೆಯುಳ್ಳವನು. ಸಹಸ್ರಕಿರಣನು. ಸಪ್ತ ಎಂಬ ಹೆಸರಿನ ಕುದುರೆಯುಳ್ಳವನು. ಕಿರಣಗಳುಳ್ಳವನು. ಕತ್ತಲೆಯನ್ನು ನಾಶಗೊಳಿಸುವವನು. ಸುಖವನ್ನುಂಟುಮಾಡುವವನು. ಎಲ್ಲವನ್ನೂ ಸಂಹಾರಮಾಡುವವನು. ಮೃತ (ಅಚೇತನವಾದ) ಬ್ರಹ್ಮಾಂಡವನ್ನು ಜೀವನಗೊಳಿಸುವನಾದ್ದರಿಂದ ಮಾರ್ತಾಂಡನು. (ಪ್ರಕಾಶಮಾನವಾದ ಪ್ರಶಸ್ತ)ಕಿರಣಗಳುಳ್ಳವನು.

**ಹಿರಣ್ಯಗರ್ಭಃ ಶಿಶಿರಃ ತಪನೋ ಭಾಸ್ಕರೋ ರವಿಃ ।**
**ಅಗ್ನಿಗರ್ಭೋಽದಿತೇಃ ಪುತ್ರಃ ಶಙ್ಖಃ ಶಿಶಿರನಾಶನಃ** ॥೧೨॥

೧೨. ಹಿರಣ್ಯಗರ್ಭನು[1] (ತಾಪತ್ರಯಗಳಿಂದ ಬಳಲಿದವರಿಗೆ ವಿಶ್ರಾಂತಿ ಸ್ಥಾನನೆನಿಸಿರುವದರಿಂದ) ಶಿಶಿರನು. ಸುಡುವದರಿಂದ ತಪನನು. ಬೆಳಕನ್ನುಂಟು ಮಾಡುವದರಿಂದ ಭಾಸ್ಕರನು. ಎಲ್ಲರಿಂದಲೂ (ರೂಯತೇ) ಸ್ತೋತ್ರಮಾಡಲ್ಪಡುವನಾದ್ದರಿಂದ ರವಿಯು. (ಹಗಲಿನಲ್ಲಿ) ಅಗ್ನಿಯನ್ನು ಗರ್ಭದಲ್ಲಿ ಹೊಂದಿರುವನಾದ್ದರಿಂದ ಅಗ್ನಿಗರ್ಭನು.[2] ಅದಿತಿದೇವಿಗೆ ಮಗನಾಗಿ ಅವತರಿಸಿದ್ದರಿಂದ ಅದಿತಿಪುತ್ರನು. ಖೇ-ಹೃದಯಾಕಾಶದಲ್ಲಿ ಶಂ-ಸುಖವುಳ್ಳವನಾದ್ದರಿಂದ (ನಿರತಿಶಯಾನಂದರೂಪನಾದ್ದರಿಂದ)ಶಂಖನು. ಹಿಮವನ್ನು ನಾಶಗೊಳಿಸುವನಾದ್ದರಿಂದ ಶಿಶಿರನಾಶನನು.

**ವ್ಯೋಮನಾಥಸ್ತಮೋಭೇದೀ ಋಗ್ಯಜುಃಸಾಮಪಾರಗಃ ।**
**ಘನವೃಷ್ಟಿರಪಾಂ ಮಿತ್ರೋ ವಿನ್ಧ್ಯವೀಥೀ ಪ್ಲವಙ್ಗಮಃ** ॥೧೩॥

೧೩. ಆಕಾಶಕ್ಕೆ ಒಡೆಯನಾದ್ದರಿಂದ ವ್ಯೋಮನಾಥನು. ತಮಸ್ಸನ್ನು (ರಾಹುವನ್ನು) ನಾಶಗೊಳಿಸುವ ಸ್ವಭಾವದವನಾದ್ದರಿಂದ ತಮೋಭೇದಿಯು. (ಸಕಲವೇದಗಳಿಗೂ ತಾತ್ಪರ್ಯಸ್ಥಾನನಾದ್ದರಿಂದ) ಋಗ್ಯಜುಃಸಾಮಪಾರಗನು. (ಯಾವನಿಂದ) ದಟ್ಟವಾದ ಮಳೆಯುಂಟಾಗುವದೋ ಅವನು ಘನವೃಷ್ಟಿಯು. ಅದ್ದರಿಂದಲೇ (ನೀರಿಗೆ ಸ್ನೇಹಿತನಾಗಿ) ಅಪಾಂಮಿತ್ರ (ನೆನಿಸಿರುವನು). (ದಕ್ಷಿಣಾಯನದಲ್ಲಿ ವಿಂಧ್ಯಪರ್ವತವು ಸಂಚಾರಭೂಮಿಯಾಗಿರುವದರಿಂದ ವಿಂಧ್ಯವೀಥಿಯು (ದೋಣಿಯಂತೆ ಶೀಘ್ರವಾಗಿ ಸಾಗಿಹೋಗುವವನಾದ್ದರಿಂದ) ಪ್ಲವಂಗಮನು.

**ಆತಪೀ ಮಣ್ಡಲೀ ಮೃತ್ಯುಃ ಪಿಙ್ಗಲಃ ಸರ್ವತಾಪನಃ ।**
**ಕವಿರ್ವಿಶ್ವೋ ಮಹಾತೇಜಾ ರಕ್ತಃ ಸರ್ವಭವೋದ್ಭವಃ** ॥೧೪॥

1. ಹಿರಣ್ಯಗರ್ಭನೆಂದರೆ ಬ್ರಹ್ಮನೆಂದರ್ಥ, ಹಿತನಾಗಿಯೂ ರಮಣೀಯವಾಗಿಯೂ ಇರುವ ಗರ್ಭವೆಂದರೆ ಅಂತಃಕರಣವುಳ್ಳವನಾದ್ದರಿಂದ ಹಿರಣ್ಯಗರ್ಭನು ಎಂಬ ಅರ್ಥ ಸ್ವಾರಸ್ಯವನ್ನೂ ವ್ಯಾಖ್ಯಾನದಲ್ಲಿ ತೆಗೆದಿದೆ.
2. 'ಉದ್ಯನ್ತಂ ಹ ವಾ ಆದಿತ್ಯಮಗ್ನಿರನು ಸಮಾರೋಹತಿ' ಎಂಬ ಶ್ರುತಿಯಂತೆ ಅಗ್ನಿಗರ್ಭನು.

೧೪. ಆತಪವೆಂದರೆ ಶಾಖವುಳ್ಳವನಾದ್ದರಿಂದ ಆತಪಿಯು.[1] (ವೃತ್ತಾಕಾರವಾದ ಬಿಂಬವುಳ್ಳವನಾದ್ದರಿಂದ) ಮಂಡಲಿಯು. ಮೃತ್ಯುವನ್ನುಂಟುಮಾಡುವನಾದ್ದರಿಂದ ಮೃತ್ಯುವು.[2] (ಉದಯಕಾಲದಲ್ಲಿ ಹಳದಿಮಿಶ್ರವಾದ ಕಂಪುಬಣ್ಣವುಳ್ಳವನಾದ್ದರಿಂದ) ಪಿಂಗಲನು. (ಎಲ್ಲರನ್ನೂ ಮಧ್ಯಾಹ್ನವೇಳೆಯಲ್ಲಿ ಸುಡುವನಾದ್ದರಿಂದ) ಸರ್ವತಾಪನನು. ಸರ್ವಜ್ಞನಾದ್ದರಿಂದ ಕವಿಯು. ಜಗದ್ರೂಪನಾದ್ದರಿಂದ ವಿಶ್ವನು. ಅತಿಹೆಚ್ಚಿನ ಪ್ರಕಾಶವುಳ್ಳವನಾದ್ದರಿಂದ ಮಹಾತೇಜನು, ಎಲ್ಲರನ್ನೂ ರಂಜಿಸುವನಾದ್ದರಿಂದ ರಕ್ತನು. ಹುಟ್ಟುವ ಎಲ್ಲಾ ವಸ್ತುಗಳಿಗೂ ಉತ್ಪತ್ತಿಕಾರಣನಾದ್ದರಿಂದ ಸರ್ವಭವೋದ್ಭವನು.

**ನಕ್ಷತ್ರಗ್ರಹತಾರಾಣಾಮಧಿಪೋ ವಿಶ್ವಭಾವನಃ।**
**ತೇಜಸಾಮಪಿ ತೇಜಸ್ವೀ ದ್ವಾದಶಾತ್ಮನ್ ನಮೋಽಸ್ತು ತೇ ॥೧೫॥**

೧೫. ನಕ್ಷತ್ರಗಳಿಗೂ ಗ್ರಹಗಳಿಗೂ ತಾರೆಗಳಿಗೂ ಯಜಮಾನನು. ಪ್ರಪಂಚವನ್ನು ಉಂಟುಮಾಡುವವನಾದ್ದರಿಂದ ವಿಶ್ವಭಾವನನು. ಅಗ್ನಿಯೇ ಮೊದಲಾದ ತೇಜೋಮಯರಾದ ದೇವತೆಗಳಿಗಿಂತಲೂ ಹೆಚ್ಚಿನವನಾದ್ದರಿಂದ ತೇಜಸ್ವೀ (ಎನಿಸುವನು). ಎಲೈ ದ್ವಾದಶಾತ್ಮನೆ,[3] ನಿನಗೆ ನಮಸ್ಕಾರ !

## ಆದಿತ್ಯನಿಗೆ ವಂದನೆ

**ನಮಃ ಪೂರ್ವಾಯ ಗಿರಯೇ ಪಶ್ಚಿಮಾಯಾದ್ರಯೇ[4] ನಮಃ।**
**ಜ್ಯೋತಿರ್ಗಣಾನಾಂ ಪತಯೇ ದಿನಾಧಿಪತಯೇ ನಮಃ ॥೧೬॥**

೧೬. ಪೂರ್ವದಿಕ್ಕಿನಲ್ಲಿರುವ ಬೆಟ್ಟದ (ರೂಪನಾದ)ವನಿಗೆ ನಮಸ್ಕಾರ.[5] ಹಾಗೆಯೇ ಪಶ್ಚಿಮದಿಕ್ಕಿನಲ್ಲಿರುವ ಬೆಟ್ಟದ (ರೂಪನಾದ)ವನಿಗೆ ನಮಸ್ಕಾರ. ತೇಜೋರೂಪವಾದ ವಸ್ತುಗಳ ಗುಂಪಿಗೆ ಒಡೆಯನಾದ ಹಾಗೂ ಹಗಲಿಗೆ ಅಧಿಪತಿಯಾದವನಿಗೆ ನಮಸ್ಕಾರವು.

**ಜಯಾಯ ಜಯಭದ್ರಾಯ ಹರ್ಯಶ್ವಾಯ ನಮೋ ನಮಃ।**
**ನಮೋ ನಮಃ ಸಹಸ್ರಾಂಶೋ ಆದಿತ್ಯಾಯ ನಮೋ ನಮಃ ॥೧೭॥**

೧೭. (ಭಕ್ತರಿಗೆ) ಜಯವನ್ನುಂಟುಮಾಡುವವನಿಗೆ, ಜಯವನ್ನೂ ಮಂಗಳವನ್ನೂ ಕೊಡುವ ಜಯಭದ್ರನಿಗೆ, ಹಸಿರುಬಣ್ಣದ ಕುದುರೆಯುಳ್ಳಾತನಿಗೆ, ನಮಸ್ಕಾರವು. ಎಲೈ ಸಹಸ್ರಾಂಶುವೆ, ಆದಿತ್ಯನಾದ (ನಿನಗೆ) (ಮತ್ತೆ ಮತ್ತೆ) ನಮಸ್ಕಾರವು..

---

1. ಜಗತ್ತನ್ನು ನಿರ್ಮಾಣಮಾಡುವ ಸಂಕಲ್ಪರೂಪವಾದ ತಪಸ್ಸುಳ್ಳವನಾದ್ದರಿಂದ ಆತಪಿಯು - ಎಂದೂ ಅರ್ಥಮಾಡಬಹುದು.
2. ಕಾಲರೂಪದಿಂದ ಎಲ್ಲಾ ಪ್ರಾಣಿಗಳನ್ನೂ ಭಕ್ಷಿಸುವನೆಂದರ್ಥ.
3. 'ಇನ್ದ್ರೋ ಧಾತಾ ಭಗಃ ಪೂಷಾ ಮಿತ್ರೋಽಥ ವರುಣೋಽರ್ಯಮಾ। ಅರ್ಚಿರ್ವಿವಸ್ವಾನ್ ತ್ವಷ್ಟಾ ಚ ಸವಿತಾ ವಿಷ್ಣುರೇವ ಚ' ಎಂಬ ಪುರಾಣವಚನದಂತೆ ದ್ವಾದಶಾದಿತ್ಯರೂಪನೆಂದು ವ್ಯಾಖ್ಯಾನ. ಭಗವದ್ಗೀತೆಯಲ್ಲಿ 'ಆದಿತ್ಯಾನಾಮಹಂ ವಿಷ್ಣುಃ' (ಗೀ. ೧೦-೨೧) ಎಂದು ಹೇಳಿರುವದನ್ನು ಈ ಶ್ಲೋಕದಿಂದ ವಿವರಿಸಬಹುದಾಗಿದೆ.
4. 'ಪಶ್ಚಿಮೇ ಗಿರಯೇ' ಎಂದು ಪಾ॥
5. 'ಭೂತಾನಿ ವಿಷ್ಣುಃ ...ಗಿರಯೋ ದಿಶಶ್ಚ' ಎಂಬ ವಿಷ್ಣುಪುರಾಣವಚನದಂತೆ ಸ್ಥಾವರಜಂಗಮಗಳೆಲ್ಲವೂ ಸೂರ್ಯಭಗವಂತನೇ - ಎಂದು ವ್ಯಾಖ್ಯಾನ.

**ನಮ ಉಗ್ರಾಯ ವೀರಾಯ ಸಾರಙ್ಗಾಯ ನಮೋ ನಮಃ ।**
**ನಮಃ ಪದ್ಮಪ್ರಬೋಧಾಯ ಮಾರ್ತಾಣ್ಡಾಯ ನಮೋ ನಮಃ ॥೧೮॥**

೧೮. ಉಗ್ರ(ರೂಪ)ನಾದವನಿಗೆ, ವೀರನಾದವನಿಗೆ,[1] (ಶೀಘ್ರವಾಗಿ ಹೋಗುವವನಾದ್ದರಿಂದ) ಸಾರಂಗನೆನಿಸಿರುವವನಿಗೆ[2] ನಮಸ್ಕಾರವು. ಪದ್ಮ (ಕಮಲ) ಪುಷ್ಪವನ್ನು ಅರಳಿಸುವವನಿಗೆ ನಮಸ್ಕಾರವು. ಮಾರ್ತಾಂಡನಿಗೆ ನಮಸ್ಕಾರವು.

**ಬ್ರಹ್ಮೇಶಾನಾಚ್ಯುತೇಶಾಯ ಸೂರ್ಯಾಯಾದಿತ್ಯವರ್ಚಸೇ ।**
**ಭಾಸ್ವತೇ ಸರ್ವಭಕ್ಷಾಯ ರೌದ್ರಾಯ ವಪುಷೇ ನಮಃ ॥೧೯॥**

೧೯. (ಸೃಷ್ಟಿಕರ್ತನಾದ) ಬ್ರಹ್ಮ, (ಲಯಕರ್ತನಾದ) ರುದ್ರ, (ಸ್ಥಿತಿಕರ್ತನಾದ) ವಿಷ್ಣು - ಈ ಮೂವರಿಗೂ ಒಡೆಯನಾಗಿರುವ[3] ಸೂರ್ಯನಾದ ಆದಿತ್ಯ(ರೂಪ)ವಾದ ಕಾಂತಿಯುಳ್ಳಾತನಿಗೆ (ನಮಸ್ಕಾರವು). ಎಲ್ಲವನ್ನೂ (ಪ್ರಲಯಕಾಲದಲ್ಲಿ) ನುಂಗುವ ಭಯಂಕರವಾದ ಶರೀರವುಳ್ಳ ತೇಜೋಮಯನಿಗೆ ನಮಸ್ಕಾರವು.

**ತಮೋಘ್ನಾಯ ಹಿಮಘ್ನಾಯ ಶತ್ರುಘ್ನಾಯಾಮಿತಾತ್ಮನೇ ।**
**ಕೃತಘ್ನಘ್ನಾಯ ದೇವಾಯ ಜ್ಯೋತಿಷಾಂ ಪತಯೇ ನಮಃ ॥೨೦॥**

೨೦. ತಮಸ್ಸನ್ನು (ಅಂಧಕಾರವನ್ನು) ಕಳೆಯುವನಾದ, ಹಿಮ (ಮಂಜು)ವನ್ನು ಕರಗಿಸುವವನಾದ, ಶತ್ರುಗಳನ್ನು ನಾಶಗೊಳಿಸುವವನಾದ,[4] ಕಾಲದೇಶಪರಿಚ್ಛೇದವಿಲ್ಲದ ಸ್ವರೂಪವುಳ್ಳ, ಕೃತಘ್ನ (ಭಗವಂತನಿಗೆ ವಿಮುಖರಾದ ಜನರನ್ನು) ವಿನಾಶಗೊಳಿಸುವ, ಜ್ಯೋತಿಗಳಿಗೆಲ್ಲ ಪತಿಯಾದ ದೇವನಿಗೆ ನಮಸ್ಕಾರ.

**ತಪ್ತಚಾಮೀಕರಾಭಾಯ ವಹ್ನಯೇ ವಿಶ್ವಕರ್ಮಣೇ ।**
**ನಮಸ್ತಮೋಭಿನಿಘ್ನಾಯ ರವಯೇ[5] ಲೋಕಸಾಕ್ಷಿಣೇ ॥೨೧॥**

೨೧. ಪುಟವಿಟ್ಟ ಚಿನ್ನದಂತೆ ಕಾಂತಿಯುಳ್ಳ, ಅಗ್ನಿರೂಪನಾಗಿರುವ, ಪ್ರಪಂಚವನ್ನೆಲ್ಲ ಉಂಟುಮಾಡಿರುವ, ಕತ್ತಲೆಯನ್ನು ಕಳೆಯುವ, ಲೋಕ (ಜನರ) ಪುಣ್ಯಪಾಪಕರ್ಮಗಳಿಗೆ ಸಾಕ್ಷಿಯಾದ ರವಿಗೆ ನಮಸ್ಕಾರವು.

1. ವಿವಿಧಮ್ - ಈರಯತಿ ವೀರಃ ಎಂಬ ವ್ಯುತ್ಪತ್ತಿಯಂತೆ ನಾನಾರೀತಿಯಿಂದ ಪ್ರಾಣಿಗಳನ್ನು ವ್ಯಾಪಾರಗೊಳಿಸುತ್ತಾನಾದ್ದರಿಂದ ವೀರನು - ಎಂದು ವ್ಯಾಖ್ಯಾನ.
2. ಸಾರಂ ಶೀಘ್ರಂ ಗಚ್ಛತೀತಿ ಸಾರಙ್ಗಃ - ಎಂಬ ನಿರ್ವಚನದಂತೆ ಈ ಅರ್ಥವನ್ನು ಮಾಡಿದೆ. ಸೂರ್ಯನು ಅರ್ಧನಿಮಿಷದಲ್ಲಿ ಎರಡು ಸಹಸ್ರಯೋಜನಗಳನ್ನು ದಾಟುವನೆಂದು ಪುರಾಣಪ್ರಸಿದ್ಧಿಯಿದೆ. ವಿಷ್ಣುಸಹಸ್ರನಾಮದ 'ಲೋಕಸಾರಙ್ಗಃ' (೭೮೩) ಎಂಬ ನಾಮನಿರ್ವಚನವನ್ನು ಇದಕ್ಕೆ ಹೋಲಿಸಿರಿ.
3. 'ಅಸಾವಾದಿತ್ಯೋ ಬ್ರಹ್ಮ' ಎಂಬ ಶ್ರುತಿಯಂತೆ ತ್ರಿಮೂರ್ತಿಗಳಿಗೂ ಒಡೆಯನಾದ ಪರಬ್ರಹ್ಮವೇ ಆದಿತ್ಯನೆಂದು ಸ್ತೋತ್ರಮಾಡಿದೆ - ಎಂದು ವ್ಯಾಖ್ಯಾನ.
4. ದೇಹವೇ ತಾನೆಂಬ ಭಾವನೆಯೇ ಶತ್ರುವೆಂದೂ ತನ್ನ ತತ್ತ್ವವನ್ನರಿಯುವ ಮೂಲಕ ಅದನ್ನು ನಾಶಗೊಳಿಸುವದರಿಂದ ಶತ್ರುಘ್ನನೆಂದೂ ವ್ಯಾಖ್ಯಾನ.
5. 'ರುಚಯೇ' ಎಂದು ಪಾ ॥

## ಆದಿತ್ಯನ ನಿರತಿಶಯಸ್ವರೂಪ

**ನಾಶಯತ್ಯೇಷ ವೈ ಭೂತಂ ತದೇವ ಸೃಜತಿ ಪ್ರಭುಃ ।**
**ಪಾಯತ್ಯೇಷ ತಪತ್ಯೇಷ ವರ್ಷತ್ಯೇಷ ಗಭಸ್ತಿಭಿಃ ॥೨೨॥**

೨೨. ಇವನು (ಸಂಹಾರಕಾಲದಲ್ಲಿ) ಭೂತ(ಗಳನ್ನು) ನಾಶಗೊಳಿಸುತ್ತಾನೆ. (ಸೃಷ್ಟಿಕಾಲದಲ್ಲಿ) ಅದನ್ನೇ ಉಂಟುಮಾಡುವನು. (ಸ್ಥಿತಿಕಾಲದಲ್ಲಿ) ಕಾಪಾಡುತ್ತಾನೆ. ಕಿರಣಗಳಿಂದ ತಪಿಸುತ್ತಾ (ಶಾಖವನ್ನುಂಟು)ಮಾಡುತ್ತಾನೆ. ಮತ್ತು ಮಳೆಗರೆಯುತ್ತಾನೆ.

**ಏಷ ಸುಪ್ತೇಷು ಜಾಗರ್ತಿ ಭೂತೇಷು ಪರಿನಿಷ್ಠಿತಃ ।**
**ಏಷ ಏವಾಗ್ನಿಹೋತ್ರಂ ಚ ಫಲಂ ಚೈವಾಗ್ನಿಹೋತ್ರಿಣಾಮ್ ॥೨೩॥**

೨೩. ಪ್ರಾಣಿಗಳು ಮಲಗಿರುವಾಗ ಇವನು ಎಚ್ಚತ್ತಿರುವನು.[1] ಭೂತಗಳಲ್ಲಿ ಇವನು (ಅಂತರ್ಯಾಮಿರೂಪದಿಂದ ಸ್ವತಃಸಿದ್ಧನಾಗಿ) ಎಂದೆಂದಿಗೂ ಇದ್ದುಕೊಂಡಿರುವನು. ಇವನೇ ಅಗ್ನಿಹೋತ್ರವು. ಮತ್ತು ಅಗ್ನಿಹೋತ್ರವನ್ನು ಮಾಡುವವರ ಫಲವೂ ಇವನೇ.[2]

**ವೇದಾಶ್ಚ ಕ್ರತವಶ್ಚೈವ ಕ್ರತೂನಾಂ ಫಲಮೇವ ಚ ।**
**ಯಾನಿ ಕೃತ್ಯಾನಿ ಲೋಕೇಷು ಸರ್ವ ಏಷ ರವಿಃ ಪ್ರಭುಃ ॥೨೪॥**

೨೪. ವೇದಗಳೂ ಯಜ್ಞಗಳೂ ಯಜ್ಞಗಳ ಫಲವೂ (ಇವನೇ). ಇಷ್ಟೇ ಅಲ್ಲ; ಬ್ರಹ್ಮಾಂಡದಲ್ಲಿ ಯಾವಯಾವ (ಸಾತ್ತ್ವಿಕವಾದ ಪುಣ್ಯ) ಕರ್ಮಗಳಿವೆಯೋ ಅವೆಲ್ಲವೂ ಈ ಪ್ರಭುವಾದ ರವಿಯ (ಸ್ವರೂಪವೇ ಆಗಿವೆ).

**ಏನಮಾಪತ್ಸು ಕೃಚ್ಛ್ರೇಷು ಕಾನ್ತಾರೇಷು ಭಯೇಷು ಚ ।**
**ಕೀರ್ತಯನ್ ಪುರುಷಃ ಕಶ್ಚಿದ್ ನಾವಸೀದತಿ ರಾಘವ ॥೨೫॥**

೨೫. ಎಲೈ ರಾಘವನೆ, ಸಂಕಟಗಳಲ್ಲಿಯೂ ಕಷ್ಟಗಳಲ್ಲಿಯೂ ಕಾಡುಗಳಲ್ಲಿ (ಏಕಾಕಿಯಾಗಿ) ಇರುವಾಗಲೂ ಭಯವುಂಟಾದಾಗಲೂ ಯಾವನೇ ಮಾನವನು[3] ಇವನನ್ನು ಕೀರ್ತನಮಾಡುವನೋ ಅಂಥವನು ಎಂದಿಗೂ ವಿಷಾದವನ್ನು ಹೊಂದುವದಿಲ್ಲ.[4]

1. ರಾತ್ರಿವೇಳೆಯಲ್ಲಿ ಆದಿತ್ಯನು ಕಾಣಿಸದೇ ಹೋದರೂ ಅವನ ಶಾಖವು (ಉಷ್ಣಾಂಶವು) ಇದ್ದುಕೊಂಡೇ ಇರುವದು. ಆದ್ದರಿಂದ ರೂಪಾಂತರದಿಂದ ಸೂರ್ಯನು ಇದ್ದಂತಾಯಿತು. ಪರಮಾರ್ಥದೃಷ್ಟಿಯಿಂದ ಆದಿತ್ಯಾಂತರ್ಗತನಾದ ಪರಮಾತ್ಮನೇ ಅವಸ್ಥಾತ್ರಯಗಳಿಗೂ ಸಾಕ್ಷಿಯಾಗಿರುವದರಿಂದ ಆತ್ಮನಿಗೆ ನಿದ್ರೆಯೆಂಬುದಿಲ್ಲ. ಕಠೋಪನಿಷತ್ತಿನ 'ಯ ಏಷ ಸುಪ್ತೇಷು ಜಾಗರ್ತಿ' (ಕ. ೫-೮) ಎಂಬ ಮಂತ್ರವನ್ನು ಇದಕ್ಕೆ ಹೋಲಿಸಿರಿ.
2. ಅಗ್ನಿಹೋತ್ರವೆಂಬುದು ಒಂದು ಶ್ರೌತಕರ್ಮ. ಆದಿತ್ಯನು ಉದಯಿಸಲಾಗಿ ಈ ಕರ್ಮವನ್ನು ಮಾಡುವರು. ಎಲ್ಲಾ ಕರ್ಮಗಳಿಗೂ ಕಾಲನಿಯಮವಿರುವದರಿಂದ ಕಾಲರೂಪನೇ ಆದ ಆದಿತ್ಯನು ಸಕಲಕರ್ಮಗಳೂ ಅವುಗಳ ಫಲಗಳು ಆಗಿರುವನೆಂದು ಸ್ತುತಿಸಿದೆ. ಮುಂದಿನ ಶ್ಲೋಕವನ್ನು ನೋಡಿರಿ.
3. ಈ ಸ್ತೋತ್ರವನ್ನು ಜಾತಿ, ಕುಲ - ಮುಂತಾದ ಯಾವ ಅಧಿಕಾರಭೇದವೂ ಇಲ್ಲದೆ ಸ್ತ್ರೀಪುರುಷರೆಲ್ಲರೂ ಪಠಿಸಬಹುದೆಂಬುದನ್ನು ಇಲ್ಲಿ ಸೂಚಿಸಿದೆ.
4. ವಿಜಯಿಯಾಗುತ್ತಾನೆ - ಎಂದಭಿಪ್ರಾಯ

## ಶ್ರೀರಾಮನಿಗೆ ಉಪದೇಶ

ಪೂಜಯಸ್ವೈನಮೇಕಾಗ್ರೋ ದೇವದೇವಂ ಜಗತ್ಪತಿಮ್ ।
ಏತತ್ತ್ರಿಗುಣಿತಂ ಜಪ್ತ್ವಾ ಯುದ್ಧೇಷು ವಿಜಯಿಷ್ಯಸಿ ॥೨೬॥

೨೬. ದೇವದೇವನೂ ಜಗತ್ತಿಗೆಲ್ಲ ಒಡೆಯನೂ ಆದ ಇವನನ್ನು ಚಿತ್ತೈಕಾಗ್ರತೆಯಿಂದ ಪೂಜಿಸುವನಾಗು. ಈ (ಸ್ತೋತ್ರವನ್ನು) ಮೂರು ಬಾರಿ ಜಪಮಾಡಿದರೆ ಯುದ್ಧದಲ್ಲಿ ವಿಜಯಿಯಾಗುವೆ.

ಅಸ್ಮಿನ್ ಕ್ಷಣೇ ಮಹಾಬಾಹೋ ರಾವಣಂ ತ್ವಂ ವಧಿಷ್ಯಸಿ ।
ಏವಮುಕ್ತ್ವಾ ತದಾಽಗಸ್ತ್ಯೋ ಜಗಾಮ ಚ ಯಥಾಗತಮ್ ॥೨೭॥

೨೭. ಎಲೈ ಮಹಾಬಾಹುವೆ, ಈ ಕ್ಷಣದಲ್ಲಿಯೇ ನೀನು ರಾವಣನನ್ನು ಕೊಲ್ಲುವವನಾಗುವೆ. ಹೀಗೆಂದು ಅಗಸ್ತ್ಯನು ನುಡಿದವನಾಗಿ ತಾನು ಬಂದಂತೆಯೇ (ಹಿಂತಿರುಗಿ) ಹೋದನು.

## ಶ್ರೀರಾಮನು ಸ್ತೋತ್ರವನ್ನು ಜಪಿಸಿದ್ದು

ಏತಚ್ಛ್ರುತ್ವಾ ಮಹಾತೇಜಾಃ ನಷ್ಟಶೋಕೋಽಭವತ್ತದಾ ।
ಧಾರಯಾಮಾಸ ಸುಪ್ರೀತೋ ರಾಘವಃ ಪ್ರಯತಾತ್ಮವಾನ್ ॥೨೮॥

೨೮. ಮಹಾತೇಜಸ್ವಿಯಾದ ರಾಘವನು ಇದನ್ನು ಶ್ರವಣಮಾಡಿದ ಅನಂತರ ಶೋಕದಿಂದ ಬಿಡುಗಡೆಯನ್ನು ಹೊಂದಿದನು. ಮತ್ತು ಪರಿಶುದ್ಧಹೃದಯನಾಗಿ ಸಂತೋಷದಿಂದ ಈ ಸ್ತೋತ್ರವನ್ನು ತನ್ನಲ್ಲಿ ಧಾರಣೆಮಾಡಿಕೊಂಡನು.[1]

ಆದಿತ್ಯಂ ಪ್ರೇಕ್ಷ್ಯ ಜಪ್ತ್ವಾ ತು ಪರಂ ಹರ್ಷಮವಾಪ್ತವಾನ್ ।
ತ್ರಿರಾಚಮ್ಯ ಶುಚಿರ್ಭೂತ್ವಾ ಧನುರಾದಾಯ ವೀರ್ಯವಾನ್ ॥೨೯॥

ರಾವಣಂ ಪ್ರೇಕ್ಷ್ಯ ಹೃಷ್ಟಾತ್ಮಾ ಯುದ್ಧಾಯ ಸಮುಪಾಗಮತ್ ।
ಸರ್ವಯತ್ನೇನ ಮಹತಾ ವಧೇ ತಸ್ಯ ಧೃತೋಽಭವತ್ ॥೩೦॥

1. ಉಪದೇಶವನ್ನು ಗ್ರಹಿಸಿ ಅಭ್ಯಾಸಮಾಡಿ ತನ್ನಲ್ಲಿಯೇ ನೆಲೆಗೊಳಿಸಿಕೊಂಡನೆಂದರ್ಥ.

೨೯-೩೦. ಶುಚಿರ್ಭೂತನಾಗಿ ಮೂರುಬಾರಿ ಆಚಮನಮಾಡಿ ಸೂರ್ಯನನ್ನು ನೋಡುತ್ತಾ (ಈ ಸ್ತೋತ್ರವನ್ನು) ಜಪಿಸಿ ಹೆಚ್ಚಿನ ಆನಂದವನ್ನು ಪಡೆದನು. ವೀರ್ಯವಂತನಾದ (ಅವನು) ರಾವಣನನ್ನು ಕಂಡು ಸಂತೋಷದಿಂದ ಯುದ್ಧಕ್ಕೆ ಹೊರಟನು. ಮತ್ತು ಹೆಚ್ಚಿನದಾದ ಸಕಲ ಪ್ರಯತ್ನಗಳಿಂದಲೂ ಆ (ರಾವಣನ) ವಧೆಯನ್ನು (ಮಾಡುವದರಲ್ಲಿ) ನಿಶ್ಚಯವುಳ್ಳವನಾದನು.

**ಅಥ ರವಿರವದನ್ನಿರೀಕ್ಷ್ಯ ರಾಮಂ।**
**ಮುದಿತಮನಾಃ ಪರಮಂ ಪ್ರಹೃಷ್ಯಮಾಣಃ॥**
**ನಿಶಿಚರಪತಿಸಂಕ್ಷಯಂ ವಿದಿತ್ವಾ**
**ಸುರಗಣಮಧ್ಯಗತೋ ವಚಸ್ತ್ವರೇತಿ** ॥೩೧॥

೩೧. ಅನಂತರ (ಸ್ತೋತ್ರ ಮಾಡುತ್ತಿರುವ) ರಾಮನನ್ನು ನೋಡಿದ ಸೂರ್ಯನು ಸಂತುಷ್ಟಮನಸ್ಕನಾಗಿ ಹೆಚ್ಚಿನ ಹರ್ಷದಿಂದ ಕೂಡಿ ದೇವತೆಗಳ ಗುಂಪಿನ ನಡುವೆ ಇದ್ದುಕೊಂಡವನಾಗಿ (ರಾಮನಿಗೆ) ನಿಶಾಚರಪತಿಯಾದ ರಾವಣನ ನಾಶದ (ಉಪಾಯವನ್ನು) ತಿಳಿಸಿಕೊಟ್ಟು ತ್ವರೆಮಾಡು (ಬೇಗ ರಾವಣನನ್ನು ವಧೆಮಾಡು) ಎಂದು ಹೇಳಿದನು.[1]

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಣ್ಡೇ ಆದಿತ್ಯಹೃದಯಂ ನಾಮ
ಸಪ್ತೋತ್ತರಶತತಮಃ ಸರ್ಗಃ ॥

2. ಶ್ರೀರಾಮನು ಸೂರ್ಯವಂಶೋತ್ಪನ್ನನೇ ಆದ್ದರಿಂದ ತನ್ನ ಕುಲದೈವನಾದ ಆದಿತ್ಯನನ್ನು ಉಪಾಸನೆಮಾಡಿದಕೂಡಲೇ ಅವನ ಸಂಕಟಗಳು ಪರಿಹಾರವಾದವೆಂದು ಹೇಳಿರುವದರಿಂದ ಪ್ರತಿಯೊಬ್ಬನೂ ಮಾನವನೇ ಆಗಿದ್ದು ಮನುಕುಲದಲ್ಲಿ ಹುಟ್ಟಿರುವದರಿಂದ, ಮನುವೂ ಸೂರ್ಯಪುತ್ರನಾದ್ದರಿಂದ - ಎಲ್ಲರೂ ಸೂರ್ಯನನ್ನೇ ಉಪಾಸನೆ ಮಾಡಬೇಕೆಂದು ಅಗಸ್ತ್ಯರು ಹೇಳಿದಂತಾಯಿತು.

## ವಿನೋದಕಾಲಕ್ಷೇಪವನ್ನೂ ತತ್ತ್ವವಿಚಾರವನ್ನೂ ಏಕಕಾಲದಲ್ಲಿ ಒದಗಿಸುವ ಕಥೆಗಳು

೧. ವೇದಾಂತಕಥಾವಳಿ: ಇದರಲ್ಲಿ ಇಪ್ಪತ್ತೊಂದು ಪುಟ್ಟ ಕಥೆಗಳಿವೆ. ಒಂದೊಂದು ಕಥೆಯ ಕೆಳಗೂ ಆದರಿಂದ ತಿಳಿದುಕೊಳ್ಳಬೇಕಾದ ತತ್ತ್ವವನ್ನು ಬಹುಸರಳವಾದ ಭಾಷೆಯಲ್ಲಿ ವಿವರಿಸಿದೆ. ವೇದಾಂತವಿಷಯದ ಎಷ್ಟೋ ತಪ್ಪುತಿಳಿವಳಿಕೆಗಳು ಇದನ್ನು ಓದುವದರಿಂದ ಮಾಯವಾಗುವವು. ಮೊದಲನೆಯಸಲಕ್ಕೆ ವೇದಾಂತವನ್ನು ಓದುವವರಿಗೆ ತಕ್ಕದ್ದಾಗಿದೆ.

೨. ವಿಲಕ್ಷಣಮೌನಿ : `ಅರುಣಗಿರಿ'ಯವರು ಬರೆದಿರುವ ಸಂಭಾಷಣರೂಪವಾದ ಕಥೆಯಿದು. ಇದರಲ್ಲಿ ಭೋಜರಾಜನಿಗೆ ಒಬ್ಬ ಮುನಿವರ್ಯರು ಸೂತ್ರರೂಪವಾಗಿ ಉಪದೇಶಿಸಿದ ದಶೋಪನಿಷತ್ತುಗಳ ಮಹಾತಾತ್ಪರ್ಯವನ್ನು ವಿವರಿಸಿದೆ. ಉಪನಿಷತ್ತುಗಳೆಲ್ಲವೂ ಬ್ರಹ್ಮಾತ್ಮೈಕತ್ವಪರವೆಂಬುದನ್ನು ಮನಗಾಣಿಸುವ ಗ್ರಂಥವಿದು.

೩. ಉಪನಿಷತ್ತುಗಳ ಮೊದಲನೆಯ ಪರಿಚಯ: ಉಪನಿಷತ್ತುಗಳಲ್ಲಿರುವ ಕಥಾಸಂದರ್ಭಗಳು; ದೃಷ್ಟಾಂತಗಳು, ಸಿದ್ಧಾಂತ, ಸಾಧನ - ಇಷ್ಟು ವಿಷಯಗಳನ್ನು ಲಲಿತವಾದ ಶೈಲಿಯಲ್ಲಿ ಬರೆದಿದೆ. ಉಪನಿಷತ್ತುಗಳಲ್ಲಿರುವ ವಿಚಾರಕ್ರಮವನ್ನು ಭಾಷ್ಯಸಂಪ್ರದಾಯಾನುಸಾರವಾಗಿ ವಿಚಾರಮಾಡಬೇಕೆಂಬ ಜಿಜ್ಞಾಸುಗಳಿಗೆ ಉತ್ತಮಪುಸ್ತಕವಿದು. ಸ್ತ್ರೀಯರಿಗೂ ಮಕ್ಕಳಿಗೂ ಸಹ ತಿಳಿಯುವಂತಿದೆ.

೪. ಲಕ್ಷಣಶಾಸ್ತ್ರಿ ಉರುಫ್ ಹಸೇನ್ : ಬಂಗಾಳದಲ್ಲಿ ಲಕ್ಷಣಶಾಸ್ತ್ರಿ ಎಂಬುವನು ತರ್ಕವಿದ್ಯಾನೈಪುಣ್ಯವನ್ನು ಪಡೆದು ವಿದ್ಯಾಮದದಿಂದ ಅನೇಕರನ್ನು ಸೋಲಿಸಿದ ನಿಮಿತ್ತ ಹಸೇನ್ ಎಂಬ ಹೆಸರಿನ ಕುದುರೆಯಾಗಿ ದೇಶಾಂತರಗಳಲ್ಲಿ ಅಲೆದದ್ದೇ ಮುಂತಾದ ವಿಚಿತ್ರ ಘಟನೆಗಳಿಂದ ತುಂಬಿದ ಕಥೆ. ತರ್ಕಶಾಸ್ತ್ರಕ್ಕೂ ವೇದಾಂತಕ್ಕೂ ಇರುವ ತಾರತಮ್ಯವನ್ನು ಮನಗಾಣಿಸುವದು.

೫. ಸಮುದ್ರಮಥನ : ದೇವತೆಗಳೂ ರಾಕ್ಷಸರೂ ಕೂಡಿ ಕ್ಷೀರಸಮುದ್ರವನ್ನು ಮಥನಮಾಡಿ ಅಮೃತವನ್ನು ಪಡೆದುಕೊಂಡ ಪೌರಾಣಿಕಕಥೆಯಿದು. ಸಮಯಕ್ಕೆ ತಕ್ಕಂತೆ ನೀತಿಯನ್ನೂ ಅಧ್ಯಾತ್ಮಶಾಸ್ತ್ರದ ಗುಟ್ಟನ್ನೂ ವಿವರಿಸುತ್ತದೆ.

೬. ಶಿವಕವಚ : ಭದ್ರಾಯುವೆಂಬ ರಾಜಕುಮಾರನಿಗೆ ಋಷಭಯೋಗೀಶ್ವರರು ಉಪದೇಶಿಸಿದ ಸ್ತೋತ್ರ. ಭಾವಾರ್ಥ, ವಿವರಣೆ - ಮುಂತಾದವುಗಳೊಡನೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

---

ಅಧ್ಯಾತ್ಮಪ್ರಕಾಶಕಾರ್ಯಾಲಯ
68, 2ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - 560 028. ☎ : 625548

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - 573 211
☎ : 0817573820

# ಕೆಲವು ಸ್ತೋತ್ರಗಳು

೧. **ಗಣೇಶಾಷ್ಟಕ :** ಗಣೇಶಪುರಾಣದಿಂದ ಆರಿಸಿದ ಸ್ತೋತ್ರ, ಪ್ರಪಂಚವೆಲ್ಲವೂ ಬ್ರಹ್ಮವೇ ಎಂಬ ಸಿದ್ಧಾಂತವನ್ನು ಮನೋಹರರೀತಿಯಿಂದ ವಿವರಿಸಿದೆ.

೨. **ಶಿವನಾಮಾಷ್ಟೋತ್ತರಶತಕ :** ಶಿವರಹಸ್ಯದಲ್ಲಿರುವ ಗೌರೀನಾರಾಯಣಸಂವಾದರೂಪವಾದ ಸ್ತೋತ್ರವಿದು. ಅರ್ಥವಿವರಣೆ ಸಹಿತವಾಗಿದೆ. ಅಷ್ಟೋತ್ತರ ಶತನಾಮಾವಳಿಯನ್ನೂ ಕೊಟ್ಟಿದೆ.

೩. **ಶಿವಮಹಿಮ್ನಃ ಸ್ತೋತ್ರ, :** ಶಿವಭಕ್ತರಿಗೆಲ್ಲ ಪ್ರಿಯವಾಗಿರುವ ಪುಷ್ಪದಂತವಿರಚಿತವಾದ ಈ ಸ್ತೋತ್ರವು ಮೂಲ, ಪ್ರತಿಪದಾರ್ಥ, ತಾತ್ಪರ್ಯ, ವಿವರಣೆಗಳೊಡನೆ ಕೂಡಿದೆ.

೪. **ಶಿವಾನಂದಲಹರೀ:** ಹೆಸರಿಗೆ ತಕ್ಕಂತೆ ಭಕ್ತರ ಹೃದಯದಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವ ಈ ಸ್ತೋತ್ರವು ಮೂಲ, ವಿವರಣೆ ಸಮೇತವಾಗಿದೆ.

೫. **ಮೂಲರಾಮಾಯಣಮ್ :** ಶ್ರೀಮದ್ವಾಲ್ಮೀಕಿರಾಮಾಯಣದ ಬಾಲಕಾಂಡದ ಮೊದಲನೆಯ ಸರ್ಗವನ್ನು ಮೂಲ, ಕನ್ನಡ ಅನುವಾದ ಸಮೇತ ಕೊಡಲಾಗಿದೆ. ರಾಮಾಯಣದ ಪೂರ್ಣಕಥೆಯು ಸಂಕ್ಷೇಪವಾಗಿದೆ.

೬. **ಅಧ್ಯಾತ್ಮಗೀತಾವಳಿ:** ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳವರು ತಮ್ಮ ಪೂರ್ವಾಶ್ರಮದಲ್ಲಿ ರಚಿಸಿದ ಕೆಲವು ಅಧ್ಯಾತ್ಮವಿಚಾರ ಬೋಧಕವಾದ ಹಾಡುಗಳ ಸಂಕಲನವೇ "ಅಧ್ಯಾತ್ಮಗೀತಾವಳಿ". ಪೂಜ್ಯಶ್ರೀಗಳವರು ಬೋಧಿಸುತ್ತಿದ್ದ ಸರಳ ಶಂಕರವೇದಾಂತಪ್ರಕ್ರಿಯೆಯ ಮರ್ಮವನ್ನೆಲ್ಲ ಹಾಡುಗಳ ರೂಪದಿಂದ ಇಲ್ಲಿ ಅಳವಡಿಸಲಾಗಿದೆ. ಅರ್ಥಗರ್ಭಿತವಾಗಿಯೂ ಮತ್ತು ಜ್ಞಾನಭಕ್ತಿಗಳ ಸಂಗಮವುಳ್ಳದ್ದಾಗಿಯೂ ಸಂಗೀತ ಮಾಧ್ಯಮಕ್ಕೆ ಅಳವಡಿಸಿಕೊಳ್ಳಲು ಅನುಕೂಲವಾಗಿದೆ.

೭. **ಆತ್ಮಬೋಧ :** ಆತ್ಮನು ನಿತ್ಯಶುದ್ಧಬುದ್ಧಮುಕ್ತ ಸ್ವಭಾವನೆಂಬುದನ್ನು ಬಗೆ ಬಗೆಯ ಉಪಮಾನಗಳಿಂದ ತಿಳಿಸಿದೆ.

೮. **ಸವಾರ್ತಿಕಪಂಚೀಕರಣ :** ಪಂಚೀಕರಣಕ್ಕೂ ವಾರ್ತಿಕಕ್ಕೂ ಭಾವಾರ್ಥವನ್ನು ಕೊಟ್ಟು ಟಿಪ್ಪಣಿಗಳಲ್ಲಿ ವಿಚಾರಪ್ರಚೋದಕವಾದ ಅನೇಕ ವಿಷಯಗಳನ್ನು ಸೇರಿಸಿದೆ.

೯. **ದೃಗ್ದೃಶ್ಯವಿವೇಕ :** ದೃಕ್‌ಸ್ವರೂಪನಾಗಿರುವ ಪ್ರತ್ಯಗಾತ್ಮನಲ್ಲಿಯೇ ಮನಸ್ಸಿಡಬೇಕೆಂದು ತಿಳಿಸುವ ಪ್ರಕರಣ ; ಭಾವಾರ್ಥಸಮೇತವಾಗಿದೆ.

೧೦. **ಸ್ವಾತ್ಮಪ್ರಕಾಶಿಕೆ :** ನಮ್ಮ ಆತ್ಮನಲ್ಲಿ ಯಾವ ಸಂಸಾರದ ನೆಲೆಯೂ ಇಲ್ಲವೆಂಬುದನ್ನು ಮನಸ್ಸಿಗೆ ತಂದುಕೊಳ್ಳುವದಕ್ಕೆ ಇಲ್ಲಿ ಒಳ್ಳೊಳ್ಳೆಯ ವಿಚಾರತರಂಗಗಳಿವೆ.

ಪುಸ್ತಕಗಳ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿರಿ.

---

ಕಾರ್ಯದರ್ಶಿ,

**ಅಧ್ಯಾತ್ಮಪ್ರಕಾಶಕಾರ್ಯಾಲಯ,**

ಹೊಳೆನರಸೀಪುರ- 573211

(ಹಾಸನ ಜಿಲ್ಲೆ, ಕರ್ನಾಟಕ ಸಂಸ್ಥಾನ)